ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 17 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 2 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೇ ಮೊದಲ ವಾರ ಎಸ್‌ಎಸ್‌ಎಲ್‌ಸಿ ಫಲಿತಾಂಶ

ಬೆಂಗಳೂರು, ಏ.16– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಮೇ ಮೊದಲ ವಾರದಲ್ಲಿ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.


ಈಗಾಗಲೇ ಮೌಲ್ಯಮಾಪನ ಆರಂಭವಾಗಿದೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ– 1 ರಲ್ಲಿ 8,96,447 ವಿದ್ಯಾರ್ಥಿಗಳು ಹಾಜರಾಗಿದ್ದರು. 15,881 ಶಾಲೆಗಳ ವಿದ್ಯಾರ್ಥಿಗಳು 2,818 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದರು. ಈ ವರ್ಷ ಇನ್ನೂ 2 ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು (ಪರೀಕ್ಷೆ–2 ಮತ್ತು ಪರೀಕ್ಷೆ–3) ನಡೆಯಲಿವೆ. ಉತ್ತೀರ್ಣರಾಗದಿದ್ದರೆ ಅಥವಾ ಉತ್ತಮ ಅಂಕ ಲಭಿಸದಿದ್ದರೆ ವಿದ್ಯಾರ್ಥಿಗಳಿಗೆ ಇನ್ನೂ ಎರಡು ಅವಕಾಶಗಳಿವೆ. ಈ ಪರೀಕ್ಷೆಗಳು ಜೂನ್ ಮತ್ತು ಜುಲೈನಲ್ಲಿ ನಡೆಯುವ ಸಾಧ್ಯತೆ ಇದೆ.

ಒಂದನೇ ತರಗತಿ ಪ್ರವೇಶಕ್ಕೆ ಈ ಬಾರಿ 5 ವರ್ಷ 5 ತಿಂಗಳು ವಯೋಮಿತಿ

ಬೆಂಗಳೂರು,ಏ.16(ಕೆಎಂಶಿ)–5 ವರ್ಷ 5 ತಿಂಗಳು ತುಂಬಿದ ಮಕ್ಕಳು ಒಂದನೇ ತರಗತಿಗೆ ಪ್ರವೇಶ ಪಡೆಯಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪೋಷಕರ ಒತ್ತಡಕ್ಕೆ ಮಣಿದು 6 ವರ್ಷ ವಯೋಮಿತಿಯನ್ನು 5 ವರ್ಷ 5 ತಿಂಗಳಿಗೆ ಇಳಿಸಲಾಗಿದೆ. ಈ ರಿಯಾಯಿತಿ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯ ಎಂದರು. ಎಲ್‌ಕೆಜಿ, ಯುಕೆಜಿ ಅಭ್ಯಾಸ ಮಾಡಿದ ಮಕ್ಕಳಿಗೆ ಮಾತ್ರ 1ನೇ ತರಗತಿ ಪ್ರವೇಶಕ್ಕೆ ಅವಕಾಶ, ನಿಗದಿತ ವಯೋಮಿತಿ ಇರಲೇಬೇಕು. ವಯೋಮಿತಿ ವಿಚಾರದಲ್ಲಿ ಪೋಷಕರು ಗೊಂದಲದಲ್ಲಿದ್ದಾರೆ. ರಾಷ್ಟ್ರದ ಎಲ್ಲಾ ಕಡೆ ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ವಯೋಮಿತಿ ಇದೆ. 2 ತಿಂಗಳ ಸಡಿಲಿಕೆಗೆ ಮಾತ್ರ ನಮಗೆ ಅವಕಾಶ ಇದೆ. ಸರ್ಕಾರ ಈಗಾಗಲೇ ತೀರ್ಮಾನಿಸಿರುವಂತೆ 1ನೇ ತರಗತಿ ಸೇರಲು 6 ವರ್ಷ ಪೂರ್ಣಗೊಂಡಿರುವುದು ಕಡ್ಡಾಯವಾಗಿದ್ದು, ಇದು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ ಎಂದರು.

ನೀವ್ ಹೀಗೆ ಕಿತ್ತಾಡಿದರೆ ಮೋದಿ ಸರ್ಕಾರ ಬೀಳಿಸ್ತಾರೆ!

ವೇದಿಕೆ ಮೇಲೆಯೇ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿಗೆ ಖರ್ಗೆ ಎಚ್ಚರಿಕೆ



ಕಲಬುರಗಿ, ಏ.16– ನಿಮ್ಮ ಸರ್ಕಾರವನ್ನು ಬೀಳಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮುಂದಾಗಿದ್ದಾರೆ. ನೀವು, ನೀವೇ ಕಿತ್ತಾಡಿಕೊಳ್ಳುತ್ತಿದ್ದರೆ ಸರ್ಕಾರವನ್ನು ಮುಗಿಸುತ್ತಾರೆ, ಹುಷಾರಾಗಿರಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ವೇದಿಕೆ ಮೇಲೆಯೇ ಬಹಿರಂಗವಾಗಿ ಎಚ್ಚರಿಕೆ ನೀಡಿದ್ದಾರೆ.

ಕಲಬುರಗಿಯಲ್ಲಿ ನಡೆದ ವಿಭಾಗ ಮಟ್ಟದ ಉದ್ಯೋಗ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ತೆಗೆಯಲು ಪ್ಲ್ಯಾನ್ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ನಿಮ್ಮ ಸರ್ಕಾರವನ್ನು ಬೀಳಿಸುತ್ತಾರೆ. ನಿಮ್ಮಲ್ಲಿ ಏನೇ ಮನಸ್ತಾಪ ಇದ್ದರೂ ಒಗ್ಗಟ್ಟಾಗಿರಬೇಕು. ನೀವು ಹುಷಾರಾಗಿರಬೇಕು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರು ಕಲ್ಯಾಣ ಕರ್ನಾಟಕಕ್ಕೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ, ಮಾಡುವುದೂ ಇಲ್ಲ. ಏಕೆಂದರೆ ನಾನು 1 ವರ್ಷದಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳನ್ನು ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಕಳೆದ 10 ವರ್ಷಗಳಿಂದ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕಡೇಚೂರಿನಲ್ಲಿ ರೈಲು ಬೋಗಿ ಕಾರ್ಖಾನೆ ನಿರ್ಮಾಣಕ್ಕಾಗಿ ಉಚಿತವಾಗಿ ಜಾಗ, ನೀರು, ವಿದ್ಯುತ್ ನೀಡಿದರೂ ಮೋದಿ ಸರ್ಕಾರ ಅನುದಾನ ಬಿಡುಗಡೆ ಮಾಡದೆ ನಿರ್ಲಕ್ಷಿಸುತ್ತಿದೆ. ■6ನೇ ಪುಟಕ್ಕೆ

ಇದು ಜಾತಿಗಣತಿಯಲ್ಲ, ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ

ಯಾರಿಗೂ ಅನ್ಯಾಯವಾಗಲು ಬಿಡಲ್ಲ; ಮುಖ್ಯಮಂತ್ರಿ ಸಿದ್ದರಾಮಯ್ಯ



ಕಲಬುರಗಿ,ಏ.16–ಇದು ಜಾತಿಗಣತಿ ಅಲ್ಲ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಇದರಿಂದ ಯಾರಿಗೂ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹೇಳಿದ್ದಾರೆ.

ವಿಭಾಗ ಮಟ್ಟದ ಉದ್ಯೋಗ ಮೇಳದ ಉದ್ಘಾಟನೆ ಸಮಾರಂಭದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ಸಭೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಚಿವರಿಗೆ ಅವಕಾಶ ನೀಡಲಾಗುವುದು. ಇದು ಜಾತಿಗಣತಿ ಅಲ್ಲ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಅಷ್ಟೇ. ಆದರೂ, ಯಾರಿಗೂ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ. ಒಕ್ಕಲಿಗ ಸಮುದಾಯದ ಸಚಿವರು, ಶಾಸಕರ ಅಭಿಪ್ರಾಯಗಳನ್ನೂ ಆಲಿಸಲಾಗುವುದು ಎಂದು ಹೇಳಿದರು. ನಾಳೆ ಸಾಮಾಜಿಕ, ಆರ್ಥಿಕ ಸಮೀಕ್ಷೆಯ ಕುರಿತು ಪ್ರತ್ಯೇಕವಾಗಿ ಸಚಿವ ಸಂಪುಟ ಸಭೆಯನ್ನು ಕರೆಯಲಾಗಿದ್ದು, ಈ ಬಗ್ಗೆ ಚರ್ಚೆ ಮಾಡಲಾಗುವುದು. ಶಾಸಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂತಿಮವಾಗಿ ತೀರ್ಮಾನ ಮಾಡಲಾಗುವುದು ಎಂದರು.

ಜಾತಿಗಣತಿ ವರದಿ ರಗಳೆ: ಇಂದು ವಿಶೇಷ ಸಂಪುಟ ಸಭೆ

ಪರಿಶೀಲನಾರ್ಥ ಸಂಪುಟ ಉಪ ಸಮಿತಿ ಇಲ್ಲವೆ ತಜ್ಞರ ಸಮಿತಿ ರಚನೆ ಸಾಧ್ಯತೆ

ಬೆಂಗಳೂರು, ಏ.16(ಕೆಎಂಶಿ)– ಜಾತಿಗಣತಿ ಅಂಕಿ–ಸಂಖ್ಯೆಗಳ ಗೊಂದಲ ನಿವಾರಿಸಲು ಸಚಿವ ಸಂಪುಟದ ಉಪಸಮಿತಿ, ಇಲ್ಲವೆ ಮುಖ್ಯಕಾರ್ಯದರ್ಶಿಗಳ ನೇತೃತ್ವದಲ್ಲಿ ತಜ್ಞರ ಸಮಿತಿ ರಚನೆ ಬಗ್ಗೆ ನಾಳೆ ನಡೆಯುವ ವಿಶೇಷ ಮಂತ್ರಿಮಂಡಲ ಸಭೆಯಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲು ಉದ್ದೇಶಿಸಿದೆ.



ಕಾಂತರಾಜ್ ಹಾಗೂ ಜಯಪ್ರಕಾಶ್ ಹೆಗಡೆ ಅವರು ನೀಡಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷಾ ವರದಿ ಬಗ್ಗೆ ಚರ್ಚಿಸಿ ಸರ್ಕಾರದ ಮುಂದಿನ ನಡೆಯ ತೀರ್ಮಾನ ಕೈಗೊಳ್ಳಲೆಂದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಸಂಜೆ ವಿಶೇಷ ಸಂಪುಟ ಸಭೆ ಕರೆದಿದ್ದಾರೆ. ಆಯೋಗ ನೀಡಿರುವ ಅಂಕಿ–ಅಂಶಗಳು ಬಯಲಾದ ನಂತರ ಅನೇಕ ಬದಲಾವಣೆಗಳಾಗಿವೆ. ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸೇರಿದಂತೆ ಮುಂದುವರೆದ ಜಾತಿಗಳು ವರದಿಯನ್ನು ತಿರಸ್ಕರಿಸಿವೆ. ವರದಿ ಅನುಷ್ಠಾನಕ್ಕೆ ಹೊರಟರೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ ಎಂದು ಈ ಸಮುದಾಯಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿರುವುದಲ್ಲದೆ, ಬೀದಿಗಿಳಿದು ಹೋರಾಟ ಮಾಡುವುದಾಗಿಯೂ ತಿಳಿಸಿವೆ.

ಇದರ ನಡುವೆ ಆಡಳಿತದಲ್ಲಿನ ವೀರಶೈವ/ಲಿಂಗಾಯತ ಸಮುದಾಯದ ಸಚಿವರು ಮತ್ತು ಶಾಸಕರು ಪ್ರತ್ಯೇಕ ಸಭೆಗಳನ್ನು ನಡೆಸಿ ತಮ್ಮ ನಿಲುವನ್ನು ಸಂಪುಟದ ಮುಂದಿಡಲು ತೀರ್ಮಾನಿಸಿದ್ದಾರೆ. ಯಾರು ಏನೇ ಮಾಡಿದರೂ ಮುಖ್ಯಮಂತ್ರಿ ಅವರು ಅಂತಿಮವಾಗಿ ಯಾವ ತೀರ್ಮಾನ ಕೈಗೊಳ್ಳುತ್ತಾರೋ, ಅದೇ ಸಂಪುಟದ ನಿರ್ಣಯವಾಗಲಿದೆ. ವರದಿ ವಿರೋಧಿಸುವ ಸಚಿವರು ಸಭೆಯಲ್ಲಿ ತಮ್ಮ ಅಭಿಪ್ರಾಯ ತಿಳಿಸಬಹುದೇ ಹೊರತು, ಹೀಗೇ ಮಾಡಿ ಎಂದು ■6ನೇ ಪುಟಕ್ಕೆ

ಹಿಂದುಳಿದವರ ಫಲವ ಒಂದೇ ಸಮುದಾಯ ಅನುಭವಿಸುತ್ತಾ ಬಂದಿದೆ...

2ಎ ಪ್ರವರ್ಗದಲ್ಲಿ ಅತೀ ಹೆಚ್ಚು ಬೆಣ್ಣೆ ತಿಂದವರ್‍ಯಾರು; ಶ್ವೇತಪತ್ರ ಹೊರಡಿಸುವಂತೆ ಸಿಎಂ ಸಿದ್ದರಾಮಯ್ಯಗೆ ಕೇಂದ್ರ ಸಚಿವ ಕುಮಾರಸ್ವಾಮಿ ಮಾರ್ಮಿಕ ಆಗ್ರಹ



ಬೆಂಗಳೂರು, ಏ.16(ಕೆಎಂಶಿ)– ಹಿಂದುಳಿದವರ ಹೆಸರಿನಲ್ಲಿ ತಮ್ಮ ಸಮುದಾಯಕ್ಕೆ ಅತೀ ಹೆಚ್ಚು ಪಾಲು ಬೆಣ್ಣೆ ತಿನ್ನಿಸಿ, ಬೇರೆಯವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಮ ಹಾಕಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ. 2ಎ ಪ್ರವರ್ಗದಲ್ಲಿ ಅತೀ ಹೆಚ್ಚು ಬೆಣ್ಣೆ ತಿಂದಿರುವವರು ಯಾರೆಂಬ ಕುರಿತು ಶ್ವೇತಪತ್ರ ಹೊರಡಿಸಿ, ಅತೀ ಹಿಂದುಳಿದ 2ಎ ಪ್ರವರ್ಗದಲ್ಲಿ ಸಿಂಹಪಾಲು ಯಾರು ಪಡೆದಿದ್ದಾರೆ ಎಂಬ ದಾಖಲೆಗಳನ್ನು ಬಹಿರಂಗಪಡಿಸುವಂತೆ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಕುಮಾರಸ್ವಾಮಿ, 2ಎ ಪ್ರವರ್ಗದಲ್ಲಿ 101 ಜಾತಿಗಳಿವೆ, 15% ಮೀಸಲು ಪಾಲು ಇದೆ. ಹೆಚ್ಚು ನುಂಗಿದವರು ಯಾರು ದೇವರು.., ಎಂದು ಸಿದ್ದರಾಮಯ್ಯ ■6ನೇ ಪುಟಕ್ಕೆ

ಮುಡಾ ಹಗರಣ: ಸಿಬಿಐ ತನಿಖೆ ಕೋರಿ ಅರ್ಜಿ

ಸಿದ್ದರಾಮಯ್ಯ, ಅವರ ಪತ್ನಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು,ಏ.16–ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ನಿವೇಶನ ಹಂಚಿಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ನಿರ್ದೇಶನ ಕೋರಿ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಶ್ರೀಮತಿ ಪಾರ್ವತಿ ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿದೆ.

ಮುಡಾದಿಂದ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ 14 ನಿವೇಶನಗಳನ್ನು ಅಕ್ರಮ ಹಂಚಿಕೆ ಬಗ್ಗೆ ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ಈಗಾಗಲೇ ಕೋರ್ಟ್‌ಗೆ ಬಿ ರಿಪೋರ್ಟ್ ಸಲ್ಲಿಸಿದ್ದಾರೆ. ಆದರೆ, ಲೋಕಾಯುಕ್ತ ಪಾರದರ್ಶಕ ತನಿಖೆ ನಡೆಸಿಲ್ಲ ಎಂದು ಆರೋಪಿಸಿರುವ ಸ್ನೇಹಮಯಿ ಕೃಷ್ಣ, ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕೆಂದು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ಪೀಠ ಫೆಬ್ರವರಿ 7ರಂದು ತಿರಸ್ಕರಿಸಿತ್ತು. ಈ ಆದೇಶ ಪ್ರಶ್ನಿಸಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲಾಗಿದೆ.

ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಸಿದ್ದರಾಮಯ್ಯ, ಪತ್ನಿ ಪಾರ್ವತಿ ಹಾಗೂ ಇತರರಿಗೆ ನೋಟಿಸ್ ನೀಡಿದ್ದು, ಏ.28ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಮೈಸೂರಿನ ಕುಕ್ಕರಹಳ್ಳಿ ಕೆರೆ ಕಾಯಕಲ್ಪಕ್ಕೆ ಹೊಸ ಯೋಜನೆ

ಗ್ರಾಹಕ ಪರಿಷತ್, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

- ಕ್ರಿಯಾ ಯೋಜನೆ ರೂಪಿಸಲು ತೀರ್ಮಾನ
- ಕಲುಷಿತ ನೀರು ತಡೆಗೆ ಮೊದಲ ಆದ್ಯತೆ
- ಒಳಚರಂಡಿ ನೀರಿನ ಮಾದರಿ ಸಂಗ್ರಹಕ್ಕೆ ನಿರ್ಧಾರ
- ಗ್ರಾಹಕ ಪರಿಷತ್ ಹೋರಾಟಕ್ಕೆ ಜನ ಬೆಂಬಲ ಅವಶ್ಯ





ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ನೇತೃತ್ವದ ಮೈಸೂರು ಗ್ರಾಹಕ ಪರಿಷತ್ ತಂಡ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಬುಧವಾರ ಕುಕ್ಕರಹಳ್ಳಿ ಕೆರೆಗೆ ಭೇಟಿ ನೀಡಿ, ಪರಿಶೀಲಿಸಿ ಚರ್ಚೆ ನಡೆಸಿದರು.

ಮೈಸೂರು, ಏ.16(ಬಿಎಲ್‌ಯು)– ಮೈಸೂರು ನಗರದ ಪರಂಪರೆಯ ಭಾಗ ಹಾಗೂ ಜಲ ಜೀವನಾಡಿ ಕುಕ್ಕರಹಳ್ಳಿ ಕೆರೆಗೆ ಒಳಚರಂಡಿ ನೀರು ಸೇರುವುದನ್ನು ತಡೆಗಟ್ಟಲು ಮೈಸೂರು ಗ್ರಾಹಕ ಪರಿಷತ್ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಿಯಾ ಯೋಜನೆ ರೂಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕ ಪರಿಷತ್ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಬುಧವಾರ ಸ್ಥಳ ಪರಿಶೀಲನೆಯೊಂದಿಗೆ ಚರ್ಚೆ ನಡೆಸಿದರು.

ಪಡುವಾರಹಳ್ಳಿ, ವಾಲ್ಮೀಕಿ ರಸ್ತೆಯ ಮಹಾರಾಣಿ ಕಾಲೇಜು, ಜಯಲಕ್ಷ್ಮಿಪುರಂ ಸೇರಿದಂತೆ ಇತರೆ ಬಡಾವಣೆಗಳ ಒಳಚರಂಡಿ ನೀರು ನೇರವಾಗಿ ಕುಕ್ಕರಹಳ್ಳಿ ಕೆರೆಗೆ ಹರಿಯುತ್ತಿದೆ. ಕೆರೆ ಕಲುಷಿತಗೊಂಡಿರುವ ಹಿನ್ನೆಲೆಯಲ್ಲಿ ಮೀನುಗಳ ಮಾರಣ ಹೋಮ ನಡೆದು ಹೋಗುತ್ತಿದೆ. ಇಷ್ಟೆಲ್ಲಾ ಆದರೂ ಇದಕ್ಕೆ ಜವಾಬ್ದಾರರಾಗಿರುವ ಮೈಸೂರು ನಗರಪಾಲಿಕೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಮೌನ ವಹಿಸಿದೆ.

ಒಳಚರಂಡಿ ನೀರು ಹರಿಯುವುದನ್ನು ತಡೆಗಟ್ಟಿದರೆ ಕೆರೆ ಕಲುಷಿತತೆಯಿಂದ ಸಾಕಷ್ಟು ಮುಕ್ತವಾಗುತ್ತದೆ. ಆದರೆ ಈ ತನಕ ಅಧಿಕಾರಕ್ಕೆ ಬಂದ ಯಾವ ರಾಜಕೀಯ ಪಕ್ಷಗಳ ಸರ್ಕಾರ ಹಾಗೂ ಮೈಸೂರಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ■6ನೇ ಪುಟಕ್ಕೆ

ಐತಿಹಾಸಿಕ ಈ ಕೆರೆಯ ವೈಶಿಷ್ಟ್ಯತೆ

ರಾಷ್ಟ್ರಕವಿ ಕುವೆಂಪು ಅವರ ಬರವಣಿಗೆಗೆ ಕುಕ್ಕರಹಳ್ಳಿ ಕೆರೆ ಸ್ಫೂರ್ತಿಯ ನೆಲೆಯಾಗಿತ್ತು. ಮನೆಯಿಂದ ಆಗಾಗೆ ವಾಯುವಿಹಾರಕ್ಕೆ ಬರುತ್ತಿದ್ದ ಕುವೆಂಪು ಅವರು ಕೆರೆಯ ಪ್ರಾಕೃತಿಕ ಸೌಂದರ್ಯದ ಸ್ಫೂರ್ತಿಯಿಂದ ಕಥೆ, ಕವನ, ಕಾದಂಬರಿಗಳ ರಚಿಸಿದ್ದರು. ಇಂತಹ ಕುಕ್ಕರಹಳ್ಳಿ ಕೆರೆ ಇಂದು ಕಲುಷಿತವಾಗಿದೆ. ಒಳಚರಂಡಿ ನೀರು ಕೆರೆ ಸೇರಿ ಗಬ್ಬು ನಾರುತ್ತಿದೆ.

ಸಾವಿರಾರು ಪ್ರಾಣಿ–ಪಕ್ಷಿ, ಜಲಚರಗಳಿಗೆ ನೆಲೆಯಾಗಿದ್ದ ಕುಕ್ಕರಹಳ್ಳಿ ಕೆರೆ ತನ್ನ ಸೊಬಗು ಕಳೆದುಕೊಳ್ಳುತ್ತಾ ಸಾಗಿದೆ. ಈಗ ಕೆರೆ ಹತ್ತಿರ ಹೋದರೆ ಗಬ್ಬು ನಾರುತ್ತಿದೆ.

ಮೈಸೂರು ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್, ನಗರದ ಸುತ್ತಮುತ್ತಲಿನ 10,000 ಎಕರೆಗೆ ನೀರೊದಗಿಸಲು 1864ರಲ್ಲಿ ಕುಕ್ಕರಹಳ್ಳಿ ಕೆರೆ ನಿರ್ಮಾಣ ಮಾಡಿದ್ದರು. 414 ಚದರ ಕಿಲೋಮೀಟರ್ ಜಲಾನಯನ ಪ್ರದೇಶ ಹೊಂದಿರುವ ಕುಕ್ಕರಹಳ್ಳಿ ಕೆರೆಯ ಜಲಮೂಲ 150 ಎಕರೆಗೆ ವ್ಯಾಪಿಸಿತ್ತು. ಹಿನಕಲ್, ಬೋಗಾದಿ, ಕುದುರೆಮಾಳ, ಮಾನಸಗಂಗೋತ್ರಿ ಸೇರಿದಂತೆ ಇತರ ಪ್ರದೇಶದಿಂದ ಮಳೆ ನೀರು ಕುಕ್ಕರಹಳ್ಳಿ ಕೆರೆಗೆ ಹರಿದು ಬರುತ್ತಿದೆ. ಇದಕ್ಕಾಗಿ ರಾಜರ ಕಾಲದಲ್ಲಿ ■6ನೇ ಪುಟಕ್ಕೆ

ಅಂಬೇಡ್ಕರ್, ಲೋಹಿಯಾ ಚಿಂತನೆಗಳ ಹೊರಗಿಟ್ಟು ಸಾಹಿತ್ಯ ರಚಿಸಲಾಗದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿಮತ



ರೋಟರಿ ಸಭಾಂಗಣದಲ್ಲಿ ಸೆಸ್ಕ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕೆ.ಕೆ.ಲಕ್ಷ್ಮೀಶ, ನೃತ್ಯ ಮತ್ತು ಸಂಗೀತ ವಿದುಷಿ ಡಾ.ಚೈತ್ರಾ ಬಿಳಿಗಿರಿ, ರಾಜ್ಯ ಮಟ್ಟದ ಪ್ಯಾರಾ ಅಥ್ಲೀಟ್ ಬಿ.ಭಾರತಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.16(ಎಂಟಿವೈ)–ಡಾ.ಅಂಬೇಡ್ಕರ್ ಹಾಗೂ ರಾಮಮನೋಹರ್ ಲೋಹಿಯಾ ಅವರ ಚಿಂತನೆಗಳನ್ನು ಹೊರಗಿಟ್ಟು ನಾವು ಸಾಹಿತ್ಯ ರಚಿಸಲು ಸಾಧ್ಯವಿಲ್ಲ ಎಂದು ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಇಪ್ಪತ್ತನೇ ಶತಮಾನದಲ್ಲಿ ಎಲ್ಲಾ ಬರಹಗಳು ರಾಜಕಾರಣವನ್ನು ಹೊಂದಿರುತ್ತದೆ ಎಂಬ ಅಭಿಪ್ರಾಯವಿದೆ. ಈ ಹಿನ್ನೆಲೆಯಲ್ಲಿ ವರ್ತಮಾನದಲ್ಲಿ ರಾಜಕಾರಣವನ್ನು ಒಳಗೊಳ್ಳದ ಬರಹ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರು.

ಭಾಷೆಯ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ಅದನ್ನು ರಕ್ಷಿಸುವಂಥ ರಕ್ಷಣಾ ಪಡೆಯೂ ಬೇಕು. ಸಾಹಿತ್ಯ ರಚಿಸಿ, ಭಾಷೆಯ ಅಂತಶ್ಚೈತನ್ಯವನ್ನು ವೃದ್ಧಿಸುವ ಕವಿ– ಸಾಹಿತಿಗಳು ಬೇಕು. ಲೇಖಕರು ಹಾಗೂ ಹೋರಾಟಗಾರರು ಒಂದು ಭಾಷೆ ಮತ್ತು ಸಂಸ್ಕೃತಿಯ ಎರಡು ಕಣ್ಣುಗಳಿದ್ದಂತೆ. ಆದ್ದರಿಂದ ನಾವೆಲ್ಲರೂ ಕನ್ನಡದ ರಕ್ಷಣೆಗಾಗಿ ದೀಕ್ಷೆ ತೊಟ್ಟು, ಹೋರಾಟಗಾರರ ಕೈ ಬಲಪಡಿಸಬೇಕಾಗಿದೆ ಎಂದು ತಿಳಿಸಿದರು.

ಕವಿ ಜಯಪ್ಪ ಹೊನ್ನಾಳಿ ಮಾತನಾಡಿ, ಮಹಿಳೆಯರು ಹಾಗೂ ಅಂಬೇಡ್ಕರ್ ಈ ಇಬ್ಬರಲ್ಲೂ ತಾಯ್ತನ ಇದೆ. ಅಂಬೇಡ್ಕರ್ ಬೇರೆಯಲ್ಲ, ತಾಯ್ತನ ಬೇರೆಯಲ್ಲ. ಮಹಿಳೆಯರು ಹಾಗೂ ಶೂದ್ರರಿಗೆ ಧ್ವನಿ ಕೊಟ್ಟರು. ಅವರು ಮಾತೃ ಹೃದಯದಿಂದ ಎಲ್ಲರಿಗೂ ಬದುಕುವ ಹಾಗೂ ಸಮಾನತೆಯ ಹಕ್ಕು ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಯುವ ಮುಖಂಡ ವಿ.ಕವೀಶ್‌ಗೌಡ ಮಾತನಾಡಿ, ಎಲ್ಲರಿಗೂ ಸಮಾನ ಹಕ್ಕು ಮತ್ತು ಅವಕಾಶವನ್ನು ಕೊಟ್ಟವರು ಡಾ.ಬಿ.ಆರ್. ಅಂಬೇಡ್ಕರ್. ಸಂವಿಧಾನದಿಂದ ನಮಗೆ ಅನುಕೂಲವಾಗಿದ್ದರೂ ಅದರ ಆಶಯಗಳನ್ನು ಸಂಪೂರ್ಣವಾಗಿ ಜಾರಿ ಮಾಡುವಲ್ಲಿ ಸ್ವಲ್ಪ ಹಿಂದುಳಿದಿದ್ದೇವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಬುದ್ಧ, ಬಸವಣ್ಣ ನಂತರ ಅಂಬೇಡ್ಕರ್ ಅವರು ಮಹಿಳೆಯರಿಗೆ ಸಮಾನತೆಗಾಗಿ ಶ್ರಮಿಸಿದವರು. ಹೀಗಾಗಿ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ವಹಿಸಿದ್ದರು. ವೇದಿಕೆಯ ಜಿಲ್ಲಾಧ್ಯಕ್ಷೆ ಆರ್.ಮಂಜುಳಾ, ಕನ್ನಡ ಅಭಿಮಾನಿ ಬಳಗದ ಕೃಷ್ಣಪ್ಪ, ಕರವೇ ಶ್ರೀನಿವಾಸ್, ರೈತ ಸಂಘದ ಕೃಷ್ಣೇಗೌಡ, ವಿವಿಧ ಸಂಘಟನೆಗಳ ಸೋಮೇಗೌಡ, ಮಹೇಶ್ ಕುಮಾರ್, ಶಿವಕುಮಾರ್, ಮುಖಂಡ ರಂಗಪ್ಪ ಇನ್ನಿತರರು ಉಪಸ್ಥಿತರಿದ್ದರು.

ಕೈಗಾರಿಕಾಭಿವೃದ್ಧಿಗೆ ಮೈಸೂರಿನ ಕೋಚನಹಳ್ಳಿಯ 400 ಎಕರೆ ಭೂಸ್ವಾಧೀನ

ದರ ನಿಗದಿ ಸಂಬಂಧ ಇಂದು ಕರೆದಿದ್ದ ಸಭೆ ಮುಂದೂಡಿಕೆ

ಮೈಸೂರು, ಏ.16(ಬಿಎಲ್‌ಯು)– ಕೈಗಾರಿಕಾಭಿವೃದ್ಧಿಗಾಗಿ ಮೈಸೂರಿನ ಕೋಚನಹಳ್ಳಿ ಗ್ರಾಮದ 400 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಂಡಿದ್ದು, ಅದರ ದರ ನಿಗದಿಗೆ ಕರ್ನಾಟಕ ಕೈಗಾರಿಕಾ ಪ್ರವೇಶಾಭಿವೃದ್ಧಿ ಮಂಡಳಿ ನಾಳೆ (ಏ.17) ಕರೆದಿದ್ದ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೂಡಿದ್ದಾರೆ.



ಸಿದ್ದರಾಮಯ್ಯ ಪ್ರತಿನಿಧಿಸುತ್ತಿರುವ ವರುಣ ಕ್ಷೇತ್ರದ ಕೋಚನಹಳ್ಳಿ ಗ್ರಾಮದ 403.10 ಎಕರೆ ಜಮೀನನ್ನು ಈಗಾಗಲೇ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ರೈತರಿಗೆ ಇನ್ನು ಪರಿಹಾರ ನೀಡಿಲ್ಲದ ಕಾರಣ ದರ ನಿಗದಿಗೆ ಕೆಐಎಡಿಬಿ ನಾಳೆ ಮೈಸೂರಿನ ಕರ್ನಾಟಕ ಕೃಷಿ ಮಾರಾಟ ಅಧ್ಯಯನ ಸಂಸ್ಥೆಯಲ್ಲಿ ರೈತರ ಸಭೆ ಕರೆದಿತ್ತು.

ಕೆಐಎಡಿಬಿಯ ವಿಶೇಷ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಗೆ ಹಾಜರಾಗುವಂತೆ ಸ್ವಾಧೀನವಾಗಿರುವ ಭೂಮಿಯ ಮಾಲೀಕರಾದ ರೈತರಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಆದರೆ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ದರ ನಿಗದಿ ಮಾಡುವ ಬಗ್ಗೆ ಯಾವುದೇ ಸ್ಪಷ್ಟತೆ ನೀಡದೆ ಏಕಾಏಕಿ ಸಭೆ ಕರೆದಿರುವುದು ರೈತರಲ್ಲಿ ಆತಂಕ ಉಂಟುಮಾಡಿತ್ತು. ಈ ಹಿನ್ನೆಲೆಯಲ್ಲಿ ತಮ್ಮ ಗ್ರಾಮಕ್ಕೆ ಬಂದಿದ್ದ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರಲ್ಲಿ ರೈತರು ತಮ್ಮ ಅಳಲು ತೋಡಿಕೊಂಡರು.

ರೈತರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಯತೀಂದ್ರ, ಮಂಗಳವಾರ (ನಿನ್ನೆ) ಬೆಂಗಳೂರಿಗೆ ಬರುವಂತೆ ಸಲಹೆ ನೀಡಿದ್ದರು. ಅದರಂತೆ ಕೋಚನಹಳ್ಳಿ ಗ್ರಾಮದ ರೈತರು ತಂಡ ಬೆಂಗಳೂರಿಗೆ ಹೋಗಿ ಮೊದಲು ಯತೀಂದ್ರ ಅವರನ್ನು ಭೇಟಿ ಮಾಡಿದರು.

ತರುವಾಯ ಅವರ ಜೊತೆ ಸಿದ್ದರಾಮಯ್ಯ ಅವರ ಭೇಟಿಗೆ ತೆರಳಿದರು. ಆ ವೇಳೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಜಮೀನು ಸ್ವಾಧೀನದಿಂದ ಕೈ ಬಿಟ್ಟು, ನಮ್ಮ ಭೂಮಿ ರಕ್ಷಿಸಿ ಕೊಡಿ ಎಂದು ರೈತರು ಮನವಿ ಮಾಡಿದರು.

ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ದರ ನಿಗದಿ ಮಾತ್ರ ಬಾಕಿ ಇದೆ. ಆದ ಕಾರಣ ನಿಮ್ಮ ಜಮೀನನ್ನು ಭೂಸ್ವಾಧೀನದಿಂದ ಕೈ ಬಿಡಲು ಆಗಲ್ಲ ಎಂದು ಸ್ಪಷ್ಟಪಡಿಸಿದರು.

ಈಗಾಗಲೇ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅಲ್ಲಿನ ರೈತರಿಗೆ ಪರಿಹಾರವಾಗಿ ಎಕರೆಯೊಂದಕ್ಕೆ 1.65 ಕೋಟಿ ನೀಡಲಾಗಿದೆ. ನಮಗೆ ಪರಿಹಾರವಾಗಿ 3 ಕೋಟಿ ರೂಪಾಯಿ ಕೊಡಿಸಬೇಕೆಂದು ಮನವಿ ಮಾಡಿದರು.

ಈ ಸಂಬಂಧ ಅಲ್ಲೇ ಕೆಐಎಡಿಬಿ ಕಾರ್ಯ ನಿರ್ವಹಣಾಧಿಕಾರಿ ಮಹೇಶ್ ಅವರಿಗೆ ದೂರವಾಣಿ ಕರೆ ಮಾಡಿದ ಸಿದ್ದರಾಮಯ್ಯ, ನಾಳೆ ಕರೆದಿರುವ ಸಭೆ ರದ್ದು ಮಾಡಿ. ಈ ವಿಚಾರವಾಗಿ ನನ್ನ ಜೊತೆ ಚರ್ಚೆ ಮಾಡಿದ ನಂತರ ಸಭೆ ನಡೆಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು ಮಾಡಿದರು. ಈಗ ಜಮೀನು ಬೆಲೆ ನಿರ್ಧಾರದ ಚೆಂಡು ಮುಖ್ಯಮಂತ್ರಿಗಳ ಅಂಗಳದಲ್ಲಿದ್ದು, ಸಿದ್ದರಾಮಯ್ಯ ತಮ್ಮ ಕ್ಷೇತ್ರದ ರೈತರ ಪರವಾಗಿ ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂದು ಕಾದು ನೋಡಬೇಕಿದೆ.

ಮೈಸೂರಿನ 38 ಕೇಂದ್ರಗಳಲ್ಲಿ ಸಿಇಟಿ

ಭೌತಶಾಸ್ತ್ರದಲ್ಲಿ 1,293, ರಸಾಯನಶಾಸ್ತ್ರದಲ್ಲಿ 1,286 ಅಭ್ಯರ್ಥಿಗಳು ಗೈರು

ಮೈಸೂರು, ಏ. 16(ಆರ್‌ಕೆ)– ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗಾಗಿ ಇಂದಿನಿಂದ ಸಿಇಟಿ ಆರಂಭಗೊಂಡಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದಿಂದ ನಡೆಯುತ್ತಿರುವ ಸಿಇಟಿ ಮೊದಲ ದಿನವಾದ ಇಂದು ಬೆಳಗ್ಗೆ 10.30ರಿಂದ 11.50 ಹಾಗೂ ಮಧ್ಯಾಹ್ನ 2.30ರಿಂದ 3.50 ಗಂಟೆವರೆಗೆ ಕ್ರಮವಾಗಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಲ್ಲಿ ನಡೆಯಿತು.

ಭೌತಶಾಸ್ತ್ರ ವಿಷಯದಲ್ಲಿ ನೋಂದಾಯಿತರಾಗಿದ್ದ 17,371 ಮಂದಿ ಪೈಕಿ 16,078 ಅಭ್ಯರ್ಥಿಗಳು ಪರೀಕ್ಷೆ ಬರೆದರೆ, 1,293 ಮಂದಿ ಗೈರುಹಾಜರಾದರು. ಮಧ್ಯಾಹ್ನ ರಸಾಯನಶಾಸ್ತ್ರ ವಿಷಯದಲ್ಲಿ 17,371ರ ಪೈಕಿ 1,286 ಅಭ್ಯರ್ಥಿಗಳು ಗೈರು ಹಾಜರಾಗಿದ್ದಾರೆ. ಮೈಸೂರು ನಗರದ 38 ಕಾಲೇಜುಗಳಲ್ಲಿ ನಡೆದ ಪರೀಕ್ಷೆಗೆ ಆಯಾ ಠಾಣೆಗಳ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಯಾವುದೇ ಗೊಂದಲಗಳಿಲ್ಲದೇ ಮೊದಲ ದಿನದ ಸಿಇಟಿ ಶಾಂತಿಯುತವಾಗಿ ಮುಕ್ತಾಯಗೊಂಡಿತು.



ಮೈಸೂರಿನ ಪರೀಕ್ಷಾ ಕೇಂದ್ರವೊಂದರಲ್ಲಿ ಅಭ್ಯರ್ಥಿಗಳ ಪ್ರವೇಶ ಪತ್ರದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಪರೀಕ್ಷಿಸುತ್ತಿರುವುದು.


ಇದೇ ಮೊದಲ ಬಾರಿ ಎಲ್ಲಾ 38 ಕೇಂದ್ರಗಳಲ್ಲಿ ನಡೆದ ಪರೀಕ್ಷಾ ಪ್ರಕ್ರಿಯೆಯ ವೆಬ್ ಕ್ಯಾಸ್ಟಿಂಗ್ ಮಾಡಲಾಯಿತಲ್ಲದೇ, ಪ್ರತಿಯೊಬ್ಬ ಅಭ್ಯರ್ಥಿಯ ಪ್ರವೇಶ ಶುಲ್ಕದಲ್ಲಿ ಮುದ್ರಿತವಾಗಿದ್ದ ಕ್ಯೂಆರ್ ಕೋಡ್ ಅನ್ನು ಮೊಬೈಲ್ ಆ್ಯಪ್‌ನಿಂದ ಸ್ಕ್ಯಾನ್ ಮಾಡಿ ಅಭ್ಯರ್ಥಿಗಳ ನೋಂದಣಿ ನೈಜತೆಯನ್ನು ಪರಿಶೀಲಿಸಲಾಯಿತು.

ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಕೆ.ಮರಿಸ್ವಾಮಿ, ಕೆಲ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು ಜಿಲ್ಲಾ ಖಜಾನೆಯಿಂದ ಶಸ್ತ್ರಸಜ್ಜಿತ ಪೊಲೀಸ್ ಬೆಂಗಾವಲಿನೊಂದಿಗೆ ಜಿಪಿಎಸ್ ಅಳವಡಿಸಿರುವ ವಾಹನಗಳಲ್ಲಿ ಸಿಇಟಿ ಪ್ರಶ್ನೆ ಪತ್ರಿಕೆಗಳನ್ನು ಕೇಂದ್ರಗಳಿಗೆ ಪೂರೈಸಿ ವಾಪಸ್ ತರುವ ವ್ಯವಸ್ಥೆ ಮಾಡಲಾಗಿತ್ತು.

ನಾಳೆ (ಏ.17) ಗಣಿತ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದ್ದು, ಜಿಲ್ಲಾಡಳಿತದಿಂದ ಸರ್ವ ರೀತಿಯ ಸಿದ್ಧತೆ ನಡೆಸಲಾಗಿದೆ.

ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರಿಗೆ ಅಭಿನಂದನೆ...



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 2025–2030ನೇ ಸಾಲಿನ ರಾಜ್ಯಾಧ್ಯಕ್ಷರಾಗಿ ಬೆಂಗಳೂರಿನ ಗಾಯತ್ರಿ ಭವನದಲ್ಲಿ ಬುಧವಾರ ಪದಗ್ರಹಣ ಮಾಡಿದ ಎಸ್.ರಘುನಾಥ್ ಅವರನ್ನು ಮೈಸೂರು ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ, ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಅಭಿನಂದಿಸಿದರು. ಈ ವೇಳೆ ಹೊಯ್ಸಳ ಕರ್ನಾಟಕ ಬ್ರಾಹ್ಮಣ ಸಂಘದ ಕಟ್ಟಡ ಸಮಿತಿ ಮಾಜಿ ಅಧ್ಯಕ್ಷ ಎನ್.ಲಕ್ಷ್ಮೀ ನರಸಿಂಹ, ಅಗಸ್ತ್ಯ ಕೋ–ಆಪರೇಟಿವ್ ಬ್ಯಾಂಕ್ ಖಜಾಂಚಿ ಕಲ್ಕೆರೆ ನಾಗರಾಜು, ಶ್ರೀನಿವಾಸ ಪ್ರಸಾದ್, ರಾಜೇಶ್ ಬೋರೆ, ಸುನಿಲ್ ಕುಮಾರ್, ಚಂದ್ರಶೇಖರ್, ರಾಜ್‌ಕುಮಾರ್, ಟಿ.ಎಸ್.ಅರುಣ್, ಗಣೇಶ್ ಗುರ್ಕಿ, ಶಾಂತಕ್ಕ, ವನಜಾ, ರಮಾದೇವಿ, ಗುಂಡ್ಲುಪೇಟೆ ರಮೇಶ್, ರಾಘವೇಂದ್ರ, ಮಂಜುನಾಥ್, ಬೆಮೆಲ್ ರಾಘವೇಂದ್ರ ಉಪಸ್ಥಿತರಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ; ತ್ವರಿತ ಕ್ರಮಕ್ಕೆ ವಿಶೇಷ ಸೂಚನೆ

ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ



ಬೆಂಗಳೂರು, ಏ.16(ಕೆಎಂಶಿ)– ಅತ್ಯಾಚಾರ ಹಾಗೂ ಮಹಿಳೆಯರ ಮೇಲಿನ ಹಲ್ಲೆ ಪ್ರಕರಣಗಳಲ್ಲಿ ಕ್ರಮಗಳ ಕುರಿತು ವಿಶೇಷ ಸೂಚನೆ ನೀಡಿದ್ದು, ಯಾವುದೇ ಪ್ರಕರಣವನ್ನು ಲಘುವಾಗಿ ತೆಗೆದುಕೊಂಡಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಬ್ಬಳ್ಳಿ ಎನ್‌ಕೌಂಟರ್ ಪ್ರಕರಣದ ತನಿಖೆ ಸಿಐಡಿಗೆ ವಹಿಸಲಾಗಿದ್ದು, ಸತ್ಯಾಂಶ ಹೊರಬರಲಿದೆ, ದಾವಣಗೆರೆಯಲ್ಲಿ ಮುಸ್ಲಿಂ ಮಹಿಳೆ ಮೇಲೆ ಹಲ್ಲೆ ಪ್ರಕರಣ ಸ್ಥಳೀಯ ಪೊಲೀಸರು ಗಮನಿಸುತ್ತಾರೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ, ಯಾವುದೇ ಮುಲಾಜಿಲ್ಲದೆ ಕಾನೂನು ಚೌಕಟ್ಟಿನಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ ಎಂದರು.

ದೇಶದಲ್ಲಿ ಕಾನೂನು ಇದೆ. ಅದರ ಪ್ರಕಾರ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಾರೆ. ಎಲ್ಲರ ಟೀಕೆಗೆ ಉತ್ತರಿಸಲು ಸಾಧ್ಯವಿಲ್ಲ ಎಂದರು. ಟಾಟಾ ಟ್ರಸ್ಟ್ ನಡೆಸಿದ ಸಮೀಕ್ಷೆಯಲ್ಲಿ ಕರ್ನಾಟಕ ಪೊಲೀಸ್ ವ್ಯವಸ್ಥೆ ಮೊದಲ ಸ್ಥಾನದಲ್ಲಿದೆ, ಪೊಲೀಸರು ಶ್ರಮ ವಹಿಸಿ ಕೆಲಸ ಮಾಡುತ್ತಿದ್ದಾರೆ. ಈ ವರದಿ ಪೊಲೀಸ್ ಇಲಾಖೆಗೆ ಉತ್ತೇಜನ ನೀಡಿದಂತಾಗಿದೆ ಎಂದರು.

ಬೆಂಕಿ ನಂದಿಸುವ ಅಣುಕು ಪ್ರದರ್ಶನ

ಮೈಸೂರು, ಏ.16(ಆರ್‌ಕೆ)–ಬೇಸಿಗೆ ಬಿಸಿಲಿನ ತಾಪವಿರುವುದರಿಂದ ಆಸ್ಪತ್ರೆಗಳಲ್ಲಿ ಆಕಸ್ಮಿಕ ಬೆಂಕಿ ತಗುಲಿದಲ್ಲಿ ನಂದಿಸುವ ಬಗ್ಗೆ ಹೆಬ್ಬಾಳು ಅಗ್ನಿಶಾಮಕ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿರುವ ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆಯಲ್ಲಿ ಅಣುಕು ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸಿದರು.

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ವತಿಯಿಂದ ಏ.14ರಿಂದ 20ರವರೆಗೆ ಅಗ್ನಿಶಾಮಕ ಸೇವಾ ಸಪ್ತಾಹದ ಅಂಗವಾಗಿ 'ಅಗ್ನಿ ಸುರಕ್ಷಿತ ಭಾರತವನ್ನು ಹುಟ್ಟು ಹಾಕಲು ಒಂದಾಗೋಣ' ಧ್ಯೇಯವಾಕ್ಯದೊಂದಿಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಸಂತೋಷ್ ನೇತೃತ್ವದಲ್ಲಿ ಆಸ್ಪತ್ರೆಯಲ್ಲಿ ಅಗ್ನಿಶಮನ ಕಾರ್ಯಾಚರಣೆ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಆಸ್ಪತ್ರೆಯ ಒಂದು ಭಾಗದಲ್ಲಿ ಆಕಸ್ಮಿಕ ಬೆಂಕಿ ತಗುಲಿದಾಗ ಅಲ್ಲಿನ ರೋಗಿಗಳು, ಸಿಬ್ಬಂದಿಗಳನ್ನು ಬೆಂಕಿ ಅನಾಹುತದಿಂದ ರಕ್ಷಿಸುವ ಹಾಗೂ ಬೆಂಕಿ ಕಾಣಿಸಿಕೊಂಡಾಗ ಅನುಸರಿಸಬೇಕಾದ ಕ್ರಮ, ಮುಂಜಾಗರೂಕವಾಗಿ ಏನು ಮಾಡಬೇಕೆಂಬುದರ ಬಗ್ಗೆಯೂ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡಲಾಯಿತು. ವೈದ್ಯರಾದ ಡಾ.ಹೇಮಂತ್, ಡಾ.ಚೈತ್ರಾ, ಡಾ.ಸೈಯದ್, ಡಾ.ಅವಿನಾಶ್, ಹಿರಿಯ ಲ್ಯಾಬ್ ಟೆಕ್ನಿಷಿಯನ್ ಎಸ್.ಎಸ್.ನಾಗೇಂದ್ರ ಹಾಗೂ ಸಿಬ್ಬಂದಿ ಈ ವೇಳೆ ಉಪಸ್ಥಿತರಿದ್ದರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿನ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಪ್ರವೇಶ ಕಲ್ಪಿಸುವ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಏ.15ರಿಂದ ಮೇ 3ರವರೆಗೆ https://swdservices.karnataka.gov.in/EducationPrestigious ಮೂಲಕ ನೋಂದಾಯಿಸಬೇಕು. ನಂತರ ದಾಖಲಾತಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಮೇ 5ರೊಳಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


ನಿಧನ

ಎಲ್.ಎಸ್.ರಾಮಪ್ರಸಾದ್



ಮೈಸೂರು, ಏ.16– ಮೈಸೂರಿನ ಬೃಂದಾವನ ಬಡಾವಣೆ 1ನೇ ಹಂತದ ನಿವಾಸಿ ಎಲ್.ಜಿ.ಶಂಕರನಾರಾಯಣ್ ಅವರ ಹಿರಿಯ ಪುತ್ರ ಎಲ್.ಎಸ್.ರಾಮಪ್ರಸಾದ್ (54) ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ತಾಯಿ ಶ್ರೀಮತಿ, ಸಹೋದರರಾದ ಎಲ್.ಎಸ್.ಹರೀಶ್‌ಕುಮಾರ್, ಎಲ್.ಎಸ್.ಶ್ರೀಕಾಂತ್, ಎಲ್.ಎಸ್.ಶಶಿಕಾಂತ್ ಸೇರಿ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ನಾಳೆ (ಏ.17)ರಂದು ಬೆಳಗ್ಗೆ 9ಕ್ಕೆ ಗೋಕುಲಂನ ಚಿರಶಾಂತಿಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.04.2025 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್ ಸಿ. ನಾಗಣ್ಣ, ನಿರ್ಮಾಣ–ಚಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಸಿ. ಅಶ್ವಥ್, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿ. ಲಲಿತಾ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ; 12.35 ದೇವರನಾಮ–ಹೆಚ್.ಬಿ. ಪದ್ಮಿನಿ, 12.45 ಚಿತ್ರಗೀತೆಗಳು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಸಿ. ಎಸ್. ನಂದಿತಾ, 2.40 ಕನ್ನಡ ಚಿತ್ರಗೀತೆಗಳು, 4.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಟಿ. ನರಸೀಪುರ ತಾಲೂಕು ಬೆನಕನಹಳ್ಳಿಯ ಗಿರಿಜಮ್ಮ ಮತ್ತು ಸಂಗಡಿಗರು ಪ್ರಸ್ತುತಿ : ಡಾ. ಮೈಸೂರು ಉಮೇಶ್, 4.30 ವಿಜ್ಞಾನಭಾರತಿ–ಕ್ಲೋನಿಂಗ್ ಕುರಿತು ವಿಜ್ಞಾನ ಲೇಖಕರಾದ ಸಾತನೂರು ದೇವರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಚಾಂಪಣ್ಣ ಆಶೀಹಾಳ್, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಆಹಾರ ಸಂರಕ್ಷಕಗಳು ಹಾಗೂ ಕೀಟ ನಿಯಂತ್ರಣ ಈ ಕುರಿತು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಪ್ರಧಾನ ವಿಜ್ಞಾನಿ ಡಾ. ಸಿ. ಎಸ್. ವಿವೇಕ್ ಬಾಬು ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಡುತ್ತಾರೆ–ನಿವೇದಿತಾ. ಹೆಚ್., 9.30 ಕನ್ನಡ ಭಾರತಿ, 10.00 ನಾಟಕ – ಊರ್ಮಿಳ, ರಚನೆ–ಗೀತಾ ಸೀತಾರಾಂ, ನಿರ್ದೇಶನ–ಹೆಚ್.ಎಸ್. ಸರಸ್ವತಿ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಜೆಎಸ್‌ಎಸ್ ಕಾನೂನು ಕಾಲೇಜು :** ಬೆಳಗ್ಗೆ 9.30ಕ್ಕೆ ಕರ್ನಾಟಕ ರಾಜ್ಯ ಕಾನೂನು ವಿವಿ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಪುರುಷರ ಮತ್ತು ಮಹಿಳೆಯರ ಪಂದ್ಯಾವಳಿ, ಉದ್ಘಾಟನೆ : ಇಂಟರ್‌ನ್ಯಾಷನಲ್ ಪ್ಯಾರಾ ಒಲಂಪಿಕ್ಸ್ ಆಟಗಾರ ರಾಮಕೃಷ್ಣಯ್ಯ ಶ್ರೀನಿವಾಸ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಮುಖ್ಯ ಅತಿಥಿಗಳು : ಹುಬ್ಬಳ್ಳಿ ಕಾನೂನು ಕಾಲೇಜು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಖಾಲಿದ್ ಖಾನ್, ಡಾ. ಸಿ. ರೇವಣ್ಣ; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ, ಸ್ಥಳ: ಎಸ್‌ಜೆಸಿಇ ಆವರಣ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ :** ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಸಂಪನ್ಮೂಲ ವ್ಯಕ್ತಿಗಳು : ಜಾನ್‌ಸನ್ ಜೋಸೆಫ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವವಸು ನಾಮ ಸಂವತ್ಸರದ ಶ್ರೀರಾಮ ನವಮಿ, ವಿದ್ಯಾರಣ್ಯಪುರಂ ಚೇತನ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ಶ್ರೀರಾಮ ದೇವಸ್ಥಾನ, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಶ್ರೀಮತಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ಕುಲಶೇಖರ ಆಳ್ವಾರ್ ವಿರಚಿತ ಮುಕುಂದ ಮಾಲಾ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಸಂಜೆ 6ರಿಂದ.

■ **ಸ್ನೇಹ ಸಿಂಚನ ಟ್ರಸ್ಟ್ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಮೈಸೂರು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ಡಿ.ಟಿ. ಪ್ರಕಾಶ್ ಮತ್ತು ಡಾ. ಲಕ್ಷ್ಮಿ ಅವರಿಗೆ ಅಭಿನಂದನಾ ಸಮಾರಂಭ, ಅಭಿನಂದಿಸುವವರು : ಮೇಲುಕೋಟೆ ವೆಂಗೀಪುರ ಶ್ರೀ ನಂಬಿಮಠದ ಪೀಠಾಧಿಪತಿ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ವಿಪ್ರ ಮುಖಂಡ ನಂ. ಶ್ರೀಕಂಠಕುಮಾರ್, ಎನ್. ಲಕ್ಷ್ಮೀನರಸಿಂಹ, ಶ್ರೀಮತಿ ವಿಜಯಾ ಸುದರ್ಶನ್, ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಮ.ನ. ಲತಾ ಮೋಹನ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಅಗ್ರಹಾರ, ಮಧ್ಯಾಹ್ನ 12ಕ್ಕೆ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ :** ಎಸ್‌ಕಾಂ ಟ್ಯಾರೀಫ್– ಕ್ರಾಸ್ ಸಬ್ಸಿಡಿ–ಟುವರ್ಡ್ಸ್ ನ್ಯೂ ಪಾಥ್ ಕುರಿತು ಹೆಚ್.ಆರ್. ಶ್ರೀಷ ಅವರಿಂದ ಉಪನ್ಯಾಸ, ಗೌರವ ಅತಿಥಿಗಳು : ಅಸ್ಸಾಂ ಸೆಂಟ್ರಲ್ ಯೂನಿವರ್ಸಿಟಿ ವಿಶ್ರಾಂತ ಸಮ ಕುಲಾಧಿಪತಿ ಪ್ರೊ.ಕೆ.ವಿ. ನಾಗರಾಜ್, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ಟ್ರಸ್ಟ್ :** ಶ್ರೀರಾಮನವಮಿ ಪ್ರಯುಕ್ತ ಸಂಗೀತ ಕಾರ್ಯಕ್ರಮ, ಉಪ್ಪಂದ ರಾಜೇಶ್ ಪಡಿಯಾರ್ ಅವರಿಂದ ದಾಸವಾಣಿ, ಸ್ಥಳ: ಟ್ರಸ್ಟ್ ಆವರಣ, ಎನ್.ಎಸ್. ರಸ್ತೆ, ಸಂಜೆ 6 ರಿಂದ.

■ **ಶ್ರೀರಾಮಮಂದಿರ (ಜಯನಗರ):** ಶ್ರೀ ರಾಮಚಂದ್ರ ಸ್ವಾಮಿಯವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀ ರಾಮ ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ, ಕುಂಭಾಭಿಷೇಕ, 59ನೇ ವಾರ್ಷಿಕೋತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ನಾಂದಿ, ಬಳೆ ಪೂಜೆ, ಚಪ್ಪರದ ಪೂಜೆ ಮತ್ತು ಹೂವೀಳ್ಯದ ಕಾರ್ಯಕ್ರಮ, ಸಂಜೆ 6.30ಕ್ಕೆ ವರಪೂಜೆ, ಸ್ಥಳ: ರಾಮಮಂದಿರ ಆವರಣ, ಜಯನಗರ.

■ **ಶ್ರೀರಾಮ ಸೇವಾ ಮಂಡಲಿ (ಶ್ರೀರಾಮ ಸೇವಾ ಚಾರಿಟಬಲ್ ಟ್ರಸ್ಟ್ ಅಂಗ ಸಂಸ್ಥೆ):** 72ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ರಾಮಚಂದ್ರಸ್ವಾಮಿಗೆ ಶಯನೋತ್ಸವದ ಅಲಂಕಾರ, ಕು. ಅದಿತಿ ನೆಡುತೋಟ ಮತ್ತು ಕು. ಕೀರ್ತನಾ ಪಿ.ಬಿ. ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಸೇವಾ ಮಂಡಲಿ ಆವರಣ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ವಿಶ್ವವಸು ನಾಮ ಸಂವತ್ಸರದ 135ನೇ ವರ್ಷದ ಶ್ರೀ ರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ವಿದುಷಿ ಅಶ್ವಿನಿ ಕೊಲಿಕ್ಕಜೆ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ರಿಂದ.

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಲವತ್ತರ ನಲಿವು ವೈವಿಧ್ಯಮಯ ಸಂಗೀತ ಕಾರ್ಯಕ್ರಮ, ಉದ್ಘಾಟನೆ : ಉದ್ಯಮಿ ಜಗನ್ನಾಥ ಶೆಣೈ, 'ಗಾನ ಯಾನ–ಕಾವ್ಯ ಮಿಲನ' ಪುಸ್ತಕ ಬಿಡುಗಡೆ: ಪತ್ರಕರ್ತ ಜಿ.ಎನ್.ಮೋಹನ್, ಕೃತಿ ಕುರಿತು ಮಾತನಾಡುವವರು : ವಿಮರ್ಶಕಿ ಎಂ.ಎಸ್. ಆಶಾದೇವಿ, ಗೌರವ ಅತಿಥಿಗಳು: 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಅಕಾಡೆಮಿ ಶಿಷ್ಯರಿಂದ ಸಂಗೀತ ಕಾರ್ಯಕ್ರಮ, ಸಿ. ವಿಶ್ವನಾಥ್–ಮ್ಯಾಂಡೋಲಿನ್, ಪುರುಷೋತ್ತಮ ಕಿರಗಸೂರು–ಕೀ ಬೋರ್ಡ್, ಭೀಮಾಶಂಕರ್–ತಬಲ, ವಿನಯ್ ರಂಗಧೋಲ್–ರಿದಂ ಪ್ಯಾಡ್, ಸ್ಥಳ: ರಮಾಗೋವಿಂದ ರಂಗ ಮಂದಿರ, ಕುವೆಂಪುನಗರ, ಸಂಜೆ 6ಕ್ಕೆ.

ಕೆ.ಆರ್.ನಗರದಲ್ಲಿ ಇಂದು

■ **ಶ್ರೀರಾಮ ಸೇವಾ ಮಂಡಳಿ:** ಶ್ರೀ ರಾಮೋತ್ಸವ, ಪ್ರವಚನ, ಬೆಂಗಳೂರಿನ ಕು. ಡಾ. ರಕ್ಷಾ ಕಾರ್ತಿಕ್ ಮತ್ತು ವೃಂದದವರಿಂದ ಭರತನಾಟ್ಯ, ಸ್ಥಳ: ಮಂಡಳಿ ಆವರಣ, ಚಂದ್ರಮೌಳೇಶ್ವರ ರಸ್ತೆ, ಕೆ.ಆರ್.ನಗರ, ಸಂಜೆ.

ಯರಗನಹಳ್ಳಿ ಗ್ರಾಮದಲ್ಲಿಂದು, ಚಾಮರಾಜನಗರ ತಾ.

■ **ಶ್ರೀ ಸೀತಾರಾಮ ಸೇವಾ ಟ್ರಸ್ಟ್ :** ಶ್ರೀ ಸೀತಾರಾಮರ ಕಲ್ಯಾಣೋತ್ಸವ ಹಾಗೂ ರಾಮೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮ, ಬೆಳಗ್ಗೆ 6ರಿಂದ ಸುಪ್ರಭಾತ, ಗಂಗಾಪೂಜೆ, ಮಹಾ ತಿರುಮಂಜನಂ, ಅಲಂಕಾರಾಸನ ಮಂತ್ರ ಪುಷ್ಪ, ಬೆಳಗ್ಗೆ 10.30ಕ್ಕೆ ಕಾಶೀಯಾತ್ರೆ, ಕಲ್ಯಾಣೋತ್ಸವ, ಅಷ್ಟಾವಧಾನ ಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಶಾತ್ತುಮುರೈ ಹಾಗೂ ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಮಧ್ಯಾಹ್ನ 4ಕ್ಕೆ ತಿರುವೀದಿ ಉತ್ಸವಂ, ನಂತರ ಮಹಾಮಂಗಳಾರತಿ, ಶಾತ್ತುಮುರೈ, ತೀರ್ಥಪ್ರಸಾದ ವಿನಿಯೋಗವಿರುತ್ತದೆ. ರಾತ್ರಿ 9ಕ್ಕೆ ಅಭೀಷ್ಟ ಕಲಾತಂಡ, ಮೈಸೂರು ಅವರು ಪ್ರಸ್ತುತಪಡಿಸುತ್ತಿರುವ 'ಅಣ್ಣ ತಂಗಿ' ಎಂಬ ಸಾಮಾಜಿಕ ನಾಟಕ.

'ಮೈಸೂರು ಮಿತ್ರ'ನ 46ನೇ ವಾರ್ಷಿಕೋತ್ಸವಕ್ಕೆ ಶುಭ ಹಾರೈಕೆ



'ಮೈಸೂರು ಮಿತ್ರ' ಪ್ರಾದೇಶಿಕ ದಿನಪತ್ರಿಕೆಯ 46ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಹಾಗೂ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರನ್ನು ಪತ್ರಿಕಾ ಕಾರ್ಯಾಲಯದಲ್ಲಿ ಕನ್ನೇಗೌಡನ ಕೊಪ್ಪಲು (ಕೆಜಿ ಕೊಪ್ಪಲು) ಮುಖಂಡರು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಮಾರಮ್ಮನ ಗುಡ್ಡಪ್ಪ ಡಿ. ನಿಂಗಪ್ಪ, ವಿಕ್ರಾಂತ್ ಪಿ. ದೇವೇಗೌಡ, ಭೈರವ ಗ್ರೂಪ್‌ನ ಮಾದೇವ, ಗರಡಿಯ ಕಾರ್ಯದರ್ಶಿ ಎನ್. ಚಂದ್ರು, ಹೆಚ್.ಎಸ್. ವೆಂಕಟಸುಬ್ಬಯ್ಯ, ಮೀಸೆ ಬೋರಪ್ಪ, ಶಿವರಾಜು, ಗಂಗೆ ಮರಿಯಪ್ಪನ ಕೃಷ್ಣ, ಮರ್ಚಿ ಮಾದೇವ್, ಜಯೇಶ್‌ಗೌಡ ಇತರರು ಉಪಸ್ಥಿತರಿದ್ದಾರೆ.



'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಹಾಗೂ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರನ್ನು ಬಿಜೆಪಿ ಮೈಸೂರು ಮಹಾನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಎಸ್‌ಸಿ ಮೋರ್ಚಾ ಮೈಸೂರು ನಗರಾಧ್ಯಕ್ಷರೂ ಆದ ಮಾಜಿ ಉಪಮಹಾಪೌರ ವಿ.ಶೈಲೇಂದ್ರ ಅಭಿನಂದಿಸಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ಪೈಲ್ವಾನ್ ಟಿ.ರವಿ, ಈರೇಗೌಡ, ಮಾದಳ್ಳಿ ನಂಜುಂಡಸ್ವಾಮಿ, ದಾರಿಪುರ ಸುನಿಲ್ ಕುಮಾರ್, ಪಟೇಲ್ ಶಿವಕುಮಾರ್, ಮಹೇಶ್ ಇತರರು ಉಪಸ್ಥಿತರಿದ್ದರು.



'ಮೈಸೂರು ಮಿತ್ರ'ನ 46ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರನ್ನು ಉರಗ ಸಂರಕ್ಷಕ ಸ್ನೇಕ್ ಶ್ಯಾಂ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಜಾತಿ ಜನಗಣತಿ; ಮೈಸೂರಲ್ಲಿ ಒಕ್ಕಲಿಗ ಸಮುದಾಯದ ತೀವ್ರ ವಿರೋಧ

ವರದಿ ವಿರುದ್ಧ ಒಗ್ಗಟ್ಟಾಗಿ ಹೋರಾಟಕ್ಕಿಳಿಯುವ ಅನಿವಾರ್ಯತೆ ಮನವರಿಕೆ

ಮೈಸೂರು,ಏ.16(ಪಿಎಂ)– ಜಾತಿ ಜನಗಣತಿ (ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ಜಾರಿಯಾದಲ್ಲಿ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗಲಿದೆ ಎಂದು ಒಕ್ಕಲಿಗ ಸಮುದಾಯದ ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಜಾತಿ ಜನಗಣತಿ ವಿರುದ್ಧ ಸಮುದಾಯವು ಹೋರಾಟಕ್ಕೆ ಸಜ್ಜಾಗಬೇಕೆಂದು ನಿರ್ಧಾರ ಕೈಗೊಳ್ಳಲಾಯಿತು.

ಮೈಸೂರಿನ ಪಡುವಾರಹಳ್ಳಿಯ ಬಿಜಿಎಸ್ ಹಾಸ್ಟೆಲ್ ಆವರಣದಲ್ಲಿ ಬುಧವಾರ ನಡೆದ ಸಭೆಯಲ್ಲಿ ಒಕ್ಕಲಿಗ ಸಮುದಾಯದ ಮುಖಂಡರು, ಜಾತಿ ಜನಗಣತಿ ವಿರುದ್ಧ ಭಾರಿ ಆಕ್ರೋಶ ವ್ಯಕ್ತಪಡಿಸಿದರು. ಒಕ್ಕಲಿಗ ಸಮುದಾಯದ ಜನಸಂಖ್ಯೆ ಕಡಿಮೆ ತೋರಿಸುವ ಮೂಲಕ ಸಮುದಾಯಕ್ಕೆ ಅನ್ಯಾಯ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ನಾವ್ಯಾರಿಗೂ ಅನ್ಯಾಯ ಮಾಡಿಲ್ಲ: ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಈ ಗಣತಿ ಜಾರಿಯಾದರೆ ಸಮುದಾಯಕ್ಕೆ ಅನ್ಯಾಯವಾಗಲಿದೆ. ಒಕ್ಕಲಿಗ ಸಮಾಜ ಯಾವುದೇ ಸಮುದಾಯಕ್ಕೆ ಅನ್ಯಾಯ ಮಾಡುವ ಸಮುದಾಯವಲ್ಲ. ಆದರೆ ನಮಗೇ ಅನ್ಯಾಯವಾದರೆ ಸುಮ್ಮನೆ ಕೂರಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಣತಿ ಸತ್ಯಕ್ಕೆ ದೂರವಾದುದು: ಮಾಜಿ ಮೇಯರ್ ಮೋದಾಮಣಿ ಮಾತನಾಡಿ, ಸದರಿ ಜಾತಿ ಜನಗಣತಿ ಸತ್ಯಕ್ಕೆ ದೂರವಾಗಿದೆ. ಈ ಸಂದರ್ಭದಲ್ಲಿ ಸಮುದಾಯ ಕೈಕಟ್ಟಿ ಕುಳಿತುಕೊಳ್ಳದೇ ಪಕ್ಷಭೇದ ಮರೆತು ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದರು.

ಹೋರಾಟ ಅನಿವಾರ್ಯ: ಮಾಜಿ ಮೇಯರ್ ಆರ್.ಲಿಂಗಪ್ಪ ಮಾತನಾಡಿ, ಗಣತಿಗಾಗಿ ನಮ್ಮ ಮನೆಗೆ ಯಾರೂ ಬಂದಿಲ್ಲ. ಇದೇ ಮಾತನ್ನು ಸಾಕಷ್ಟು ಮಂದಿ ಹೇಳುತ್ತಾರೆ. ಈ ಗಣತಿ ಅಂಕಿ–ಅಂಶ ಗಮನಿಸಿದರೆ ಒಕ್ಕಲಿಗ ಸಮುದಾಯ ತುಳಿಯಲು ಹೊರಟಂತಿದೆ. ಅದೇ ರೀತಿ ಲಿಂಗಾಯತ ಸಮುದಾಯಕ್ಕೂ ಅನ್ಯಾಯ ಮಾಡಲು ಹೊರಟಿದ್ದು, ಎರಡೂ ಸಮುದಾಯಗಳ ಪ್ರಮುಖ ಸ್ವಾಮೀಜಿಗಳನ್ನು ಸರ್ಕಾರದೊಂದಿಗೆ ಈ ಸಂಬಂಧ ಮಾತನಾಡುವಂತೆ ಕೋರಬೇಕು. ಈ ಮಾತುಕತೆಗೂ ಸರ್ಕಾರ ಜಗ್ಗದೇ ಹೋದಲ್ಲಿ ಹೋರಾಟ ಅನಿವಾರ್ಯ. ಭಿನ್ನಾಭಿಪ್ರಾಯ ಬಿಟ್ಟು ಸಮುದಾಯದ ಹಿತದೃಷ್ಟಿಯಿಂದ ಹೋರಾಟ ಮಾಡೋಣ ಎಂದರು.

ಭಾರಿ ಹಿನ್ನಡೆಯಾಗಲಿದೆ: ಮುಖಂಡ ಬೀಡನಹಳ್ಳಿ ಸತೀಶ್‌ಗೌಡ ಮಾತನಾಡಿ, ಜಾತಿ ಗಣತಿ ಜಾರಿ ಮೂಲಕ ತಪ್ಪು ದತ್ತಾಂಶಗಳನ್ನು ಸರ್ಕಾರಿ ದಾಖಲೆ ಮಾಡಲು ಹೊರಟಿದೆ. ಹಾಗಾಗಿ ಇದಕ್ಕೆ ಅವಕಾಶ ನೀಡದೇ ವೈಜ್ಞಾನಿಕವಾಗಿ ಮರು ಜಾತಿ ಜನಗಣತಿಗೆ ಆಗ್ರಹಿಸಬೇಕು. ಒಂದು ವೇಳೆ ಈ ವರದಿ ಜಾರಿಯಾದರೆ ಸಮುದಾಯಕ್ಕೆ ರಾಜಕೀಯವಾಗಿ ಭಾರಿ ಹಿನ್ನಡೆಯಾಗಲಿದೆ ಎಂದರು.

ಕನ್ನಡ ಪರ ಹೋರಾಟಗಾರ ಶಿವಶಂಕರ್ ಮಾತನಾಡಿ, 1981ರಲ್ಲಿ ಇದ್ದ ಒಕ್ಕಲಿಗ ಸಮುದಾಯದ ಜನಸಂಖ್ಯೆಯನ್ನು ಈಗ ಅರ್ಧಕ್ಕರ್ಧ ಕಡಿಮೆ ತೋರಿಸಲಾಗಿದೆ. ಈ ಗಣತಿ ಅವೈಜ್ಞಾನಿಕವಾಗಿದ್ದು, ಒಂದು ವೇಳೆ ಇದು ಜಾರಿಯಾದಲ್ಲಿ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಸಮುದಾಯಕ್ಕೆ ಅನ್ಯಾಯವಾಗಲಿದೆ. ಹಾಗಾಗಿ ಪಕ್ಷಭೇದ ಮರೆತು ಸಮುದಾಯದ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಿದೆ ಎಂದು ಹೇಳಿದರು.

ಅವೈಜ್ಞಾನಿಕ ವರದಿ: ಕನ್ನಡ ಪರ ಹೋರಾಟಗಾರ ಮೋಹನ್‌ಕುಮಾರ್‌ಗೌಡ ಮಾತನಾಡಿ, ಜಾತಿ ಜನಗಣತಿ ವರದಿ ಇನ್ನು ಕೆಲವೇ ದಿನಗಳಲ್ಲಿ 10 ವರ್ಷಗಳನ್ನು ಪೂರೈಸಲಿದೆ. ಇದೊಂದು ಅವೈಜ್ಞಾನಿಕ ವರದಿಯಾದ ಹಿನ್ನೆಲೆಯಲ್ಲಿ ಸಮುದಾಯದ ಜನಸಂಖ್ಯೆಯ ಸಮೀಕ್ಷೆಯನ್ನು ನಾವೇ ಸಿದ್ಧಪಡಿಸಿ ಸರಿಯಾದ ದತ್ತಾಂಶಗಳನ್ನು ಸರ್ಕಾರದ ಮುಂದಿಡುವ ಅಗತ್ಯವಿದೆ ಎಂದು ತಿಳಿಸಿದರು.

ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ರಾಜ್ಯ ಸರ್ಕಾರ ಜಾತಿ ಜನಗಣತಿ ವರದಿ ಜಾರಿಗೆ ತರಾತುರಿ ಮಾಡುತ್ತಿದೆ. ರಾಜ್ಯ ಸರ್ಕಾರದಲ್ಲೇ ಇರುವ ಒಕ್ಕಲಿಗ ಸಮುದಾಯದ ಶಾಸಕರು ಈ ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಜೊತೆಗೆ ಜೆಡಿಎಸ್, ಬಿಜೆಪಿ ಶಾಸಕರು ವಿರೋಧ ವ್ಯಕ್ತಪಡಿಸಿದ್ದಾರೆ. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಸಮೀಕ್ಷೆ ಅವೈಜ್ಞಾನಿಕವಾದ ಹಿನ್ನೆಲೆಯಲ್ಲಿ ಜಾರಿಗೊಳಿಸಬಾರದು ಎಂದು ಸಂದೇಶ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಜೊತೆಗೆ ಕಾನೂನಾತ್ಮಕವಾಗಿ ವರದಿ ಬಹಿರಂಗಗೊಳ್ಳುವ ಮುನ್ನವೇ ಸೋರಿಕೆಯಾಗಿದೆ ಎಂದರೆ ಸರ್ಕಾರದಲ್ಲೇ ನ್ಯೂನತೆ ಇದೆ. ಮೈಸೂರು ನಗರದ ಒಕ್ಕಲಿಗರ ಸಮುದಾಯದ 200ಕ್ಕೂ ಹೆಚ್ಚು ಜನ ಇಂದು ಸಭೆಯಲ್ಲಿ ಪಾಲ್ಗೊಂಡು ಜಾತಿ ಜನಗಣತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಹೋರಾಟಕ್ಕೂ ತೀರ್ಮಾನಿಸಿದ್ದೇವೆ. ಜಾತಿ ಜನಗಣತಿ ನ್ಯಾಯಸಮ್ಮತವಾಗಿ ಆಗಿಲ್ಲ. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ತಾಲೂಕುವಾರು ಹಾಗೂ ಮೈಸೂರು ವಿಧಾನಸಭಾ ಕ್ಷೇತ್ರವಾರು ಸಮಿತಿ ರಚಿಸಿ ಹೋರಾಟದ ರೂಪರೇಷೆ ಸಿದ್ಧಪಡಿಸಲಾಗುವುದು ಎಂದರು.

ಮಾಜಿ ಮೇಯರ್ ಸಂದೇಶ್‌ಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಮಂಜೇಗೌಡ, ಜೆಡಿಎಸ್ ಮುಖಂಡ ರವಿಚಂದ್ರೇಗೌಡ, ಬಿಜೆಪಿ ಮುಖಂಡ ಹೇಮಂತ್‌ಕುಮಾರ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಒಂಟಿಕೊಪ್ಪಲು ಗುರುರಾಜು, ಕಾರ್ಯದರ್ಶಿ ಚೇತನ್, ಸಮುದಾಯದ ಇನ್ನಿತರ ಮುಖಂಡರಾದ ಕೆ.ಬಿ.ಲಿಂಗರಾಜು, ಪ್ರೇಮಾ ಶಂಕರೇಗೌಡ, ಸತೀಶ್‌ಜವರೇಗೌಡ ಸೇರಿದಂತೆ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಬಿಜಿಎಸ್ ಹಾಸ್ಟೆಲ್ ಆವರಣದಲ್ಲಿ ಬುಧವಾರ ಒಕ್ಕಲಿಗ ಸಮುದಾಯದ ಮುಖಂಡರು ಸಭೆ ನಡೆಸಿದರು.

ಯಾವುದೇ ರಾಜ್ಯ ಸರ್ಕಾರಗಳು ಜಾತಿ ಜನಗಣತಿ ಮಾಡುವಂತಿಲ್ಲ

ಈ ಜಾತಿ ಜನಗಣತಿ ಅವೈಜ್ಞಾನಿಕ. ಜೊತೆಗೆ ಕೇಂದ್ರ ಸರ್ಕಾರ ಹೊರತುಪಡಿಸಿ ಬೇರೆ ಯಾವುದೇ ರಾಜ್ಯ ಸರ್ಕಾರಗಳು ಜಾತಿ ಜನಗಣತಿ ಮಾಡುವಂತಿಲ್ಲವೆಂದು ಕಾನೂನು ತಜ್ಞರು ಹೇಳುತ್ತಿದ್ದಾರೆ. ನಮ್ಮ ಸಮುದಾಯಕ್ಕೆ ಅನ್ಯಾಯವಾಗಲು ಬಿಡಬಾರದು. ನಾವೆಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು. ಇಲ್ಲಿ ಯಾವುದೇ ಪಕ್ಷದ ವಿಚಾರಗಳನ್ನು ಮುನ್ನೆಲೆಗೆ ತರುವುದು ಬೇಡ. ಕರ್ನಾಟಕದಲ್ಲಿ 56 ಲಿಂಗಾಯಿತರು, 46 ಒಕ್ಕಲಿಗರು, 10 ಬ್ರಾಹ್ಮಣ ಶಾಸಕರು ಇದ್ದಾರೆ. ಹೀಗಾಗಿ ಒಕ್ಕಲಿಗರು, ಲಿಂಗಾಯಿತರು ಹಾಗೂ ಬ್ರಾಹ್ಮಣರ ಪ್ರಾಬಲ್ಯ ಇಳಿಸುವ ಉದ್ದೇಶವೂ ಇಲ್ಲಿರಬಹುದು.

-ಸಂದೇಶ್‌ಸ್ವಾಮಿ, ಮಾಜಿ ಮೇಯರ್

ಆಧಾರ್ ಆಧರಿಸಿ ಸಮೀಕ್ಷೆ ನಡೆಸಿದರೆ ಉತ್ತಮ



ಮೈಸೂರು, ಏ.16(ಪಿಎಂ)– ಆಧಾರ್ ಕಾರ್ಡ್‌ನೊಂದಿಗೆ ಜಿಯೋ ಟ್ಯಾಗ್ ಮೂಲಕ ಸಮೀಕ್ಷೆ ನಡೆಸಿದರೆ ಎಲ್ಲಾ ಜಾತಿಗಳ ಜನಸಂಖ್ಯೆ ನಿಖರವಾಗಿ ತಿಳಿಯಲು ಸಾಧ್ಯವಾಗಲಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್ ಹೇಳಿದರು.

ಒಕ್ಕಲಿಗ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಇದು ಅವೈಜ್ಞಾನಿಕ ಸಮೀಕ್ಷೆಯಾಗಿದೆ. ಆಧಾರ್ ನಂಬರ್ ಲಿಂಕ್ ಮೂಲಕ ಸಮೀಕ್ಷೆ ಮಾಡುವುದು ವೈಜ್ಞಾನಿಕವಾಗಿದ್ದು, ಹಾಗೆ ಮಾಡಿದ್ದಲ್ಲಿ ಸಮರ್ಪಕ ಅಂಕಿ–ಅಂಶ ಲಭ್ಯವಾಗುವ ಮೂಲಕ ಎಲ್ಲರ ಸಮ್ಮತಿಯೂ ದೊರೆಯಲಿದೆ. ನಾವು ಒಕ್ಕಲಿಗರ ಸಂಘದಿಂದ ಈ ಹಿಂದೆಯೂ ಆಧಾರ್ ಸಂಖ್ಯೆ ಜೊತೆಗೂಡಿಸುವ ವಿಧಾನದ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿತ್ತು ಎಂದರು.

ಈ ಸಮೀಕ್ಷೆ ವೈಜ್ಞಾನಿಕವಾಗಿ ಆಗಿಲ್ಲ. ಮನೆಗಳಿಗೆ ಭೇಟಿ ನೀಡಿರುವುದಕ್ಕೆ ದಾಖಲೆ ಅಥವಾ ಸಾಕ್ಷ್ಯ ಸಹ ಲಭ್ಯವಿಲ್ಲ. ರಾಜ್ಯದಲ್ಲಿ ಎಲ್ಲಾ ಸಮುದಾಯಗಳ ಸೇರಿದಂತೆ ಒಟ್ಟು ಜನಸಂಖ್ಯೆ 7 ಕೋಟಿ 70 ಲಕ್ಷ ಇದೆ. ಆದರೆ ಈ ಸಮೀಕ್ಷೆಯಲ್ಲಿ ಕೇವಲ 5 ಕೋಟಿ ಒಟ್ಟು ಜನಸಂಖ್ಯೆ ತೋರಿಸಲಾಗಿದೆ. ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಸಮೀಕ್ಷೆ ಜಾರಿಯಾದರೆ ಸಮುದಾಯದ ಮೇಲೆ ಆಗುವ ದುಷ್ಪರಿಣಾಮವನ್ನು ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ತಿಳಿಸಬೇಕು. ಆ ಮೂಲಕ ಹೋರಾಟಕ್ಕೆ ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು.

ಮುಸ್ಲಿಮರಿಗೆ ಗುತ್ತಿಗೆಯಲ್ಲಿ ಮೀಸಲಾತಿ: ರಾಷ್ಟ್ರಪತಿಗಳ ಅಂಗಳಕ್ಕೆ ಮಸೂದೆ



ಬೆಂಗಳೂರು, ಏ.16– ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ನಡೆಯುತ್ತಿದ್ದ ಸಂಘರ್ಷ ಈಗ ರಾಷ್ಟ್ರಪತಿಗಳ ಅಂಗಳಕ್ಕೆ ತಲುಪಿದೆ. ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ಗುತ್ತಿಗೆಯಲ್ಲಿ ಶೇ. 4 ಮೀಸಲಾತಿ ಕಲ್ಪಿಸಿದ್ದ ಮಸೂದೆಯನ್ನು ರಾಜ್ಯಪಾಲ ಥಾವರ್‌ಸಿಂಗ್ ಗೆಹ್ಲೋಟ್ ಅವರು ರಾಷ್ಟ್ರಪತಿಗಳಿಗೆ ಕಳುಹಿಸಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳುಹಿಸಿದ ಪತ್ರದಲ್ಲಿ ರಾಜ್ಯಪಾಲರು ಸಂವಿಧಾನದಲ್ಲಿ ಧರ್ಮ ಆಧಾರಿತ ಮೀಸಲಾತಿ ನೀಡಲು ಅವಕಾಶವಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಸಂವಿಧಾನದ ಆರ್ಟಿಕಲ್ 14,15,16 ಉಲ್ಲೇಖಿಸಿ ನಿರಾಕರಣೆ ಮಾಡಿದೆ ಎಂದು ಕೆಲ ತೀರ್ಪುಗಳನ್ನು ಉಲ್ಲೇಖಿಸಿದ್ದಾರೆ.

ಗುತ್ತಿಗೆ ಮೀಸಲಾತಿಯು ಈವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ 1ರವರೆಗೆ ಅನ್ವಯವಾಗುತ್ತಿತ್ತು. ಈ ಸೌಲಭ್ಯವನ್ನು ಮುಸ್ಲಿಮರಿಗೆ (ಪ್ರವರ್ಗ 2ಬಿ) ವಿಸ್ತರಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿತ್ತು.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು ಮಂಡಿಸಿದ ಬಜೆಟ್‌ನಲ್ಲಿ ಮೀಸಲಾತಿ ನೀಡುವ ಬಗ್ಗೆ ಘೋಷಣೆ ಮಾಡಿದ್ದರು. ವಿಪಕ್ಷಗಳ ವಿರೋಧದ ಮಧ್ಯೆ ಸರ್ಕಾರ ಬಜೆಟ್ ಅಧಿವೇಶನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಒಪ್ಪಿಗೆ ನೀಡಿತ್ತು. ಮಸೂದೆ ಕಾಯ್ದೆಯಾಗಿ ಜಾರಿಯಾದರೆ 2 ಕೋಟಿ ರೂ. ವೆಚ್ಚದ ಕಾಮಗಾರಿಗಳು, 1 ಕೋಟಿ ರೂ.ವರೆಗಿನ ಸರಕು ಮತ್ತು ಸೇವೆಗಳ ಪೂರೈಕೆಯ ಟೆಂಡರ್‌ನಲ್ಲಿ ಮುಸ್ಲಿಮರಿಗೆ ಶೇ.4 ಮೀಸಲಾತಿ ಸಿಗಲಿದೆ.

ಲಾಸ್ ಏಂಜಲೀಸ್ ಒಲಿಂಪಿಕ್ಸ್; ಕ್ರಿಕೆಟ್ ಪಂದ್ಯಗಳಿಗೆ ಸ್ಥಳ ನಿಗದಿ

ಲಾಸ್ ಏಂಜಲೀಸ್, ಏ.16– ಸುಮಾರು 128 ವರ್ಷಗಳ ನಂತರ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಮತ್ತೆ ಕಾಣಿಸಿಕೊಳ್ಳುತ್ತಿದೆ. ಈ ಕ್ರೀಡೆಯನ್ನು 2028 ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಅಧಿಕೃತವಾಗಿ ಸೇರಿಸಲಾಗಿದೆ. ಇದೀಗ ಕ್ರಿಕೆಟ್ ಪಂದ್ಯಾವಳಿ ಯಾವ ಸ್ಥಳದಲ್ಲಿ ನಡೆಯಲಿದೆ ಎಂಬುದರ ಬಗ್ಗೆ ಮಾಹಿತಿ ಹೊರಬಿದ್ದಿದೆ. ಕ್ಯಾಲಿಫೋರ್ನಿಯಾದ ಪೊಮೊನಾ ನಗರದಲ್ಲಿ 500 ಎಕರೆ ವಿಸ್ತೀರ್ಣದ ಮೈದಾನದಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯಲಿವೆ ಎಂಬ ಮಾಹಿತಿಯನ್ನು ಇದೀಗ ಐಸಿಸಿ ತನ್ನ ಅಧಿಕೃತ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ.

ತಾತ್ಕಾಲಿಕ ಕ್ರೀಡಾಂಗಣ ನಿರ್ಮಾಣ: ಪೊಮೋನಾದಲ್ಲಿ ಕ್ರಿಕೆಟ್ ಆಡಲಾಗುವ ಮೈದಾನವನ್ನು ಫೇರ್‌ಪ್ಲೆಕ್ಸ್ ಎಂದೂ ಕರೆಯುತ್ತಾರೆ. ಅಲ್ಲಿ ಕ್ರಿಕೆಟ್ ಅಥವಾ ಯಾವುದೇ ಇತರ ಕ್ರೀಡೆಗೆ ಈಗಾಗಲೇ ಇರುವ ಯಾವುದೇ ಸಂಕೀರ್ಣವಿಲ್ಲ. ಸಾಮಾನ್ಯವಾಗಿ ಇದನ್ನು ಮೇಳಗಳನ್ನು ಆಯೋಜಿಸಲು ಬಳಸಲಾಗುತ್ತಿತ್ತು. 500 ಎಕರೆ ಪ್ರದೇಶದಲ್ಲಿ ಹರಡಿರುವ ಈ ಮೈದಾನವು 103 ವರ್ಷಗಳಿಂದ (1922) ಲಾಸ್ ಏಂಜಲೀಸ್ ಕೌಂಟಿ ಮೇಳವನ್ನು ಆಯೋಜಿಸುತ್ತಿದೆ. ಆದರೆ ಈಗ ಕ್ರಿಕೆಟ್‌ಗಾಗಿ ಇಲ್ಲಿ ತಾತ್ಕಾಲಿಕ ಸ್ಥಳವನ್ನು ಸಿದ್ಧಪಡಿಸಲಾಗುವುದು. ಇದಕ್ಕೂ ಮೊದಲು, ಅಂದರೆ 2024 ರಲ್ಲಿ ನಡೆದಿದ್ದ ಟಿ20 ವಿಶ್ವಕಪ್‌ಗೆ ಅಮೆರಿಕ ಆತಿಥ್ಯವಹಿಸಿತ್ತು. ಆ ಸಮಯದಲ್ಲಿ ಉದ್ಯಾನವನ ಪ್ರದೇಶದಲ್ಲಿ ತಾತ್ಕಾಲಿಕ ಕ್ರೀಡಾಂಗಣವನ್ನು ನಿರ್ಮಿಸಲಾಗಿತ್ತು.

ಒಲಿಂಪಿಕ್ ಪೋಸ್ಟರ್‌ನಲ್ಲಿ ಕೊಹ್ಲಿಗೆ ಮಾತ್ರ ಸ್ಥಾನ: ಒಲಿಂಪಿಕ್ಸ್ ಆಯೋಜಿಸುವ ಸಮಿತಿಯು ಕ್ರಿಕೆಟ್ ಪಂದ್ಯಾವಳಿ ನಡೆಯುವ ಸ್ಥಳದ ಬಗ್ಗೆ ಮಾಹಿತಿ ನೀಡುವ ಪೋಸ್ಟರ್ ಅನ್ನು ಸಹ ಹಂಚಿಕೊಂಡಿದೆ. ಈ ಪೋಸ್ಟರ್‌ನಲ್ಲಿ ವಿರಾಟ್ ಕೊಹ್ಲಿ ಅವರ ಭಾವಚಿತ್ರವನ್ನು ಹೊರತುಪಡಿಸಿ ಮತ್ತ್ಯಾವ ಕ್ರಿಕೆಟಿಗನಿಗೂ ಅವಕಾಶ ನೀಡಲಾಗಿಲ್ಲ. ಕೊಹ್ಲಿ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚಿರುವುದರಿಂದ ಕ್ರಿಕೆಟ್ ಅನ್ನು ಸೇರಿಸುವ ಬಗ್ಗೆ ಯೋಚಿಸಲು ಪ್ರಾರಂಭಿಸಿದ್ದೇವೆ ಎಂದು ಒಲಿಂಪಿಕ್ ಸಮಿತಿ ಈ ಹಿಂದೆ ಹೇಳಿತ್ತು.

ಬೆಳಗಾವಿಯಲ್ಲಿ ಮಣ್ಣು ಕುಸಿದು ಕಾರ್ಮಿಕರಿಬ್ಬರ ದುರ್ಮರಣ

ಬೆಳಗಾವಿ, ಏ. 16– ಒಳಚರಂಡಿ ಕಾಮಗಾರಿ ವೇಳೆ ಮಣ್ಣು ಕುಸಿದು ಸಿಲುಕಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆ ಬೆಳಗಾವಿ ನಗರದ ಕೋಟೆಕೆರೆ ಸಮೀಪ ನಡೆದಿದೆ. ಕೂಲಿ ಕಾರ್ಮಿಕರಾದ ಬಸವರಾಜ್, ಶಿವಲಿಂಗ ಮೃತ ದುರ್ದೈವಿಗಳು.

ಬೆಳಗಾವಿ ಹೊರವಲಯದ ರಾಷ್ಟ್ರೀಯ ಹೆದ್ದಾರಿ 4 ಬೆಂಗಳೂರು–ಪುಣೆ ರಸ್ತೆಯ ಪಕ್ಕದ ಸರ್ವಿಸ್ ರಸ್ತೆಗೆ ಹೊಂದಿಕೊಂಡಂತೆ ಕಳೆದ ನಾಲ್ಕು ದಿನಗಳಿಂದ ಒಳಚರಂಡಿ ಕಾಮಗಾರಿ ನಡೆಯುತ್ತಿತ್ತು. ಈಗಾಗಲೇ ಪೈಪ್‌ಗಳನ್ನು ಅಳವಡಿಸಲು ದೊಡ್ಡ ಮಟ್ಟದ ಗುಂಡಿ ತೆಗೆಯಲಾಗಿತ್ತು. ಬುಧವಾರ ಪೈಪ್ ಅಳವಡಿಸಲು ಗುಂಡಿ ಒಳಗೆ ಕಾರ್ಮಿಕರಾದ ಬಸವರಾಜ್ ಮತ್ತು ಶಿವಲಿಂಗ ಇಳಿದಿದ್ದಾರೆ. ಕೆಲಸ ಶುರು ಮಾಡಿದ ಕೆಲವೇ ಹೊತ್ತಿನಲ್ಲಿ ಏಕಾಏಕಿ ಕಾರ್ಮಿಕರಿಬ್ಬರ ಮೇಲೆಯೇ ಮಣ್ಣು ಕುಸಿದು ಬಿದ್ದಿದೆ. ಇದನ್ನು ಗಮನಿಸಿದ ಸ್ಥಳೀಯರು ಹಾಗೂ ಜೊತೆಗೆ ಇದ್ದ ಕಾರ್ಮಿಕರು ಕೂಡಲೇ ಅವರನ್ನು ರಕ್ಷಣೆ ಮಾಡಲು ಮುಂದಾಗಿದ್ದಾರೆ. ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಬಿದ್ದಿದ್ದರಿಂದ ತಕ್ಷಣವೇ ಅವರನ್ನು ಹೊರತೆಗೆಯಲು ಆಗಿಲ್ಲ.

ರಂಗಾಯಣ ಚಿಣ್ಣರ ಮೇಳದಲ್ಲಿ ಒಡನಾಡಿ ಮಕ್ಕಳಿಂದ ಬೀದಿ ನಾಟಕ



ಮೈಸೂರು ರಂಗಾಯಣದ 'ಚಿಣ್ಣರ ಮೇಳ'ದಲ್ಲಿ ಒಡನಾಡಿ ಮಕ್ಕಳಿಂದ 'ಸಂವಿಧಾನದ ಆಶಯಗಳು ಹಾಗೂ ವಂಗ್ಯ' ಬೀದಿ ನಾಟಕ ಪ್ರದರ್ಶಿಸಲಾಯಿತು.

ಮೈಸೂರು, ಏ.16(ಎಂಕೆ)– ಮೈಸೂರು ರಂಗಾಯಣದಲ್ಲಿ ನಡೆಯುತ್ತಿರುವ 'ಚಿಣ್ಣರ ಮೇಳ'ದಲ್ಲಿ ಒಡನಾಡಿ ಮಕ್ಕಳಿಂದ 'ಸಂವಿಧಾನದ ಆಶಯಗಳು ಹಾಗೂ ವಂಗ್ಯ' ಬೀದಿ ನಾಟಕ ಪ್ರದರ್ಶಿಸಲಾಯಿತು.

ರಂಗಾಯಣದ ವನರಂಗದಲ್ಲಿ ಬುಧವಾರ ಕಮ್ಯುನಿಸ್ಟ್ ನಾಟಕಕಾರ ಮತ್ತು ನಿರ್ದೇಶಕ ಸಫ್ದರ್ ಹಶ್ಮಿ ಸ್ಮರಣಾರ್ಥ ಪ್ರದರ್ಶನಗೊಂಡ ಬೀದಿ ನಾಟಕ ಚಿಣ್ಣರ ಮನಸ್ಸಿನಲ್ಲಿ ಭಾರತ ಸಂವಿಧಾನದ ಕುರಿತು ಅರಿವು ಮೂಡಿಸಿತು.


ಈ ವೇಳೆ ನಾಟಕ ಕುರಿತು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಒಡನಾಡಿ ಸಂಸ್ಥೆಯು ಕಳೆದ ಮೂರು ದಶಕಗಳಿಂದ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ ಅವಿರತವಾಗಿ ಶ್ರಮಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಒಡನಾಡಿ ಹೆಣ್ಣು ಮಕ್ಕಳು ಬೀದಿ ನಾಟಕದ ಮೂಲಕ ಪ್ರಸ್ತುತ ವಿದ್ಯಮಾನದಲ್ಲಿ ನಡೆಯುತ್ತಿರುವ ವಿಚಾರಗಳನ್ನು ಅಚ್ಚುಕಟ್ಟಾಗಿ ತಿಳಿಸಿದ್ದಾರೆ ಎಂದು ಶ್ಲಾಘಿಸಿದರು. ಒಡನಾಡಿ ಸಂಸ್ಥೆ ನಿರ್ದೇಶಕರಾದ ಸ್ಟ್ಯಾನ್ಲಿ, ಪರಶು, ಯೋಗಾನಂದ ಮತ್ತಿತರರಿದ್ದರು

ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ವಿರುದ್ಧ ವಂಚನೆ ಪ್ರಕರಣ ದಾಖಲು

ಮೈಸೂರು, ಏ.16– ಮಹಿಳಾ ಮಂಡಳಿಯೊಂದರ ಖಾತೆಯಲ್ಲಿದ್ದ 1.41 ಕೋಟಿ ರೂ.ಗಳನ್ನು ಅಕ್ರಮವಾಗಿ ಬೇರೆ ಖಾತೆಗೆ ವರ್ಗಾವಣೆ ಮಾಡುವ ಮೂಲಕ ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಮೈಸೂರು ಹೊರವಲಯದ ಹೂಟಗಳ್ಳಿ ಶಾಖೆಯಲ್ಲಿ ವಂಚನೆ ಮಾಡಿರುವ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಸುನೀತಾ ಮಹಿಳಾ ಮಂಡಳಿಯ ಅಧ್ಯಕ್ಷೆ ಎಂ.ಕೆ.ಸುನೀತಾ ಅವರು ಈ ಸಂಬಂಧ ಬ್ಯಾಂಕ್‌ನ ಬ್ರಾಂಚ್ ಮ್ಯಾನೇಜರ್ ಶಿವಕುಮಾರ್, ಜನರಲ್ ಮ್ಯಾನೇಜರ್ ಸಿ.ಸುರೇಶ್ ಮತ್ತು ಅಧ್ಯಕ್ಷ ಕೆ.ಎನ್. ಬಸಂತ್ ವಿರುದ್ಧ ದೂರು ಸಲ್ಲಿಸಿದ್ದರು. ತಾವು ಸಾಲಕ್ಕಾಗಿ ನೀಡಿದ್ದ ಚೆಕ್‌ಗಳನ್ನು ಬಳಸಿಕೊಂಡು ತಮ್ಮ ಸಿಸಿಎಲ್ ಸಾಲದ ಖಾತೆಯಿಂದ 1,41,50,000 ರೂ.ಗಳನ್ನು ಅಕ್ರಮವಾಗಿ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿ, ನಂತರ ಅಲ್ಲಿಂದ ಅದೇ ಬ್ಯಾಂಕ್‌ನ ಇತರ ಖಾತೆಗಳಿಗೆ ಹಣವನ್ನು ವರ್ಗಾಯಿಸುವ ಮೂಲಕ ತಮಗೆ ವಂಚನೆ ಮಾಡಲಾಗಿದೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಗಾಳಿ–ಮಳೆ; ನೆಲಕ್ಕುರಳಿದ ಮರಗಳು



ಮೇದರ್ ಬ್ಲಾಕ್‌ನಲ್ಲಿ ಉರುಳಿ ಬಿದ್ದಿರುವ ಮರ.

ಮೈಸೂರು, ಏ.16(ಪಿಎಂ)– ನಗರದ ಹಲವೆಡೆ ಬುಧವಾರ ರಾತ್ರಿ ಕೆಲಕಾಲ ಗಾಳಿ ಸಹಿತ ಭಾರಿ ಮಳೆಯಾಗಿದ್ದು, ಇದರ ಪರಿಣಾಮ ಯಾದವಗಿರಿ, ಸರಸ್ವತಿಪುರಂ ಹಾಗೂ ಲಕ್ಷ್ಮೀಪುರಂನಲ್ಲಿ ಮರಗಳು ಬುಡಸಮೇತ ನೆಲಕ್ಕುರಳಿವೆ.

ನಗರದ ಹೃದಯ ಭಾಗವಾದ ಕೆಆರ್ ವೃತ್ತದ ಸುತ್ತಮುತ್ತ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ರಾತ್ರಿ ಸುಮಾರು 8 ಗಂಟೆ ವೇಳೆಗೆ ಗುಡುಗು ಮಿಂಚಿನಿಂದ ಆರಂಭಗೊಂಡ ಮಳೆ, ಆರಂಭದಲ್ಲಿ ರಭಸದಿಂದ ಸುರಿದಿದೆ. ಜೊತೆಗೆ ಗಾಳಿಯೂ ಜೋರಿದ್ದ ಹಿನ್ನೆಲೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ಮರಗಳ ರಂಬೆ–ಕೊಂಬೆಗಳು ಮುರಿದು ಬಿದ್ದಿವೆ.

ಅಲ್ಲದೆ, ನೆಲಕ್ಕುರಳಿದ್ದ ಮರಗಳನ್ನು ಮೈಸೂರು ಮಹಾನಗರ ಪಾಲಿಕೆ ಅಭಯ–1 ತಂಡ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದೆ. ಆ ಮೂಲಕ ರಸ್ತೆಗೆ ಬಿದ್ದಿದ್ದ ಮರಗಳನ್ನು ತುಂಡರಿಸಿ ತೆರವು ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಲಾಯಿತು.

ಯಾದವಗಿರಿಯ ಮೇದರ್ ಬ್ಲಾಕಿನ 8ನೇ ಕ್ರಾಸ್‌ನಲ್ಲಿ ಮನೆಯೊಂದರ ಕಾಂಪೌಂಡ್‌ಗೆ ಹೊಂದಿಕೊಂಡಂತಿದ್ದ ಮರವೊಂದು ಬುಡಸಮೇತ ರಸ್ತೆಗೆ ಉರುಳಿ ಬಿದ್ದಿದೆ. ಇದರಿಂದ ರಸ್ತೆಯಲ್ಲಿ ಜನ ಹಾಗೂ ವಾಹನ ಸಂಚಾರಕ್ಕೂ ತೊಡಕಾಗಿತ್ತು. ಅಂತೆಯೇ ಸರಸ್ವತಿಪುರಂನ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಮತ್ತೊಂದು ಮರ ಸಹ ಬುಡಸಮೇತ ನೆಲಕ್ಕುಳಿತ್ತು. ಜೊತೆಗೆ ಲಕ್ಷ್ಮೀಪುರಂನ ಆರ್‌ಟಿಓ ಕಚೇರಿ ಬಳಿ ಮತ್ತೊಂದು ಮರ ಬುಡಸಮೇತ ಬಿದ್ದಿತ್ತು. ಅಲ್ಲದೆ, ವಾಣಿವಿಲಾಸ ರಸ್ತೆಯಲ್ಲಿಯೂ ಮತ್ತೊಂದು ಮರ ನೆಲಕ್ಕುರುಳಿತ್ತು. ಎಲ್ಲವನ್ನೂ ಅಭಯ–1 ತಂಡ ತೆರವುಗೊಳಿಸಿತು. ಪಾಲಿಕೆ ಅಭಯ–1 ತಂಡದ ಸಿಬ್ಬಂದಿಯಾದ ಸಾಗರ್, ರಘು, ಪ್ರಕಾಶ್, ಈಶ್ವರ, ಲಂಕೇಶ್ ಮರ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಲಕ್ಷ್ಮೀಪುರಂನಲ್ಲಿ ಉರುಳಿ ಬಿದ್ದ ಮರದ ಕೊಂಬೆಗಳನ್ನು ಕತ್ತರಿಸುತ್ತಿರುವ ಪಾಲಿಕೆ ಸಿಬ್ಬಂದಿ.

ಖದೀಮನ ಬಂಧನ; ಎರಡು ಚಿನ್ನದ ಸರ ವಶ

ಮೈಸೂರು, ಏ.16(ಎಸ್‌ಪಿಎನ್)– ಸರಗಳ್ಳನನ್ನು ಬಂಧಿಸಿರುವ ಸಿಸಿಬಿ ಪೊಲೀಸರು ಈತನಿಂದ 28 ಗ್ರಾಂ ತೂಕದ ಎರಡು ಚಿನ್ನದ ಸರವನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಮುಂಭಾಗದ ಪೀಪಲ್ಸ್ ಪಾರ್ಕ್ ಸಮೀಪ ಇತ್ತೀಚೆಗೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯನ್ನು ವಿಚಾರಣೆಗೊಳಪಡಿಸಿದ ವೇಳೆ ನಜರ್‌ಬಾದ್ ಠಾಣಾ ವ್ಯಾಪ್ತಿಯಲ್ಲಿ ಎರಡು ಚಿನ್ನದ ಸರ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ಈ ಹಿನ್ನಲೆಯಲ್ಲಿ ಈತನಿಂದ 28 ಗ್ರಾಂ ತೂಕದ ಚಿನ್ನದ ಸರವನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ನಜರ್‌ಬಾದ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರತ್ಯೇಕ ಸರಗಳ್ಳತನ ಪ್ರಕರಣ ಪತ್ತೆಗೆ ಮಾ.30ರಂದು ಸಿಸಿಬಿ ಪೊಲೀಸರ ವಿಶೇಷ ತಂಡ ರಚನೆ ಮಾಡಲಾಗಿತ್ತು.

ಈ ಪತ್ತೆ ಕಾರ್ಯವನ್ನು ಸಿಸಿಬಿ ಘಟಕ ಎಸಿಪಿ ಮಹಮ್ಮದ್ ಶರೀಫ್ ರಾವುತರ್ ನೇತೃತ್ವದಲ್ಲಿ ಸಿಸಿಬಿ ಘಟಕದ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್, ಪಿಎಸ್‌ಐ ಮಲ್ಲವ್ವ ಬಂಡಿ, ಮಾರುತಿ ಅಂತರಗಟ್ಟೆ, ಎಎಸ್‌ಐಗಳಾದ ಎಂ.ಆರ್.ಗಣೇಶ್, ರಾಮೇಗೌಡ, ಸಿಬ್ಬಂದಿಗಳಾದ ರಾಮಸ್ವಾಮಿ, ಪ್ರಕಾಶ್, ಜಯರಾಂ, ಸುರೇಶ್, ಮಹೇಶ್, ಉಮಾಮಹೇಶ್, ನರಸಿಂಹರಾಜು, ಮಹೇಶ್, ಶಿವಣ್ಣ ರವಿ, ಗೋವಿಂದ, ಮಮತ, ರಮ್ಯ ಇದ್ದರು.

ನಕ್ಕರೆ ಅದೇ ಸ್ವರ್ಗ

ಸಾಧು : ಪ್ರಾಣಿಗಳಿಗೆ ದೃಷ್ಟಿದೋಷದ ಸಮಸ್ಯೆ ಕಂಡು ಬರುವುದಿಲ್ಲ ಅಲ್ವಾ?

ಜಗ್ಗೇಶ್ : ಇರಬಹುದು ಅನ್ನಿಸುತ್ತೆ. ಯಾಕೆಂದರೆ, ಕನ್ನಡಕ ಧರಿಸಿದ ಯಾವ ಪ್ರಾಣಿಯನ್ನೂ ನಾನು ಈವರೆಗೆ ಕಂಡಿಲ್ಲ...!!

ಮೈಸೂರು ಮಿತ್ರ

ಗುರುವಾರ, 17 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕಾಲ ಕೆಟ್ಟಿತೆಂದು ಜನ ಹೇಳುತ್ತಾರೆ. ಆದರೆ ಕಾಲ ಕೆಡುವುದಿಲ್ಲ. ಕೆಡುವುದು ಜನರ ನಡತೆ, ಜನರ ಆಚಾರ–ವಿಚಾರ ಮಾತ್ರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡೋದೆಲ್ಲಾ ಅನಾಚಾರ, ಮನೆ ಮುಂದೆ ವೃಂದಾವನ

ನಿಮ್ಮ ಪತ್ರಗಳು

■ ನಂದಿನಿ ಹಾಲು: ಬಡವರ ಸುಲಿಗೆ

ಮಾನ್ಯರೆ,

ಹುಬ್ಬಳ್ಳಿಯ ಐಯು ಇಟಗಿಯವರ, ನಂದಿನಿ ಹಾಲು ಕಾಲು ಲೀಟರ್ ಪ್ಯಾಕ್‌ನಲ್ಲೂ ಬರಲಿ ಎಂಬ ಬೇಡಿಕೆ ವಿಚಾರ ಸುದ್ದಿ ಪತ್ರಿಕೆಯೊಂದರಲ್ಲಿ 10.4.25.ಪತ್ರ ಬರೆದಿದ್ದಾರೆ. ಮೈಸೂರು ಹಾಗೂ ಇತರೆಡೆ ನಂದಿನಿಯ 250 ಎಂಎಲ್ ಪ್ಯಾಕ್ ಕೂಡ ಹಿಂದಿನಿಂದಲೂ ಲಭ್ಯವಿದೆ. ಆದರೆ ಬೆಲೆ ಮಾತ್ರ ಲೀಟರ್, ಅರ್ಧ ಲೀಟರ್‌ಗೆ ಹೋಲಿಸಿದರೆ ಬಹಳ ದುಬಾರಿ! ಕೆಎಂಎಫ್‌ನವರು 50 ಎಂಎಲ್ ಹೆಚ್ಚಿಸಿ ಅರ್ಧ ಲೀಟರ್‌ಗೆ 2 ರೂ. ಹೆಚ್ಚು ಪಡೆಯುತ್ತಿದ್ದರು. ಈಗ ಅದನ್ನು ಹಿಂಪಡೆದು ಲೀಟರ್‌ಗೆ 4 ರೂ. ಹೆಚ್ಚಿಸಿದ್ದಾರೆ. ಹೋಮೋಜಿನ್ ಒಂದು ಲೀಟರ್ ಬೆಲೆ 47 ರೂ. ಆದರೆ ಅರ್ಧ ಲೀಟರ್ ಪ್ಯಾಕ್ ಬೆಲೆ 24, ಹೋಮೋಜಿನ್ ಅಲ್ಲದ ಟೋನ್ಡ್ ಹಾಲು ಲೀಟರ್‌ಗೆ 46, ಆದರೆ 1/2ಲೀಟರ್‌ಗೆ 24 ರೂ. ಪಡೆಯುತ್ತಾರೆ. ಹಾಗೆಯೇ 250 ಎಂಎಲ್ ಪ್ಯಾಕ್‌ನ ಬೆಲೆ 13 ರಿಂದ 14 ರೂ.ಗೆ ಏರಿಸಿದ್ದಾರೆ. ಲೀಟರ್ 56 ರೂ. ಆಯಿತು. ಎಂದರೆ ಲೀಟರ್‌ಗೆ 9 ರೂ. ಜಾಸ್ತಿಯಾಯಿತು. 1/2 ಲೀಟರ್ ಹಾಲು ಕೊಳ್ಳಲು ಸಾಮರ್ಥ್ಯವಿಲ್ಲದ ಬಡವರನ್ನು ಸುಲಿಗೆ ಮಾಡುತ್ತಿದೆ. ಹಾಗೆಯೇ 200 ಎಂಎಲ್ ಮೊಸರು ಪೊಟ್ಟಣದ ಬೆಲೆ 12 ರೂ. ಇತ್ತು ಈಗ 13 ರೂ. ಆಗಿದೆ. (ಕೆಜಿ 65 ರೂ.) ಒಂದು ಕೆಜಿ ಮೊಸರಿನ ದರ 54 ರೂ. ಇದೆ. ಎಂದರೆ 200 ಎಂಎಲ್ ಪೊಟ್ಟಣದ ದರ 11 ರೂ. ಇರಬೇಕಿತ್ತು, ಎಂದರೆ ಹೆಚ್ಚುವರಿಯಾಗಿ 3 ರೂ. ಸುಲಿಗೆ ಮಾಡುತ್ತಿದ್ದಾರೆ.

ಹಾಗೆಯೇ ಮಜ್ಜಿಗೆ, ಲಸ್ಸಿಗಳ ಬೆಲೆಯನ್ನೂ ಒಂದು ರೂ. ಏರಿಸಿದ್ದಾರೆ. ಏರಿಸುವ ಅವಶ್ಯಕತೆ ಇರಲಿಲ್ಲ. ಬಡವರ ಪರ ಎಂದು ಪದೇ ಪದೆ ಹೇಳುವ ಸರ್ಕಾರ ಬೆಲೆ ಏರಿಕೆ ವಿಚಾರದಲ್ಲಿ ಜಾಣ ಕುರುಡು, ಜಾಣತನ ಮೆರೆಯುತ್ತಿದೆ. ಇದು ಕನ್ನಡಿಗರ ಸೌಭಾಗ್ಯವೊ, ದೌರ್ಭಾಗ್ಯವೊ!! ಗೊತ್ತಿಲ್ಲ. ಇತರ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಕಡಿಮೆ ಇದೆ ಎಂದು ಸಬೂಬು ಹೇಳುತ್ತಾರೆ. ತಮಿಳುನಾಡಿನಲ್ಲಿ ಒಂದು ಯೂನಿಟ್ ವಿದ್ಯುತ್ ಬೆಲೆ, ಕೇವಲ 4.75.ರೂ ಇದೆ. ಕೊಲ್ಕತ್ತಾದಲ್ಲಿ ಮೆಟ್ರೋ ರೈಲಿನ ಕನಿಷ್ಠ ದರ 6 ಹಾಗೂ ಗರಿಷ್ಠ 45 ಇದೆ. ಜನರ ಕಣ್ಣಿಗೆ ಮಣ್ಣೆರಚ್ಚುವ ಚಾಳಿಯನ್ನು ಇನ್ನಾದರೂ ನಿಲ್ಲಿಸಿ.

–ಬಿ.ಎಂ.ಭ್ರಮರಾಂಭ, ಕನಕದಾಸನಗರ, ಮೈಸೂರು.

■ ಸಮಯೋಚಿತ ಅಭಿಪ್ರಾಯವಿದು...

ಮಾನ್ಯರೆ,

'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರ ಅಂಕಣವನ್ನು ಓದಿದೆ. ಪತ್ರಿಕಾ ರಂಗದ ಪ್ರತಿನಿಧಿಯಾಗಿ ಸಮಯೋಚಿತವಾದ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಂಡಿದ್ದಾರೆ. ದೇಶದ ಪ್ರತಿ ನಾಗರಿಕನು ಯಾವುದಾದರೊಂದು ವ್ಯವಸ್ಥೆಯ ಬಗ್ಗೆ ಅಂತಿಮ ಭರವಸೆಯನ್ನಿಟ್ಟಿದ್ದಾರೆಂದರೆ ಅದು ನ್ಯಾಯಾಲಯ. ನಮ್ಮ ಸಂವಿಧಾನವು ಆ ಸಂಸ್ಥೆಗೆ ನೀಡಿರುವ ಅತ್ಯುನ್ನತ ಜವಾಬ್ದಾರಿಗಳಿಂದಾಗಿ ಅದರ ಹೊಣೆಗಾರಿಕೆಗಳು ಹೆಚ್ಚಾಗಿವೆ. ಈ ಸಂಸ್ಥೆಯನ್ನು ಸರ್ಕಾರದ ಇತರ ಸಂಸ್ಥೆಗಳ ಕಾರ್ಯವೈಖರಿಗಳೊಂದಿಗೆ ಹೋಲಿಕೆ ಮಾಡುವುದು ಸಾಧ್ಯವಿಲ್ಲ. ಈ ಸಂಸ್ಥೆ ತನ್ನ ಸದಸ್ಯರ ಕಾರ್ಯನಿರ್ವಹಣೆಗಳಿಗೆ ಪ್ರಬಲ ರಕ್ಷಾಕವಚ ಹೊಂದಿರುವಂತೆಯೇ, ಅಷ್ಟೇ ಪ್ರಮಾಣದ ಭರವಸೆಯನ್ನು ನಾಗರಿಕರಿಗೆ ನೀಡುವುದು ಅದರ ಆದ್ಯ ಕರ್ತವ್ಯ ತನ್ನ ದೇಶದ ನಾಗರಿಕರ ನಿರೀಕ್ಷೆಗಳನ್ನು ಅದು ಎಂದಿಗೂ ಉಪೇಕ್ಷಿಸಬಾರದು. ಗಂಭೀರ ಕರ್ತವ್ಯ ಲೋಪವೆಸಗಿದ ತನ್ನ ಸದಸ್ಯರ ಗೌರವ ರಕ್ಷಣೆ ಮಾಡುವುದರಿಂದ ನ್ಯಾಯಾಂಗದ ಗೌರವ ರಕ್ಷಿಸಿದಂತಾಗುವುದಿಲ್ಲ. ಯಾವುದೇ ವ್ಯಕ್ತಿ ಮತ್ತು ಸಂಸ್ಥೆಗೆ ಸುಧಾರಣೆ ಎಂಬುದು ನಾಗರಿಕತೆಯ ಉತ್ಕೃಷ್ಟತೆಡೆಗಿನ ದಿಟ್ಟ ಹೆಜ್ಜೆ.

– 'ಮಿತ್ರ'ನ ಹಿರಿಯ ಓದುಗ, ಮೈಸೂರು.

■ ನಿಯಮ ಉಲ್ಲಂಘಿಸಿದವರಿಗೆ ಶಿಕ್ಷೆಯಾಗಲಿ

ಮಾನ್ಯರೆ,

ಜಾನಪದ ತವರೂರಿನ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿರುವ ಹಿಮವದ್ ಗೋಪಾಲಸ್ವಾಮಿಬೆಟ್ಟಕ್ಕೆ ಸಾರ್ವಜನಿಕರಿಗೆ ತಮ್ಮ ತಮ್ಮ ಖಾಸಗಿ ವಾಹನಗಳಲ್ಲಿ ತೆರಳಲು ಅವಕಾಶವಿಲ್ಲದಿರುವಾಗ ಪಕ್ಕದ ಕೇರಳ ರಾಜ್ಯದ ಸಿನಿಮಾ ಚಿತ್ರೀಕರಣಕ್ಕೆ ಖಾಸಗಿ ವಾಹನಗಳಲ್ಲಿ ತೆರಳುವುದಕ್ಕೆ ಅವಕಾಶ ಕಲ್ಪಿಸಿರುವುದು ಅತ್ಯಂತ ಬೇಸರದ ಸಂಗತಿ. ಜೊತೆಗೆ ಗೋಪಾಲಸ್ವಾಮಿ ಬೆಟ್ಟದಲ್ಲಿ ಆನೆಗಳು ಸೇರಿದಂತೆ ವನ್ಯಜೀವಿಗಳು ಸಂಚರಿಸುತ್ತವೆ. ಇಂತಹ ಸಂದರ್ಭದಲ್ಲಿ ಸಿನಿಮಾ ಚಿತ್ರೀಕರಣ ಮಾಡುವ ವೇಳೆ ಪ್ರಾಣಿ ಪಕ್ಷಿಗಳಿಗೆ ತೊಂದರೆಯಾದರೆ ಯಾರು ಹೊಣೆ? ಆದ್ದರಿಂದ ಈ ವಿಷಯದಲ್ಲಿ ನಿಯಮ ಉಲ್ಲಂಘಿಸಿದವರಿಗೆ ಕಾನೂನು ಕ್ರಮ ಕೈಗೊಂಡು, ಮುಂದೆಂದೂ ಇಂತಹ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕು. –ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಕಾರೇಪುರ ಕೆರೆಗೆ ಪೈಪ್‌ಲೈನ್ ಅಳವಡಿಸಿ

ಮಾನ್ಯರೆ,

ಮೈಸೂರು ತಾಲೂಕು ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಕಾರೇಪುರ ಗ್ರಾಮದ ಸರ್ವೆ ನಂ. 145ರಲ್ಲಿ 81 ಎಕರೆ ಸರ್ಕಾರಿ ಜಮೀನಿನಲ್ಲಿ ಕೆರೆ ನಿರ್ಮಾಣ ಮಾಡಿಕೊಟ್ಟಿರುವುದು ಸರಿಯಷ್ಟೆ. ಈಗಾಗಲೇ ಈ ಭಾಗದಲ್ಲಿನ ರೈತರ ಕೊಳವೆ ಬಾವಿಗಳು ಬತ್ತಿ ಹೋಗಿದ್ದು, ಬೆಳೆಗಳು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಈಗಾಗಲೇ ಪಕ್ಕದ ಗ್ರಾಮಗಳಾದ ಚಿನ್ನಂಬಳ್ಳಿ ಮತ್ತು ಉಮ್ಮತ್ತೂರು ಗ್ರಾಮದ ಕೆರೆಗಳಿಗೆ ನೀರು ತುಂಬಿಸಲು ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಕಾರೇಪುರ ಗ್ರಾಮ ಕೇವಲ 4 ಕಿಲೋಮೀಟರ್ ದೂರವಿರುತ್ತದೆ. ಆದುದರಿಂದ ಕಾರೇಪುರ ಗ್ರಾಮದ ಕೆರೆಗೆ ನೀರು ತುಂಬಿಸಲು ಪೈಪ್‌ಲೈನ್ ವ್ಯವಸ್ಥೆ ಮಾಡಿಕೊಡಬೇಕಾಗಿ ಕಳಕಳಿ ಮನವಿ. – ಕಾರೇಪುರ ಗ್ರಾಮಸ್ಥರು

■ ಒಳಚರಂಡಿ ಸಮಸ್ಯೆ ನಿವಾರಿಸಿ

ಮಾನ್ಯರೆ,

ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆ 11ನೇ ಅಡ್ಡ ರಸ್ತೆಯಲ್ಲಿ ಕಳೆದ ಎರಡು ವರ್ಷದಿಂದ ಒಳಚರಂಡಿ ವ್ಯವಸ್ಥೆ ಇಲ್ಲದೆ ತುಂಬಾ ಸಮಸ್ಯೆ ಉಂಟಾಗಿದೆ. ಸದರಿ ಅಡ್ಡ ರಸ್ತೆಯಲ್ಲಿ ಸುಮಾರು 50 ವರ್ಷಗಳ ಹಿಂದೆ ಅಳವಡಿಸಿರುವ ಒಳಚರಂಡಿ ಮಣ್ಣಿನ ಕೊಳವೆಗಳು (ಆರ್ತನ್ ಪೈಪ್ಸ್) ಅಲ್ಲಲ್ಲಿ ಒಡೆದು ಹೋಗಿದ್ದು, ಕೊಳಚೆ ನೀರು ಸರಾಗವಾಗಿ ಹರಿದು ಹೋಗದೆ ಆಗಾಗ್ಗೆ ಕಟ್ಟಿಕೊಂಡು ತೊಂದರೆಯಾಗುತ್ತಿದೆ.

ಈ ವಿಷಯನ್ನು ಸಂಬಂಧಪಟ್ಟ ಪಾಲಿಕೆ ಸದಸ್ಯರಿಗೆ ಅನೇಕ ಬಾರಿ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಹೊಸದಾಗಿ ಒಳಚರಂಡಿ ಪೈಪ್‌ಗಳನ್ನು ಅಳವಡಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಮೂಲಕ ಮನವಿ.


– ನೊಂದ ನಿವಾಸಿಗಳು, ಎನ್.ಆರ್. ಮೊಹಲ್ಲಾ, ಮೈಸೂರು.

ಉಪಕಾರ ಸ್ಮರಣೆ

ಮನೆ ಮಾದೇಗೌಡರು ಪ್ರಾತಃಸ್ಮರಣೀಯರು

ನಾನೂ ಒಬ್ಬ ಮನೆ ಒಡೆಯನಾದ ಪರಿ!

“ ಸಿಐಟಿಬಿ (ಹಾಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಅಧ್ಯಕ್ಷರಾಗಿ ಆಶಾ ಮಂದಿರ ಯೋಜನೆಯಡಿ ಮೈಸೂರು ನಗರದಲ್ಲಿ ಸಾವಿರಾರು ಮಂದಿಗೆ ಸೂರು ಒದಗಿಸಿ 'ಮನೆ ಮಾದೇಗೌಡ' ಎಂದೇ ಖ್ಯಾತರಾಗಿರುವ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರಿಗೆ ಏ.13ರಂದು 'ಉಘೇ ಮಾದೇಗೌಡ್ರುಗೆ' ಎಂಬ ಹೆಸರಿನಲ್ಲಿ ಅಭಿನಂದನಾ ಸಮಾರಂಭ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮ ನಡೆದಿದ್ದು, ಅದರ ಅಂಗವಾಗಿ ಮಾದೇಗೌಡರಿಂದ ಸೂರಿನ ಭಾಗ್ಯ ಪಡೆದ ಮೈಸೂರಿನ ರಾಮಕೃಷ್ಣನಗರ ಐ–ಬ್ಲಾಕ್ ನಿವಾಸಿ, ವಿಶ್ರಾಂತ ಉಪನ್ಯಾಸಕರು ಹಾಗೂ ವಯಸ್ಕರ ಶಿಕ್ಷಣ ತಜ್ಞರೂ ಆದ ಸಿ.ಪಿ.ವಿಶ್ವನಾಥ ಗುಪ್ತ ಅವರು ಬರೆದಿರುವ ಈ ಲೇಖನ 'ಮಿತ್ರ'ನ ಓದುಗರಿಗಾಗಿ.





ಡಿ.ಮಾದೇಗೌಡರು

ಅದು 1986ರ ಆಜುಬಾಜು. ಆ ವೇಳೆಗೆ ನಾನು ಮೈಸೂರಿಗೆ ಬಂದು 12 ವರ್ಷಗಳಾಗಿತ್ತು. ಮೈಸೂರು ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಪೂರೈಸಿ ಕೂಡಲೇ ಅಧ್ಯಾಪಕ ಹುದ್ದೆಗೆ ಸೇರಿ ಕಾರಣಾಂತರದಿಂದ ಬೇರೊಂದು ದಿಕ್ಕಿಗೆ ಔದ್ಯೋಗಿಕ ಪಯಣ ಬೆಳೆಸಬೇಕಿತ್ತು. ಆದರೆ, ಮೈಸೂರನ್ನು ಬಿಟ್ಟು ಹೋಗು ವುದಾಗಿ ಇರಲಿಲ್ಲ. ಮದುವೆಯೂ ಆಗಿತ್ತು. ಮಗಳು ಕೂಡ ಹುಟ್ಟಿದ್ದಳು. ಭಾರತೀಯರಾದ ನಮಗೆ ಸ್ವಂತ ಮನೆ ಮಾಡುವುದು ಎಂದೂ ಒಂದು ಕನಸೇ! ಕೌಟುಂಬಿಕ ಬದುಕು ಹಸನಾಗಲು ಮಡದಿಯಂತೆ ಮನೆಯೂ ಮುಖ್ಯ!

ಆ ವೇಳೆಗೆ ನಾನು ಮೈಸೂರಿನ ನಗರಾಭಿವೃದ್ಧಿ ಪ್ರಾಧಿಕಾರದಿಂದ (ಅಂದಿನ ಸಿಐಟಿಬಿ) ನಿವೇಶನ ಪಡೆಯಲು ಎರಡು ಬಾರಿ ಪ್ರಯತ್ನ ಮಾಡಿದ್ದರೂ ಸಿಕ್ಕಿರಲಿಲ್ಲ. ಲಾಟರಿ ತೆಗೆದು ಹಂಚಿದಾಗಲೂ ಸಿಗಲಿಲ್ಲ. ಸೀನಿಯಾರಿಟಿ ಮೇಲೆ ನನ್ನ ಸರದಿ ಬರಲು ಹತ್ತು–ಹನ್ನೆರಡು ವರ್ಷಗಳು ಕಾಯಬೇಕಿತ್ತು. ಕೆಳಮಧ್ಯಮ ವರ್ಗದವರಿಗೆ ಮಾರುಕಟ್ಟೆ ಬೆಲೆಗೆ ನಿವೇಶನವಾಗಲಿ, ಮನೆಯಾಗಲಿ ಕೊಳ್ಳುವುದು ದುಸ್ತರವಾದ ಕೆಲಸ.

ಇಂತಹ ಸಂಕಷ್ಟ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯರೂ, ಅತೀವ ಮಾನವ ಪ್ರೀತಿಯುಳ್ಳ ಸಜ್ಜನ–ಸಶಕ್ತ ರಾಜಕಾರಣಿಯೂ, ಸಿಐಟಿಬಿ (ಈಗ ಮುಡಾ) ಅಧ್ಯಕ್ಷರೂ ಆಗಿದ್ದ **ಡಿ.ಮಾದೇಗೌಡರು** ದೂರದೃಷ್ಟಿಯಿಂದ ರೂಪಿಸಿದ **ಆಶಾ ಮಂದಿರ** ಯೋಜನೆಯಡಿಯಲ್ಲಿ ನಿವೇಶನ/ಮನೆಯಿಲ್ಲದ ಮೈಸೂರಿನ ಖಾಯಂ ನಿವಾಸಿಗಳಿಗೆ ಮೈಸೂರಿನ ಹೊರವರ್ತುಲದಲ್ಲಿ, ಸಾಧ್ಯವಾದಷ್ಟೂ ಅರ್ಜಿದಾರರು ಆಯ್ಕೆ ಮಾಡಿಕೊಂಡ ಬಡಾವಣೆಯಲ್ಲಿ, ಅವರ ಆದಾಯಕ್ಕೆ ತಕ್ಕಂತೆ ನಿವೇಶನ/ ಮನೆ ಕೊಡುವ ಭರವಸೆ ನೀಡಿದರು. ಅಂತೆಯೇ ಮೈಸೂರಿನ ಹೊರ ವರ್ತುಲದಲ್ಲಿ 3 ಸಾವಿರ ಎಕರೆ ಭೂಮಿಯಲ್ಲಿ ಎಂಟು ಬಡಾವಣೆಗಳಲ್ಲಿ ಆಶಾಮಂದಿರ ಯೋಜನೆಯು 18 ತಿಂಗಳಲ್ಲಿ ಅನುಷ್ಠಾನಕ್ಕೆ ಬಂದು ಅರ್ಜಿದಾರರರಿಗೆ ನೀಡಿದ ಭರವಸೆಯನ್ನು ಅತೀ ಕಡಿಮೆ ಅವಧಿಯಲ್ಲಿ ಈಡೇರಿಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮಾತ್ರವಲ್ಲ ಭಾರತ ದೇಶದ ಯಾವುದೇ ನಗರಾಭಿವೃದ್ಧಿ ಸಂಸ್ಥೆಯಾಗಲಿ, ಅದುವರೆಗೆ, ಈಗಲೂ ಕೂಡ ಮಾಡದ ಸಾಹಸ ರೀತಿಯಲ್ಲಿ ಮಾದೇಗೌಡರು ಆಶಾಮಂದಿರ ಯೋಜನೆಯನ್ನು ಜಾರಿಗೆ ತಂದು ಇತಿಹಾಸ ನಿರ್ಮಾಣ ಮಾಡಿದರು.

ಈ ಯೋಜನೆಯ ಅತ್ಯಂತ ಪ್ರಮುಖ ಉದ್ದೇಶ ಮೈಸೂರು ಖಾಯಂ ನಿವಾಸಿಗಳಿಗೆ ಸ್ವಂತ ಮನೆಯಾಗಲಿ, ನಿವೇಶನವಾಗಲಿ ಇಲ್ಲದ ಪಕ್ಷದಲ್ಲಿ ಅದನ್ನು ಒದಗಿಸುವುದು. ಮೈಸೂರು ಹೊರವಲಯದಲ್ಲಿ ಅಗತ್ಯ ಜಮೀನನ್ನು ರೈತರಿಂದ ಕೊಳ್ಳುವುದು, ಹಲವು ಬಡಾವಣೆಗಳನ್ನು ವ್ಯವಸ್ಥಿತ ರೂಪದಲ್ಲಿ ನಿರ್ಮಿಸುವುದು, ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸುವುದು, ಅರ್ಜಿದಾರರು ಅರ್ಹರೇ ಎಂದು ಪರಿಶೀಲಿಸುವುದು, ಅನರ್ಹರ ಅರ್ಜಿಗಳನ್ನು ಹಿಂದಕ್ಕೆ ಪಡೆಯಲು ಹೇಳುವುದು, ಅರ್ಹರಿಗೆ ಅವರ ಆರ್ಥಿಕ ಹಿನ್ನೆಲೆಯ ಆಧಾರದ ಮೇಲೆ ಅವರು ಆಯ್ಕೆ ಮಾಡಿದ ಬಡಾವಣೆಯಲ್ಲಿ ನಿವೇಶನ/ ಮನೆ ಮಂಜೂರು ಮಾಡುವುದು, ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವುದು, ಅಪ್ರೂವ್ಡ್ ಪ್ಲಾನ್‌ಗಳನ್ನು ಮುಂಗಡವಾಗಿ ಒದಗಿಸುವುದು, ಮನೆ ಕಟ್ಟಲು ಬ್ಯಾಂಕ್ ಸಾಲ ಕೊಡಿಸುವುದು... ಇತ್ಯಾದಿ ಎಲ್ಲವೂ ಹದಿನೆಂಟು ತಿಂಗಳೊಳಗೆ ಸಮರೋಪಾದಿಯಲ್ಲಿ, ಆಂದೋಲನದ ರೀತಿಯಲ್ಲಿ ಮಾಡಿ ಮುಗಿಸಿದ ಕೀರ್ತಿ ಮಾದೇಗೌಡ ಅವರಿಗೆ ಸಲ್ಲಬೇಕು.

ಆಶಾಮಂದಿರ ಯೋಜನೆ ಅತ್ಯಂತ ವ್ಯವಸ್ಥಿತ ರೂಪದಲ್ಲಿ ಅನುಷ್ಠಾನಗೊಂಡು 1987ರಲ್ಲಿ ನನಗೆ ನಿವೇಶನ ದೊರೆಯಿತು. ಅದು ನನ್ನ ಬದುಕಿನ ಅವಿಸ್ಮರಣೀಯ ಸಂದರ್ಭ. ಅಸ್ಥಿರ ಕೆಲಸ, ಕಡಿಮೆ ಆದಾಯದಲ್ಲಿ ಬದುಕಿನ ಸಂಕಷ್ಟದಿಂದ ನರಳುತ್ತಿದ್ದಂತಹ ಸಂದರ್ಭದಲ್ಲಿ ನನ್ನ ಬದುಕಿಗೊಂದು ಅರ್ಥ ಇದೆ, ನಿರಾಶರಾಗುವುದು ಬೇಡ ಅನ್ನುವ ಜೀವ ಭರವಸೆ ನೀಡಿದ್ದು ಮಾದೇಗೌಡರು. ನನ್ನಂತೆ ಹಲವು ಸಾವಿರ ಮಂದಿಯ ಬಾಳ ಬೆಳಕಾದ ಅವರ ಕೈಂಕರ್ಯವನ್ನು ಮಾತುಗಳಲ್ಲಿ ಹೇಳಲಿಕ್ಕೆ ಆಗುವುದಿಲ್ಲ.

ಮಡದಿಯ ಒಡವೆ ಮಾರಿದ ಹಣ ಸಾಲದೆ ಹೊರಗಡೆ ಸಾಲ ಪಡೆದು ಇಪ್ಪತ್ತೆಂಟು ಸಾವಿರ ರೂಪಾಯಿಗಳೊಂದಿಗೆ 12x18 ಮೀ. ಅಳತೆಯ ನಿವೇಶನಕ್ಕೆ ಅರ್ಜಿ ಹಾಕಿದ್ದು ಸಾರ್ಥಕವಾಯಿತು. ಕೊಳೆಗೇರಿಗಳಲ್ಲಿ ವಾಸ ಮಾಡುವವರಿಗೆ, ಅವರ ಸ್ವಾಭಿಮಾನಕ್ಕೆ ಬೆಲೆ ಕೊಟ್ಟು, ಸಾಂಕೇತಿಕವಾಗಿ ಕೇವಲ 1 ರೂಪಾಯಿಗೆ ಹಾಗೂ ಬಡಜನರಿಗೆ 1670 ರೂಪಾಯಿಗಳಿಗೆ ನಿವೇಶನಗಳು ಲಭ್ಯವಾಯಿತು. ಸಾಮಾಜಿಕ ನ್ಯಾಯ ಅಂದರೆ ಇದಲ್ಲವೇ?

ಇದರಿಂದಾಗಿ ಅಂದಿನ ಮೈಸೂರಿಗೆ ಇನ್ನರ್ಧ ಮೈಸೂರನ್ನು ಸೇರಿಸಿದ ಕೀರ್ತಿ ಮಾದೇಗೌಡರದ್ದು. ನಮ್ಮ ನೆಚ್ಚಿನ ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂ ಅವರು ನಮ್ಮ ಕನಸು ದೊಡ್ಡದಿರಬೇಕು ಎಂದಿದ್ದರು. ಮಾದೇಗೌಡರ ಕನಸು ದೊಡ್ಡದಾಗಿತ್ತು. **ಆದರೆ ಅವರ ಕನಸು ಬೇರೆಯವರಿಗಾಗಿ!** ಅದನ್ನು ನನಸು ಮಾಡುವ ಸಂಕಲ್ಪ ಶಕ್ತಿ ಮಾತ್ರ ಅವರದು. ಶ್ರೀ ರಾಮಕೃಷ್ಣರ ಕೃಪೆ ಅವರಿಗೆ ದಂಡಿಯಾಗಿ ಇತ್ತು. ಆದುದರಿಂದಲೇ ಅಕ್ಷರಶಃ ಆಶಾಮಂದಿರ ಯೋಜನೆ ನಭೂತೋ ನಭವಿಷ್ಯತೋ ಅನ್ನುವಂಥ ವಸತಿ ಕ್ರಾಂತಿ ಆಯಿತು. ದೊಡ್ಡ ಪ್ರಮಾಣದ ಯಶೋಗಾಥೆ ಇದು. ಒಂದೇ ಯೋಜನೆಗೆ ಮಾದೇಗೌಡರು ದಂತಕಥೆ ಆದರು.

ಸುಮಾರು 25 ವರ್ಷಗಳ ಹಿಂದೆ ಬ್ಯಾಂಕ್ ಸಾಲ ಪಡೆದು ಮನೆಯನ್ನು – # 664, "ಸೂರ್ಯ", 3ನೆಯ ಕ್ರಾಸ್, ಐ ಬ್ಲಾಕ್, ರಾಮಕೃಷ್ಣನಗರ, ಮೈಸೂರು–ಕಟ್ಟಿಕೊಂಡು ಈಗ ಬಾಳ ಸಂಜೆಯಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದೇನೆ. ಮೈಸೂರಿನಂತಹ ಪ್ರಶಾಂತ ಸಾಂಸ್ಕೃತಿಕ ನಗರದಲ್ಲಿ ಒಳ್ಳೆಯ ಬಡಾವಣೆಯಲ್ಲಿ ಕೋಟಿ ರೂ.ಗಳಿಗೆ ಮಿಗಿಲಾದ ಮನೆಯ ಒಡೆಯನಾಗಿ ಸ್ವಾಭಿಮಾನದಿಂದ ಇಂದು ನಾನು ಬದುಕುತ್ತಿದ್ದೇನೆಂದರೆ ಅದರ ಕ್ರೆಡಿಟ್ ಮಾದೇಗೌಡರಿಗೇ ಸಲ್ಲಬೇಕು. ಅವರಿಗೆ ನನ್ನ ಮನಸ್ಸುಮಾಂಜಲಿ.

ಇಂದು ನನ್ನ ವೈಯಕ್ತಿಕ ಹಾಗೂ ಕೌಟುಂಬಿಕ ನೆಮ್ಮದಿಗೆ ಮುಖ್ಯ ಕಾರಣ ಮಾನ್ಯಶ್ರೀ ಡಿ.ಮಾದೇಗೌಡರು. ಮನೆಯಲ್ಲಿ ಅವರ ಭಾವಚಿತ್ರ ಇಟ್ಟಿಲ್ಲ... ನಿಜ... ಆದರೆ ಅವರ ಚಿತ್ರ ನನ್ನ ಭಾವಕೋಶದಲ್ಲಿ ಅಚ್ಚೊತ್ತಿದೆ. ಅವರು ಪ್ರಾತಃಸ್ಮರಣೀಯರು.

ಮಾದಕ ವ್ಯಸನಿಗಳ ಹಾವಳಿ ತಪ್ಪಿಸಿ; ಪುಂಡರಿಂದ ಸಂಜೆ ವೇಳೆ ಹೆಣ್ಣು ಮಕ್ಕಳ ಮನೆಯಿಂದ ಹೊರಗೆ ಕಳಿಸಲು ಭಯವಾಗುತ್ತೆ!

• ಬೆಲವತ್ತದ ಜನಸಂಪರ್ಕ ಸಭೆಯಲ್ಲಿ ಪೊಲೀಸ್ ಆಯುಕ್ತರಿಗೆ ನಿವಾಸಿಗಳ ದೂರು • ಹಾಡಹಗಲೇ ಕಳ್ಳತನ; ಬೈಕ್ ವ್ಹೀಲಿಂಗ್ ವ್ಯಾಪಕವಾಗಿದೆ • ಭಾರೀ ವಾಹನ ದಟ್ಟಣೆಯಿಂದ ರಸ್ತೆಗಿಳಿಯಲು ಭಯವಾಗುತ್ತೆ • ನಿವಾಸಿಗಳ ಸಮಸ್ಯೆ ಪರಿಹರಿಸುವ ಭರವಸೆ

ಮೈಸೂರು, ಏ.16(ಎಂಕೆ)– ಮಾದಕ ವ್ಯಸನಿಗಳ ಹಾವಳಿ... ದಿನೇ ದಿನೆ ಅಪಘಾತಗಳ ಸಂಖ್ಯೆ ಹೆಚ್ಚಳ... ತಾಮ್ರದ ಹಂಡೆಗಳು ಕಳವು... ಬೈಕ್ ವ್ಹೀಲಿಂಗ್ ಪುಂಡರ ಉಪಟಳ ಸೇರಿದಂತೆ ಹತ್ತಾರು ಸಮಸ್ಯೆಗಳು ಸುರಿಮಳೆಗೈದ ಬೆಲವತ್ತ ಗ್ರಾಮಸ್ಥರು...!

ಮೈಸೂರಿನ ರಿಂಗ್‌ರಸ್ತೆಗೆ ಹೊಂದಿಕೊಂಡಿರುವ ಬೆಲವತ್ತ ಗ್ರಾಮದಲ್ಲಿ ಬುಧವಾರ ವಿಜಯನಗರ ಉಪ ವಿಭಾಗದ ಮೇಟಗಳ್ಳಿ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಸಮಸ್ಯೆಗಳ ಮಹಾಪೂರವೇ ಕೇಳಿ ಬಂದಿತು.

ವರುಣ ನಾಲೆ ಬಳಿ ಮಾದಕ ವ್ಯಸನಿಗಳ ಹಾವಳಿ ಹೆಚ್ಚಾಗಿದೆ. ರಿಂಗ್ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿದ್ದು, ಸಿಗ್ನಲ್ ಅಳವಡಿಸಿ ಇಲ್ಲವೇ ಸಂಚಾರಿ ಪೊಲೀಸರನ್ನು ನಿಯೋಜಿಸಿ. ಗ್ರಾಮದ ಹಳೆ ಮನೆಗಳಲ್ಲಿರುವ ತಾಮ್ರದ ಹಂಡೆಗಳು ಇನ್ನಿತರೆ ಪದಾರ್ಥಗಳ ಕಳ್ಳತನ ಹೆಚ್ಚಾಗಿದೆ. ರಾತ್ರಿಯಾದರೆ ಬೈಕ್ ವ್ಹೀಲಿಂಗ್ ಮಾಡುವುದು, ಜೋರಾಗಿ ಸಾಂಗ್ ಹಾಕಿಕೊಂಡು ರಸ್ತೆಯಲ್ಲಿ ಗುಂಪು ಗುಂಪಾಗಿ ನಿಲ್ಲುವ ಪುಂಡರ ಹಾವಳಿ ಮಿತಿಮೀರಿದ್ದು ಕಡಿವಾಣ ಹಾಕುವಂತೆ ಮನವಿ ಮಾಡಲಾಯಿತು.

ಗ್ರಾಪಂ ಸದಸ್ಯ ವಿಶ್ವನಾಥ್, ಹೆಬ್ಬಾಳ ಕೈಗಾರಿಕಾ ಪ್ರದೇಶ ಮತ್ತು ಪಕ್ಕದಲ್ಲೇ ಜಿಆರ್‌ಎಸ್ ಇರುವುದರಿಂದ ಬೆಳಗ್ಗೆ ಮತ್ತು ಸಂಜೆ ರಿಂಗ್ ರಸ್ತೆಯಲ್ಲಿ ವಾಹನಗಳ ದಟ್ಟಣೆ ವಿಪರೀತವಾಗಿದೆ. ಬೆಲವತ್ತ ಗ್ರಾಮದ ಜಂಕ್ಷನ್ ಬಳಿ ಸಿಗ್ನಲ್ ಅಳವಡಿಸುವುದು ಅವಶ್ಯವಾಗಿದೆ. ಇಲ್ಲವೇ ಸಂಚಾರ ಪೊಲೀಸ್ ಸಿಬ್ಬಂದಿ ನಿಯೋಜಿಸಿ. ಪ್ರತಿನಿತ್ಯ ಅಪಘಾತಗಳು ನಡೆಯುತ್ತಿವೆ ಎಂದು ತಿಳಿಸಿದರು.



ಮೈಸೂರಿನ ಬೆಲವತ್ತ ಗ್ರಾಮದಲ್ಲಿ ಬುಧವಾರ ನಡೆದ ಜನಸಂಪರ್ಕ ಸಭೆಯಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿದರು.

ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿ, ಕ್ರೀಡಾಂಗಣ ಅವಶ್ಯವಿದೆ...

ಉಪನ್ಯಾಸಕಿ ರಕ್ಷಿತಾ, ಅಂಗನವಾಡಿ ಶಿಕ್ಷಕಿ ವಿದ್ಯಾ ಹಾಗೂ ಗ್ರಾಪಂ ಸದಸ್ಯೆ ಪ್ರೇಮಾ, ಬೆಲವತ್ತ ಗ್ರಾಮದಲ್ಲಿ 10 ಲಕ್ಷಕ್ಕೂ ಹೆಚ್ಚು ಜನರಿದ್ದು, ಒಂದು ದಿನದಲ್ಲಿ ಐದು ಸಲ ಮಾತ್ರ ಸಾರಿಗೆ ಬಸ್ ಬರಲಿದೆ. ಅದು ಕೆಲ ಸಮಯಕ್ಕೆ ನಿಗದಿಯಾಗಿದೆ. ಇದರಿಂದ ಗ್ರಾಮದಿಂದ ಬೇರೆ ಬೇರೆ ಕಡೆಗೆ ತೆರಳುವ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೆಲಸಕ್ಕೆ ತೆರಳು ಮಹಿಳೆಯರ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ. ಮೇಟಗಳ್ಳಿವರೆಗೆ ನಡೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಎಲ್ಲಾ ಟೈಂನಲ್ಲೂ ಆಟೋ ಅಥವಾ ಖಾಸಗಿ ವಾಹನಗಳ ನೆಚ್ಚಿಕೊಳ್ಳುವ ಪರಿಸ್ಥಿತಿ ಇದೆ ಎಂದು ಮನವಿ ಮಾಡಿದರು. ಹಾಗೆಯೇ ಕೆಲ ಗ್ರಾಮಸ್ಥರು, ಗ್ರಾಮಕ್ಕೆ ಕ್ರೀಡಾಂಗಣದ ಅಗತ್ಯವಿದ್ದು, ತ್ವರಿತವಾಗಿ ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಿಸಲು ಸಂಬಂಧಪಟ್ಟ ಇಲಾಖೆ ಸೂಚಿಸುವಂತೆಯೂ ಮನವಿ ಮಾಡಿದರು.

ಹಾಗೆಯೇ ಗ್ರಾಮಸ್ಥರಾದ ಶಾಂತಿ ಶರವಣ ಮಾತನಾಡಿ, ಸಂಜೆಯಾಗುತ್ತಿದ್ದಂತೆ ಗ್ರಾಮದ ಅಂಗಡಿಗಳ ಮುಂದೆ ಹುಡುಗರ ಗುಂಪು ಹೆಚ್ಚಾಗಿರುತ್ತದೆ. ಹೆಣ್ಣು ಮಕ್ಕಳನ್ನು ಅಂಗಡಿಗಳಿಗೆ ಕಳುಹಿಸಲು ಭಯವಾಗುತ್ತದೆ ಎಂದರೆ, ವಕೀಲ ಕುಮಾರ್, ರಾತ್ರಿ ವೇಳೆ ವೀಲ್ಹಿಂಗ್ ಮಾಡುವ ಪುಂಡರ ಹಾವಳಿ ಮಿತಿ ಮೀರಿದೆ ಅಲ್ಲದೆ ವರುಣ ನಾಲೆ ಬಳಿ ಗಾಂಜಾ ಸೇವಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮಸ್ಯೆಗಳಿಗೆ ತ್ವರಿತ ಸ್ಪಂದನೆ: ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದ ಬಳಿಕ ಮಾತನಾಡಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಾನು ಮೈಸೂರು ನಗರಕ್ಕೆ ಕಮಿಷನರ್ ಆಗಿ ಅಧಿಕಾರ ಸ್ವೀಕಾರ ಮಾಡಿದಾಗಿನಿಂದ ಬೆಲವತ್ತ ಗ್ರಾಮದಿಂದ ಕಂಪ್ಲೆಂಟ್‌ಗಳು ಜಾಸ್ತಿ ಬರುತ್ತಿರುವುದನ್ನು ಗಮನಿಸಿದ್ದೇನೆ. ಹಾಗಾಗಿ ಬೆಲವತ್ತ ಗ್ರಾಮಕ್ಕೆ ಭೇಟಿ ನೀಡಬೇಕು ಎಂದುಕೊಂಡಿದ್ದೆ. ಇವತ್ತಿನ ಜನಸಂಪರ್ಕ ಸಭೆಯಲ್ಲಿ ಸಾಕಷ್ಟು ಸಮಸ್ಯೆಗಳು ಕೇಳಿ ಬಂದಿದ್ದು, ಕಾನೂನು ಸುವ್ಯವಸ್ಥೆ ಮತ್ತು ಸಂಚಾರಕ್ಕೆ ಸಂಬಂಧಪಟ್ಟ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಸಿವಿಲ್ ಸಮಸ್ಯೆಗಳ ಕುರಿತು ಕೂಡ ಕ್ರಮ ತೆಗೆದುಕೊಳ್ಳಲಾಗುವುದು. ಟ್ರಾಫಿಕ್ ಸಮಸ್ಯೆಯನ್ನು ಕೂಡಲೇ ಬಗೆಹರಿಸಲಾಗುವುದು. ಅಂಗಡಿಗಳ ಎದುರು ಗುಂಪು ಗುಂಪಾಗಿ ನಿಲ್ಲುವವರನ್ನು ನಿಯಂತ್ರಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೆಯೇ ಬೇರೆ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳಿಗೂ ಪತ್ರ ಬರೆಯಲಾಗುವುದು. ಆದಷ್ಟು ಎಲ್ಲರೂ ಸೇರಿ ಕಾನೂನು ಸುವ್ಯವಸ್ಥೆ ಕಾಪಾಡುವ ಕೆಲಸ ಮಾಡಬೇಕಿದೆ. ಮತ್ತೆ ಮುಂದಿನ ತಿಂಗಳು ಜನ ಸಂಪರ್ಕ ಸಭೆ ನಡೆಸಲಾಗುವುದು ಎಂದರು.

ನೀವೇ ಪೊಲೀಸರಾಗಿ...!

“ 14 ಲಕ್ಷ ಜನಸಂಖ್ಯೆಯುಳ್ಳ ಮೈಸೂರು ನಗರದಲ್ಲಿ 2 ಸಾವಿರ ಪೊಲೀಸ್ ಸಿಬ್ಬಂದಿಗಳಿದ್ದು, ಎಲ್ಲೆಲ್ಲಿಗೆ ಅಂತ ಪೊಲೀಸರನ್ನು ನಿಯೋಜಿಸಲು ಸಾಧ್ಯ. ಹಾಗಾಗಿ ನೀವ್ಯಾಕೆ ಪೊಲೀಸ್ ಆಗಬಾರದು. ಪೊಲೀಸರು ಮಾತ್ರವೇ ತಪ್ಪನ್ನು ಗಮನಿಸುವುದಲ್ಲ ಗ್ರಾಮದಲ್ಲಿರುವ ಹಿರಿಯರು ಕೂಡ ತಮ್ಮ ಗ್ರಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಯಾವುದೇ ಸಮಸ್ಯೆಗಳಾದರೂ ಮಾಹಿತಿ ನೀಡಿ. ಎಲ್ಲಾ ಕಡೆ ಸಿಸಿಟಿವಿ ಕ್ಯಾಮರಾ ಪೊಲೀಸ್ ಇಲಾಖೆಯಿಂದಲೇ ಅಳವಡಿಸುವುದು ಕಷ್ಟ. ನಿಮ್ಮ ನಿಮ್ಮ ಏರಿಯಾಗಳಲ್ಲಿ ನಿಮ್ಮಿಂದ ಆದಷ್ಟು ಸಿಸಿಟಿವಿ ಕ್ಯಾಮರಾ ಅಳವಡಿಸಿಕೊಂಡರೆ, ಅಪರಾಧ ಪ್ರಕರಣಗಳನ್ನು ಬೇಗ ಇತ್ಯರ್ಥಗೊಳಿಸುವುದರ ಜೊತೆಗೆ ಅಪರಾಧಗಳಿಗೆ ಕಡಿವಾಣ ಆಗಬಹುದು.

– ಸೀಮಾ ಲಾಟ್ಕರ್, ಆಯುಕ್ತರು, ಮೈಸೂರು ನಗರ ಪೊಲೀಸ್

ಕಮಾಂಡೊ ಪೊಲೀಸ್ ಬೀಟ್: ಡಿಸಿಪಿ(ಕಾನೂನು ಮತ್ತು ಸುವ್ಯವಸ್ಥೆ) ಎಂ.ಮುತ್ತುರಾಜ್ ಮಾತನಾಡಿ, ಗ್ರಾಮದಲ್ಲಿ ಸಂಜೆ 6 ಗಂಟೆ ನಂತರ ಅಂಗಡಿಗಳ ಮುಂದೆ ಹುಡುಗರ ಗುಂಪು ಹೆಚ್ಚಾಗುತ್ತಿರುವುದಕ್ಕೆ ಪ್ರತಿದಿನ ಸಂಜೆ ಕಮಾಂಡೊ ಪೊಲೀಸ್ ಬೀಟ್ ನಡೆಸುವ ಮೂಲಕ ಕಡಿವಾಣ ಹಾಕಲಾಗುವುದು. ಸಿವಿಲ್ ಡ್ರೆಸ್‌ನಲ್ಲಿಯೂ ಪೊಲೀಸ್ ಸಂಚರಿಸಲಿದ್ದು, ಹೆಣ್ಣು ಮಕ್ಕಳಿಗೆ ತೊಂದರೆ ಕೊಡುವ ಪುಂಡರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಿಬ್ಬಂದಿ ನಿಯೋಜನೆ: ಡಿಸಿಪಿ (ಅಪರಾಧ ಮತ್ತು ಸಂಚಾರ ವಿಭಾಗ) ಸುಂದರ್‌ರಾಜ್ ಮಾತನಾಡಿ, ರಿಂಗ್‌ರಸ್ತೆ ಹಾಗೂ ಬೆಲವತ್ತ ಗ್ರಾಮದ ಜಂಕ್ಷನ್ ಬಳಿ ಸಿಗ್ನಲ್ ಲೈಟ್ ಅಳವಡಿಕೆ ಅಥವಾ ಸಿಬ್ಬಂದಿ ನಿಯೋಜನೆ ಮಾಡುವ ಕುರಿತು ಗಮನ ಹರಿಸಲಾಗುವುದು. ಬೆಳಗ್ಗೆ ಮತ್ತು ಸಂಜೆ ಸಂಚಾರ ಪೊಲೀಸರನ್ನು ಜಂಕ್ಷನ್ ಬಳಿ ನಿಯೋಜಿಸಲಾಗುವುದು. ರಾತ್ರಿ ವೇಳೆ ವ್ಹೀಲಿಂಗ್ ಮಾಡುವವರ, ಮಾದಕ ವಸ್ತುಗಳನ್ನು ಬಳಕೆ ಮಾಡುವವರ ಜೊತೆ ಗ್ರಾಮಸ್ಥರು ಜಗಳಕ್ಕೆ ಹೋಗದೆ ಮೊಬೈಲ್‌ನಲ್ಲಿ ಫೋಟೊ ಅಥವಾ ವಿಡಿಯೋ ತೆಗೆದು ಕಳಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಹಾಗೆಯೇ ಹಂಡೆ ಕಳ್ಳತನ ಪ್ರಕರಣಗಳಿಗೂ ಕಡಿವಾಣ ಹಾಕಲಾಗುವುದು ಎಂದು ಹೇಳಿದರು.

ಜನಸಂಪರ್ಕ ಸಭೆಯಲ್ಲಿ ಎಸಿಪಿಗಳಾದ ಶಿವಶಂಕರ್, ಪಿ.ರವಿಪ್ರಸಾದ್, ಮೇಟಗಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಆರ್.ಲವ, ಸರಸ್ವತಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಶಬರೀಷ್, ಗೌತಮ್ ಗೌಡ, ಜೋಸ್ನಾ ರಾಜು, ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷ ಸಿ.ಮಾದೇಶ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ವಿಜೃಂಭಣೆಯ ಹಿರೀಸಾವೆ ಚೌಡೇಶ್ವರಿ ದೇವಿ ರಥೋತ್ಸವ



ಸಾವಿರಾರು ಭಕ್ತರ ಸಮ್ಮುಖದಲ್ಲಿ ಚೌಡೇಶ್ವರಿ ದೇವಿಯ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಹಿರೀಸಾವೆ, ಏ.16– ಇಲ್ಲಿನ ಗ್ರಾಮ ದೇವತೆ ಚೌಡೇಶ್ವರಿ ದೇವಿಯ ರಥೋತ್ಸವವು ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಕೆರೆ ಏರಿ ಮೇಲೆ ಇರುವ ದೇವರ ಮೂಲಸ್ಥಾನದಲ್ಲಿ ಬೆಳಿಗ್ಗೆ ಉತ್ಸವ ಮೂರ್ತಿಗೆ ಚಿನ್ನಾಭರಣಗಳಿಂದ ಅಲಂಕಾರ ಮಾಡಲಾಯಿತು. ನಂತರ ವಿಶೇಷ ಪೂಜೆ ಸಲ್ಲಿಸಿ, ಭಕ್ತರ ವೇದ ಘೋಷಣೆಗಳು ಮತ್ತು ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಗ್ರಾಮಕ್ಕೆ ಕರೆತಂದು, ಊರು ಮಧ್ಯದಲ್ಲಿರುವ ಉಯ್ಯಾಲೆ ಕಂಬದಲ್ಲಿ ಕೂರಿಸಲಾಯಿತು.

ರಾಹುಕಾಲದಲ್ಲಿ ರಥಕ್ಕೆ ಬಲಿ ಅನ್ನವನ್ನು ಅರ್ಪಿಸಲಾಯಿತು. ಭಕ್ತರು ದೇವಿಯನ್ನು ರಥ ಮತ್ತು ಉಯ್ಯಾಲೆ ಕಂಬದ ಸುತ್ತ ಮೂರು ಸುತ್ತು ಉತ್ಸವ ನಡೆಸಿದರು. ಹೂವಿನಿಂದ ಶೃಂಗರಿಸಿದ್ದ ರಥದ ಮೇಲೆ ಅಮ್ಮನವರನ್ನು ಕೂರಿಸಲಾಯಿತು. ಭಕ್ತರು ದೇವಿಗೆ ಪೂಜೆ ಸಲ್ಲಿಸಿದ ನಂತರ ಮಧ್ಯಾಹ್ನ 1.45ಕ್ಕೆ ರಥವನ್ನು ಪೂರ್ವ ದಿಕ್ಕಿಗೆ ಭಕ್ತಿಭಾವದಿಂದ ಜನರು ರಥವನ್ನು ಎಳೆದು ಪುನೀತರಾದರು. ಬಾಳೆಹಣ್ಣು, ದವನವನ್ನು ರಥದ ಮೇಲೆ ಎಸೆದರು. ಹರಕೆ ಹೊತ್ತಿದ್ದ ಭಕ್ತರು ಹರಕೆ ಅರ್ಪಿಸಿದರು.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಸೇರಿದಂತೆ ವಿವಿಧ ಸಂಘಗಳಿಂದ ಪಾನಕ, ಫಲಾಹಾರವನ್ನು ಭಕ್ತರಿಗೆ ವಿತರಿಸಿದರು. ರಥೋತ್ಸವದ ನೇತೃತ್ವವನ್ನು ಗ್ರಾಮದ ಅರಳಿಮರದ ಮನೆತನದವರು ವಹಿಸಿದ್ದರು. ದೇವಸ್ಥಾನದ ಮುಖ್ಯಸ್ಥ ಅನಂತರಾಮಯ್ಯ ಮತ್ತು ಧರ್ಮದರ್ಶಿ ಫಣೀಶ್ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಟ್ಟರು.

ಬೆಳಗೀಹಳ್ಳಿ, ಸೋರೆಕಾಯಿಪುರ, ತೂಬಿನಕೆರೆ, ಹೊನ್ನೇನಹಳ್ಳಿರುವ ದೇವರ ಮನೆತನದವರು ವಿಶೇಷ ಪೂಜೆಗಳನ್ನು ಸಲ್ಲಿಸಿದರು. ಸಂಜೆ ಚೌಡೇಶ್ವರಿ ದೇವಿಯ ಸಹೋದರಿ ಹೆಬ್ಬಾರಮ್ಮ ದೇವಿಯ ದರ್ಶನವನ್ನು ಭಕ್ತರು ಪಡೆದರು. ಶಾಸಕ ಬಾಲಕೃಷ್ಣ, ಮುಖಂಡರಾದ ವಿಜಯಕುಮಾರ್, ರಾಮಕೃಷ್ಣ ಭಾಗವಹಿಸಿದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಲಕ್ಷ್ಮಣ್ ಆಯ್ಕೆ




ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಲಕ್ಷ್ಮಣ್ ಆಯ್ಕೆಯಾದರು.

ಹೊಳೆನರಸೀಪುರ, ಏ.16– ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ಎಚ್.ಕೆ ಲಕ್ಷ್ಮಣ್ ಹಾಗೂ ಉಪಾಧ್ಯಕ್ಷರಾಗಿ ಎಚ್.ಎನ್. ಪ್ರೇಮ್ ಆಯ್ಕೆಯಾಗಿದ್ದಾರೆ.

ಬುಧವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಶಶಿಕುಮಾರ್, ಸೋಮೇಗೌಡ ಮತ್ತು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಲಕ್ಷ್ಮಣ್, ಪ್ರೇಮ್ ಸ್ಪರ್ಧಿಸಿದ್ದರು. ಲಕ್ಷ್ಮಣ್, ಪ್ರೇಮ್ ಅವರು ತಲಾ 8 ಮತಗಳನ್ನು ಪಡೆದು ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಸಹಕಾರ ಸಂಘದ ಸಹಾಯಕ ನಿಬಂಧಕ ಬಾಲಚಂದ್ರ ಕಾರ್ಯ ನಿರ್ವಹಿಸಿದರು.

ಬ್ಯಾಂಕ್‌ನ ಸದಸ್ಯರಾದ ಕಲ್ಲೇನಹಳ್ಳಿಯ ಪದ್ಮರಾಜು, ಕುಂಕುಮದ ಹೊಸೂರಿನ ಪುಟ್ಟಮ್ಮ, ತೇರ್ಣ್ಯದ ರಜಿನಿ, ಹೂವಿನಹಳ್ಳಿಯ ಶಶಿಕುಮಾರ್, ಹಂಗರಹಳ್ಳಿಯ ಲಕ್ಷ್ಮಣ, ಗುಂಜೇವಿನ ಜಿ.ಕೆ.ನಂದ ಕುಮಾರ್, ಆಲದಹಳ್ಳಿಯ ಎ.ಡಿ.ಸಿಂಗ್ರೀ ಗೌಡ, ಪಡುವಲಹಿಪ್ಪೆಯ ಪುರುಷೋತ್ತಮ್, ಪಟ್ಟಣದ ಬಿ.ಎಂ.ರಸ್ತೆಯ ಪ್ರೇಮ್, ಗಾಳಿಪುರದ ಲೋಕೇಶ್, ದೊಡ್ಡಹಳ್ಳಿಯ ಸಣ್ಣತಮ್ಮಯ್ಯ, ಬಿದರಕ್ಕದ ಶಿವಣ್ಣನಾಯಕ, ಟಿ. ಮಾಯಗೋಡನಹಳ್ಳಿಯ ನೇತ್ರಪಾಲ್ ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಸೂರನಹಳ್ಳಿಯ ಸೋಮೇಗೌಡ ಹಾಗೂ ನಾಮ ನಿರ್ದೇಶನ ಸದಸ್ಯ ರಾಮೇನಹಳ್ಳಿಯ ಮೂರ್ತಿ ಸೇರಿದಂತೆ 15 ಮಂದಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಸೂರನಹಳ್ಳಿ ಎಸ್.ಎ.ರಘು, ತಾಪಂ ಮಾಜಿ ಅಧ್ಯಕ್ಷ ಜವರೇಗೌಡ, ಗಂಗೂರು ಗ್ರಾಪಂ. ಸದಸ್ಯ ಮಂಜು ಶಾಂತೇಗೌಡ, ಪಡುವಲಹಿಪ್ಪೆ ಪುರುಷೋತ್ತಮ್, ವಹಾಬ್ ಶುಭ ಇದ್ದರು.

ಹಾಸನದಲ್ಲಿ ಮೂಲಸೌಕರ್ಯ ಇಲ್ಲದಿದ್ದರೂ ಸುಂಕ ವಸೂಲಿ



ರಸ್ತೆಯಲ್ಲಿ ಉಂಟಾಗುವ ವಾಹನ ದಟ್ಟಣೆ.



ಸುಂಕ ವಸೂಲಿ ರಶೀದಿ

ಹಾಸನ: ನಗರದಲ್ಲಿ ವಾರದ ಸಂತೆ ನಡೆಸಲು ರೈತರಿಗೆ ಹಾಗೂ ತರಕಾರಿ ಮಾರಾಟಗಾರರಿಗೆ ಸೂಕ್ತ ಸ್ಥಳ ದೊರೆಯದೇ ಪರದಾಡುವಂತಾಗಿದೆ. ಈ ಮಧ್ಯೆ ಯಾವುದೇ ಮೂಲ ಸೌಲಭ್ಯ ನೀಡದೇ ಇದ್ದರೂ, ಸುಂಕ ವಸೂಲಿಗೆ ಮುಂದಾಗಿರುವ ನಗರಸಭೆ ವಿರುದ್ಧ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಸಾಲಗಾಮೆ ರಸ್ತೆಯ ಅಕ್ಕಪಕ್ಕದಲ್ಲಿ ಹಲವು ವರ್ಷಗಳಿಂದ ಸ್ಥಳೀಯ ರೈತರು ಹಾಗೂ ತರಕಾರಿ ಮಾರಾಟಗಾರರು ಪ್ರತಿ ಮಂಗಳವಾರ ಸಂತೆ ಮಾಡುತ್ತಾರೆ. ಇನ್ನೊಂದೆಡೆ ಡೇರಿ ವೃತ್ತದಿಂದ ರೈಲು ನಿಲ್ದಾಣದವರೆಗೂ ಇರುವ ರಸ್ತೆಯ ಅಕ್ಕಪಕ್ಕದಲ್ಲೂ ತರಕಾರಿ ಮಾರಾಟ ನಡೆಯುತ್ತಿದೆ.

ಆದರೆ ಈ ಎರಡೂ ಕಡೆ ನಗರಸಭೆಯಿಂದ ಕನಿಷ್ಠ ಸೌಕರ್ಯ ಒದಗಿಸಿಲ್ಲ. ರೈತರಿಗೆ, ವರ್ತಕರಿಗೆ, ಗ್ರಾಹಕರಿಗೆ ಶೌಚಾಲಯ, ಕುಡಿಯುವ ನೀರು, ತರಕಾರಿ ಮಾರಾಟ ಮಾಡುವವರಿಗೆ ನೆರಳಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಿಲ್ಲ. ಆದರೂ ಸುಂಕ ವಸೂಲಿ ಮಾಡಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಸಾಲಗಾಮೆ ರಸ್ತೆಯಲ್ಲಿ ತರಕಾರಿ ಮಾರಾಟ ಮಾಡುವವರ ಪರಿಸ್ಥಿತಿ ಹೇಳತೀರದಾಗಿದೆ. ರಸ್ತೆಯ ಪಕ್ಕದಲ್ಲಿಯೇ ಯುಜಿಡಿ ಪೈಪ್‌ಲೈನ್ ಒಡೆದಿದ್ದು, ಈ ಕಲುಷಿತ ನೀರು ಹರಿಯುವ ಸ್ಥಳದಲ್ಲಿಯೇ ತರಕಾರಿ ಮಾರಾಟ ಮಾಡಲಾಗುತ್ತಿದೆ. ದುರ್ವಾಸನೆ ಸಹಿಸಿಕೊಂಡೇ ವ್ಯಾಪಾರಿಗಳು, ಗ್ರಾಹಕರು ಸಂತೆಗೆ ಬರುವಂತಾಗಿದೆ. ಇದರಿಂದ ಸೊಳ್ಳೆಗಳು ಹೆಚ್ಚಾಗಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎನ್ನುವ ಆಕ್ರೋಶ ನಾಗರಿಕರದ್ದು.

ನಗರದ ಯಾವುದೇ ಮಾರುಕಟ್ಟೆ ವಾಣಿಜ್ಯ ಸ್ಥಳದಲ್ಲಿ ನಗರಸಭೆ ಸುಂಕ ವಸೂಲಿ ಮಾಡುತ್ತಿದ್ದರೆ ಅಲ್ಲಿ ಮೂಲಸೌಕರ್ಯ ಒದಗಿಸಬೇಕು. ಪ್ರತಿಯೊಬ್ಬರಿಗೂ ಸುಂಕದ ರಶೀದಿ ನೀಡಬೇಕು. ಆದರೆ ಹಲವರಿಗೆ ಸುಂಕದ ರಸೀದಿ ನೀಡುತ್ತಿಲ್ಲ. ಈ ನಿಟ್ಟಿನಲ್ಲಿ ನಗರಸಭೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದಾರೆ. ರೈತರು ಹಾಗೂ ರಸ್ತೆಬದಿ ವ್ಯಾಪಾರಿಗಳಿಂದ ಸುಂಕ ವಸೂಲಿ ಮಾಡದಂತೆ ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಸೂಚನೆ ನೀಡಿದ್ದರು. ಕೆಲ ದಿನಗಳ ಹಿಂದೆ ನಗರಸಭೆ ಅಧಿಕಾರಿಗಳು ಟೆಂಡರ್ ಕರೆದು ಸುಂಕ ವಸೂಲಿ ಆರಂಭಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಶಿಕ್ಷಣ ಟ್ರಸ್ಟ್‌ಗೆ ಉಪ ಗುತ್ತಿಗೆ ನೀಡಿ ಷರತ್ತುಗಳ ಸ್ಪಷ್ಟ ಉಲ್ಲಂಘನೆ

ದೇವಾಂಗ ಉದ್ಯೋಗಸ್ಥರ ಬಳಗಕ್ಕೆ ಮಂಜೂರಾಗಿದ್ದ ಮುಡಾ ಸಿಎ ನಿವೇಶನ ರದ್ದು

● ಶಾಲೆ, ಆಟದ ಮೈದಾನ ಉದ್ದೇಶಕ್ಕಾಗಿ ವಿಜಯನಗರ 2ನೇ ಹಂತದಲ್ಲಿ 1,350 ಚ.ಮೀ. ಅಳತೆಯ ನಿವೇಶನ 1998ರಲ್ಲಿ ಮಂಜೂರು ● 2019ರಲ್ಲಿ ಟ್ರಿನಿಟಿ ಸಂಸ್ಥೆಗೆ 15 ವರ್ಷಗಳ ಭೋಗ್ಯದ ಕರಾರು ಮಾಡಿ ವರ್ಷಕ್ಕೆ 3 ರಿಂದ 4 ಲಕ್ಷ ರೂ. ಬಾಡಿಗೆ ಆಧಾರದ ಮೇಲೆ ಉಪ ಗುತ್ತಿಗೆ ನೀಡಿದ ಮೂಲ ಮಂಜೂರಾತಿದಾರರು ● ಷರತ್ತು, ನಿಯಮ ಉಲ್ಲಂಘಿಸಿರುವ ಹಲವು ಸಂಸ್ಥೆಗಳ ಸಿಎ ನಿವೇಶನಗಳನ್ನು ಮುಡಾ ವಶಪಡಿಸಿಕೊಳ್ಳುವ ದಿಟ್ಟತನ ತೋರುವುದೇ?



● ಎಸ್.ಟಿ.ರವಿಕುಮಾರ್

ಸಿಎ ನಿವೇಶನ ಮಂಜೂರಾತಿ ನಿಯಮ ಮತ್ತು ಷರತ್ತುಗಳ ಸ್ಪಷ್ಟ ಉಲ್ಲಂಘನೆಯಾಗಿರುವ ಕಾರಣ ಈ ಹಿಂದೆ ದೇವಾಂಗ ಉದ್ಯೋಗಸ್ಥರ ಬಳಗ ಸಂಸ್ಥೆಗೆ ಮಂಜೂರಾಗಿದ್ದ ನಾಗರಿಕರ ಸೌಕರ್ಯ ನಿವೇಶನದ ಹಂಚಿಕೆಯನ್ನು ರದ್ದುಪಡಿಸಿ ಸದರಿ ಸಂಸ್ಥೆ ಪಾವತಿಸಿರುವ ಗುತ್ತಿಗೆ ಮೊತ್ತವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಮುಟ್ಟುಗೋಲು ಹಾಕಿಕೊಂಡಿದೆ. ಇದೇ ಮಾದರಿಯಲ್ಲಿ ಮೈಸೂರು ನಗರಾದ್ಯಂತ ಪ್ರಾಧಿಕಾರವು ಮಂಜೂರು ಮಾಡಿರುವ 505 ಸಿಎ ನಿವೇಶನಗಳನ್ನು ಆಡಿಟ್ ಮಾಡಿಸಲಾಗುವುದು. ಒಂದು ವೇಳೆ ನಿಯಮ ಉಲ್ಲಂಘನೆಯಾಗಿರುವ ಪ್ರಕರಣಗಳು ಕಂಡು ಬಂದಲ್ಲಿ ತಕ್ಷಣವೇ ಅಂತಹ ಸಿಎ ನಿವೇಶನಗಳನ್ನು ಮುಲಾಜಿಲ್ಲದೆ, ರದ್ದುಪಡಿಸಿ ವಶಕ್ಕೆ ಪಡೆಯಲಾಗುವುದು.

-ಎ.ಎನ್.ರಘುನಂದನ್, ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ).

ಮೈಸೂರು, ಏ.16– ಸಾರ್ವಜನಿಕ ಉದ್ದೇಶಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮಂಜೂರು ಮಾಡಿರುವ ನಾಗರಿಕ ಸೌಲಭ್ಯ(ಸಿಎ) ನಿವೇಶನವನ್ನು ಸದರಿ ಉದ್ದೇಶಕ್ಕೆ ಬಳಸಿಕೊಳ್ಳದೇ ನಿಯಮ, ಷರತ್ತುಗಳನ್ನು ಉಲ್ಲಂಘಿಸಿರುವ ಹಲವು ಸಂಘ–ಸಂಸ್ಥೆಗಳು, ಮಂಜೂರಾತಿ ಪ್ರಾಧಿಕಾರಕ್ಕೆ ಚಳ್ಳೆಹಣ್ಣು ತಿನ್ನಿಸುತ್ತಿವೆ.

ಮಂಜೂರಾತಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳು ಉಲ್ಲಂಘನೆಯಾಗಿರುವುದು ತಿಳಿದಿದ್ದರೂ, ಕಣ್ಣಿಗೆ ಗೋಚರಿಸಿದರೂ ಯಾರಾದರೂ ಪ್ರಜ್ಞಾವಂತ ನಾಗರಿಕರು ಲಿಖಿತ ರೂಪದಲ್ಲಿ ದೂರು ನೀಡಿ ಅಗತ್ಯ ಪೂರಕ ದಾಖಲೆ, ಪುರಾವೆ ನೀಡುವವರೆಗೂ ಸಂಬಂಧಪಟ್ಟ ಮುಡಾ ಅಧಿಕಾರಿಗಳು ಸ್ವತಃ ನಿಯಮಾನುಸಾರ ಕ್ರಮ ಕೈಗೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ.

ಅದರ ಪರಿಣಾಮ ಮೈಸೂರು ನಗರದಲ್ಲಿ ಕಳೆದ 30–40 ವರ್ಷಗಳ ಹಿಂದೆ ಮಂಜೂರಾಗಿರುವ ಸಿಎ ನಿವೇಶನಗಳ ಪೈಕಿ ಬಹುತೇಕ ಸಂಸ್ಥೆಗಳು ನಿಯಮಾನುಸಾರ ಕಟ್ಟಡ ನಿರ್ಮಿಸಿ ಉದ್ದೇಶಿತ ಚಟುವಟಿಕೆ ನಡೆಸದೇ ನಿವೇಶನವನ್ನು ಖಾಲಿ ಬಿಟ್ಟಿರುವುದು ಮುಡಾ ಅಧಿಕಾರಿಗಳಿಗೆ ತಿಳಿದಿಲ್ಲ. ಇದೀಗ ಅಂತಹುದೇ ಪ್ರಕರಣದಲ್ಲಿ ತಮಗೆ ಮಂಜೂರಾಗಿರುವ ಸಿಎ ನಿವೇಶನದಲ್ಲಿ ಉದ್ದೇಶಿತ ಚಟುವಟಿಕೆ ನಡೆಸದ ಟ್ರಸ್ಟ್‌ವೊಂದು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ನಿವೇಶನವನ್ನು ಉಪ ಗುತ್ತಿಗೆ ಮೂಲಕ ಮತ್ತೊಂದು ಶಿಕ್ಷಣ ಸಂಸ್ಥೆಗೆ ಬಾಡಿಗೆಗೆ ನೀಡಿರುವ ಪ್ರಸಂಗ ಬಯಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 1998ರ ಮಾರ್ಚ್ 23ರಂದು ಮೈಸೂರಿನ ನ್ಯೂ ಸಯ್ಯಾಜಿ ರಾವ್ ರಸ್ತೆಯ ದೇವಾಂಗ ಉದ್ಯೋಗಸ್ಥರ ಬಳಗದ ಅಧ್ಯಕ್ಷರ ಹೆಸರಿಗೆ ಶಾಲೆ, ಆಟದ ಮೈದಾನ ನಿರ್ಮಿಸಲು ಮೈಸೂರಿನ ವಿಜಯನಗರ 2ನೇ ಹಂತ ಬಡಾವಣೆಯಲ್ಲಿ 25X54 ಮೀಟರ್ ಅಳತೆಯ ಒಟ್ಟು 1,350 ಚದರ ಮೀಟರ್ ವಿಸ್ತೀರ್ಣದ ಸಿಎ ನಿವೇಶನ ಸಂಖ್ಯೆ–1 ಅನ್ನು 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಲಾಗಿತ್ತು.

ನಿಗದಿತ ಉದ್ದೇಶಕ್ಕೇ ಬಳಸಬೇಕು, ಪ್ರಾಧಿಕಾರದ ಅನುಮತಿ ಇಲ್ಲದೆ ಬೇರೆ ಯಾರಿಗೂ ಪರಭಾರೆ ಮಾಡಬಾರದು, ಒಳಗುತ್ತಿಗೆ, ಉಪ ಗುತ್ತಿಗೆ ನೀಡಬಾರದು, ಸ್ವಾಧೀನ ಪಡೆದ 2 ವರ್ಷದೊಳಗೆ ಅಂಗೀಕೃತ ನಕ್ಷೆಯಂತೆ ಕಟ್ಟಡ ನಿರ್ಮಿಸಬೇಕು, ಎಂಬಿತ್ಯಾದಿ ಷರತ್ತುಗಳನ್ನು ಮುಡಾ ಮಂಜೂರಾತಿ ಪತ್ರದಲ್ಲಿ ನಮೂದಿಸಲಾಗಿತ್ತು.

ಆದರೆ, ದೇವಾಂಗ ಉದ್ಯೋಗಸ್ಥರ ಬಳಗದವರು ಸದರಿ ಸಿಎ ನಿವೇಶನವನ್ನು 2019ರ ಮಾರ್ಚ್ 13ರಂದು ಟ್ರಿನಿಟಿ ಎಂಬ ಸಂಸ್ಥೆಗೆ 15 ವರ್ಷಗಳ ಭೋಗ್ಯದ ಕರಾರು ಮಾಡಿ 1 ವರ್ಷಕ್ಕೆ 3 ರಿಂದ 4 ಲಕ್ಷ ರೂ.ಗಳ ಬಾಡಿಗೆ ಆಧಾರದ ಮೇಲೆ ಉಪ ಗುತ್ತಿಗೆ ನೀಡಿರುವುದಾಗಿ ಎಸ್.ಆರ್.ನಂಜಪ್ಪ ಎಂಬುವವರು ಮುಡಾಗೆ ದೂರು ಸಲ್ಲಿಸಿದ್ದರು.

ಈ ಬಗ್ಗೆ ಪರಿಶೀಲಿಸಿದಾಗ ಹಂಚಿಕೆ ಷರತ್ತು ಉಲ್ಲಂಘಿಸಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ 2025ರ ಜನವರಿ 6ರಂದು ಕಾರಣ ಕೇಳಿ ನೋಟಿಸ್ ನೀಡಿದ್ದರಿಂದ ಮಂಜೂರಾತಿ ಸಂಸ್ಥೆಯು ಉತ್ತರದೊಂದಿಗೆ 'ವಾರ್ಷಿಕ ಗುತ್ತಿಗೆ ಹಣ' ಎಂದು ತಿಳಿಸಿ 11,848 ರೂ.ಗಳ ಡಿಡಿಯೊಂದಿಗೆ 2025ರ ಜನವರಿ 29ರಂದು ಸಲ್ಲಿಸಿತ್ತು.

ಸಂಸ್ಥೆಗೆ ಸಿಎ ನಿವೇಶನ ಮಂಜೂರು ಮಾಡಿದಾಗ ವಿಧಿಸಿದ್ದ ಷರತ್ತುಗಳು ಹಾಗೂ 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಸಿಎ ಸೈಟ್ ಹಂಚಿಕೆ) ನಿಯಮಗಳು 1991 ಕಲಂ 10(10)ರ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ದೇವಾಂಗ ಉದ್ಯೋಗಸ್ಥರ ಬಳಗಕ್ಕೆ ಮಂಜೂರಾಗಿದ್ದ ಸಿಎ ನಿವೇಶನ (ಸಂಖ್ಯೆ–1) ಮಂಜೂರಾತಿ ರದ್ದುಗೊಳಿಸಲಾಗಿದ್ದು, ಈವರೆಗೆ ಪಾವತಿಸಲಾಗಿರುವ ಗುತ್ತಿಗೆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಮುಡಾ ಆಯುಕ್ತ ಎ.ಎನ್.ರಘುನಂದನ್, 2025ರ ಮಾರ್ಚ್ 14ರಂದು ಆದೇಶ ಹೊರಡಿಸಿದ್ದಾರೆ.

ನಾಮನಿರ್ದೇಶಿತ ಸದಸ್ಯ ಸ್ಥಾನಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.16– ಭಾರತ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿನ ಜಿಲ್ಲಾ ಮಟ್ಟದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (DWSM) ಸಮಿತಿಗಳನ್ನು ರಾಜ್ಯದ ಆಡಳಿತಾತ್ಮಕ ವ್ಯವಸ್ಥೆಗಳ ಆಧಾರದ ಮೇಲೆ ಪುನರ್‌ರಚಿಸುವಂತೆ ತಿಳಿಸಿದ್ದು, ಸದರಿ ಸಮಿತಿಗೆ ಬದಲಾವಣೆ ಆಧಾರದ ಮೇಲೆ ಗ್ರಾಪಂಗಳ 4 ಅಧ್ಯಕ್ಷರನ್ನು (ಕನಿಷ್ಠ 2 ಮಹಿಳಾ ಅಧ್ಯಕ್ಷರು) ಸೂಕ್ತ ಪ್ರಕ್ರಿಯೆ ಮೂಲಕ ಜಿಪಂ ಸಿಇಓ ನಾಮನಿರ್ದೇಶನ ಮಾಡಲಿದ್ದಾರೆ. ಜೊತೆಗೆ ನೀರು ನಿರ್ವಹಣೆ, ಸಮುದಾಯ ಆರೋಗ್ಯ, ಸಮುದಾಯ ಅಭಿವೃದ್ಧಿ ಇತ್ಯಾದಿ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳನ್ನು ಸಹ ನಾಮನಿರ್ದೇಶನ ಮಾಡುವರು. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಆಸಕ್ತ ಗ್ರಾಪಂ ಅಧ್ಯಕ್ಷರು ಮತ್ತು ನೀರು ನಿರ್ವಹಣೆ, ಸಮುದಾಯ ಆರೋಗ್ಯ, ಸಮುದಾಯ ಅಭಿವೃದ್ಧಿ ಇತ್ಯಾದಿ ಕ್ಷೇತ್ರಗಳಲ್ಲಿ ಸೇವೆಯಲ್ಲಿರುವವರು ಮೈಸೂರಿನಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಏ.24ರ ಸಂಜೆ 5.30ರೊಳಗಾಗಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರಾಟೆಯಲ್ಲಿ ಎನ್.ವಸಿಷ್ಠಗೆ ಪ್ರಥಮ ಬಹುಮಾನ

ಮೈಸೂರು, ಏ.16(ಆರ್‌ಕೆ)–ಗೋವಾದ ಪೋಂಡೋ ಇಂಡೋರ್ ಕ್ರೀಡಾಂಗಣದಲ್ಲಿ ಏಪ್ರಿಲ್ 13ರಂದು ನಡೆದ



ನಿಹಾಸ್ ಶೋಟೋಕಸ್ ಕರಾಟೆ–ಡು ಸನ್‌ಕುಕಾಯ್ ರಾಷ್ಟ್ರೀಯ ಆಹ್ವಾನಿತ ಕರಾಟೆ ಚಾಂಪಿಯನ್ ಶಿಪ್–2025ರಲ್ಲಿ ಭಾಗವಹಿಸಿದ್ದ ಮೈಸೂರು ತಾಲೂಕು, ಜಯಪುರ ಹೋಬಳಿ ಹಾರೋಹಳ್ಳಿಯ ಬಾಲಕ ಎನ್.ವಸಿಷ್ಠ ಕತಾ ವಿಭಾಗದಲ್ಲಿ ಪ್ರಥಮ ಹಾಗೂ ಕುಮಿತೆ ವಿಭಾಗದಲ್ಲಿ ದ್ವಿತೀಯ ಬಹುಮಾನ ಪಡೆದಿದ್ದಾನೆ. ಈತ ನಾಗರಾಜು ಮತ್ತು ಸುಜಾತ ದಂಪತಿ ಪುತ್ರ.

ಶ್ರೀ ರಾಮನವಮಿ ಪ್ರಯುಕ್ತ ಪಾನಕ - ಮಜ್ಜಿಗೆ ವಿತರಣೆ



ಶ್ರೀ ರಾಮನವಮಿ ಪ್ರಯುಕ್ತ ಧನ್ವಂತರಿ ರಸ್ತೆಯಲ್ಲಿ ಬುಧವಾರ ಎಂ.ಜೆ.ವಸಂತ್ ನೇತೃತ್ವದಲ್ಲಿ ಭಕ್ತಾದಿಗಳ ವತಿಯಿಂದ ಶ್ರೀ ರಾಮನ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಪಾನಕ ಮತ್ತು ಮಜ್ಜಿಗೆಯನ್ನು ವಿತರಿಸಲಾಯಿತು. ಈ ಸಂದರ್ಭ ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಮುಖಂಡರಾದ ರಾಮರಾಜ್, ವೆಂಕಿಮಾಮು, ಸೋಮಶೇಖರ ಆಚಾರ್, ರವಿಚಂದ್ರ, ಹರೀಶ್ ಗೌಡ, ಮೋಹನ್, ಅರುಣ್, ವೆಂಕಟೇಶ್, ರವಿಕುಮಾರ್ ಉಪಸ್ಥಿತರಿದ್ದರು.

ಇನ್ನು ಮುಂದೆ ರೈಲಿನಲ್ಲೂ ಎಟಿಎಂ ಸೌಲಭ್ಯ

ಮುಂಬೈ, ಏ.16– ರೈಲು ಪ್ರಯಾಣಿಕರ ನಗದು ಕೊರತೆ ಸಮಸ್ಯೆ ನೀಗಿಸಲು ಭಾರತೀಯ ರೈಲ್ವೇ ಇಲಾಖೆ ಮಹತ್ವದ ಕ್ರಮ ಕೈಗೊಂಡಿದ್ದು, ಇನ್ನು ಮೇಲೆ ರೈಲಿನಲ್ಲೂ ಎಟಿಎಂ ಸೌಲಭ್ಯ ಲಭ್ಯವಾಗಲಿದೆ.



ಇನ್ಮುಂದೆ ನೀವು ರೈಲಿನಲ್ಲಿ ಪ್ರಯಾಣಿಸುವಾಗಲೇ ಎಟಿಎಂನಿಂದ ಹಣ ಡ್ರಾ ಮಾಡಬಹುದು. ಭಾರತೀಯ ರೈಲ್ವೆ ಇಂಥದೊಂದು ಸೌಲಭ್ಯವನ್ನು ಪರಿಚಯಿಸಲು ಮುಂದಾಗಿದೆ. ಆರಂಭಿಕ ಹಂತದಲ್ಲಿ ಮುಂಬೈ – ಮನ್ಮಾಡ್ ಪಂಚವಟಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಎಟಿಎಂ ಅಳವಡಿಸಲಾಗಿದ್ದು, ದೇಶದ ಮೊದಲ ಎಟಿಎಂ ಸಹಿತ ರೈಲು ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಮೂಲಗಳ ಪ್ರಕಾರ ರೈಲಿನ ಹವಾನಿಯಂತ್ರಿತ ಬೋಗಿಯಲ್ಲಿ ಎಟಿಎಂ ಅನ್ನು ಸ್ಥಾಪಿಸಲಾಗಿದ್ದು, ಇದರ ಪ್ರಾಯೋಗಿಕ ಸಂಚಾರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ರೈಲು ಚಲಿಸುತ್ತಿರುವಾಗಲೂ ಪ್ರಯಾಣಿಕರು ಹಣ ಡ್ರಾ ಮಾಡಬಹುದು. ಭಾರತೀಯ ರೈಲ್ವೆಯ ನವೀನ ಮತ್ತು ಶುಲ್ಕೇತರ ಆದಾಯ ಕಲ್ಪನೆಗಳ ಯೋಜನೆಯ (ಐಎನ್‌ಎಫ್‌ಆರ್‌ಐಎಸ್) ಭಾಗವಾಗಿ ಬೋಗಿಯಲ್ಲಿ ಎಟಿಎಂಗೆ ಪರಿಚಯಿಸಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ನಗದು ಹಿಂಪಡೆಯುವಿಕೆಯ ಹೊರತಾಗಿ, ಪ್ರಯಾಣಿಕರು ಚೆಕ್ ಪುಸ್ತಕಗಳನ್ನು ಆರ್ಡರ್ ಮಾಡಲು ಮತ್ತು ಖಾತೆ ಹೇಳಿಕೆಗಳನ್ನು ಸ್ವೀಕರಿಸಲು ಸಹ ಎಟಿಎಂ ಅನ್ನು ಬಳಸಬಹುದು. ಕುತೂಹಲಕಾರಿಯಾಗಿ, ಮುಂಬೈ–ಹಿಂಗೋಲಿ ಜನ ಶತಾಬ್ದಿ ಎಕ್ಸ್‌ಪ್ರೆಸ್‌ನ ಪ್ರಯಾಣಿಕರಿಗೂ ಅದೇ ಎಟಿಎಂ ಲಭ್ಯವಿರುತ್ತದೆ, ಏಕೆಂದರೆ ಇದು ಪಂಚವಟಿ ಎಕ್ಸ್‌ಪ್ರೆಸ್‌ನೊಂದಿಗೆ ಅದೇ ರೇಕ್ ಅನ್ನು ಹಂಚಿಕೊಳ್ಳುತ್ತದೆ ಎಂದು ಹೇಳಿದರು. ಅಲ್ಲದೆ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಎಟಿಎಂ ಅನ್ನು ಶಟರ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಮತ್ತು ಸಿಸಿಟಿವಿ ಕ್ಯಾಮೆರಾಗಳಿಂದ 24/7 ಮೇಲ್ವಿಚಾರಣೆ ಮಾಡಲಾಗುತ್ತದೆ. ಪ್ರಯಾಣಿಕರಲ್ಲಿ ಜನಪ್ರಿಯವಾದರೆ ಸೇವೆಯನ್ನು ಹೆಚ್ಚಿನ ರೈಲುಗಳಿಗೆ ವಿಸ್ತರಿಸಬಹುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಕೇಂದ್ರ ಸರ್ಕಾರ, ಇಡಿ ವಿರುದ್ಧ ಎಐಸಿಸಿ ಕಚೇರಿ ಮುಂದೆ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ



ನವದೆಹಲಿ, ಏ.16– ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಇಡಿ ಆರೋಪಪಟ್ಟಿ ಸಲ್ಲಿಸಿದ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಇಂದು (ಬುಧವಾರ) ದೆಹಲಿಯ ಅಕ್ಬರ್ ರಸ್ತೆಯಲ್ಲಿರುವ ಎಐಸಿಸಿ ಕಚೇರಿಯ ಹೊರಗೆ ಪ್ರತಿಭಟನೆ ನಡೆಸಿದರು.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ಏ.9 ರಂದು ಆರೋಪಪಟ್ಟಿ ಸಲ್ಲಿಸಿರುವುದಾಗಿ ಜಾರಿ ನಿರ್ದೇಶನಾಲಯ ಹೇಳಿದೆ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಲ್ಲದೆ, ಆರೋಪಪಟ್ಟಿಯಲ್ಲಿ ಹಿರಿಯ ಕಾಂಗ್ರೆಸ್ ನಾಯಕರಾದ ಸ್ಯಾಮ್ ಪಿತ್ರೋಡಾ ಮತ್ತು ಸುಮನ್ ದುಬೆ ಅವರನ್ನೂ ಕೂಡ ಆರೋಪಿಗಳಾಗಿ ಹೆಸರಿಸಲಾಗಿದೆ.

ಪ್ರತಿಭಟನೆಯಲ್ಲಿ ಹಾಜರಿದ್ದ ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನಾಟೆ, ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡಿದರು. ಇದು ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ಅನ್ನು ಗುರಿಯಾಗಿಸುವ ಪ್ರಯತ್ನ ಎಂದು ಕರೆದರು. ಇದು 12 ವರ್ಷಗಳ ಹಳೆಯ ಪ್ರಕರಣ. ಇಲ್ಲಿ ಒಂದೇ ಒಂದು ಪೈಸೆ ವಿನಿಮಯವಾಗದ ಹಣ ವರ್ಗಾವಣೆ ಪ್ರಕರಣವನ್ನು ದಾಖಲಿಸಿದ್ದಾರೆ. ವಾಸ್ತವವೆಂದರೆ ಸರ್ಕಾರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್‌ನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಇದರ ವಿರುದ್ಧ ನಾವು ಹೋರಾಟ ನಡೆಸುತ್ತೇವೆ ಎಂದು ಶ್ರೀನಾಟೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಸೆಕ್ಷನ್ 3 ಮತ್ತು 4 ರ ಅಡಿಯಲ್ಲಿ ಆರೋಪಗಳನ್ನು ದಾಖಲಿಸಲಾಗಿದೆ, ಇದು ಅಕ್ರಮ ಹಣ ವರ್ಗಾವಣೆ ಮತ್ತು ಅಪರಾಧಕ್ಕೆ ಶಿಕ್ಷೆಯ ಬಗ್ಗೆ ವಿಚಾರಣೆ ನಡೆಸುತ್ತದೆ. ನ್ಯಾಷನಲ್ ಹೆರಾಲ್ಡ್ ಮತ್ತು ಅದರ ಪ್ರಕಾಶಕ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಗೆ ಸಂಬಂಧಿಸಿದ 661 ಕೋಟಿ ರೂಪಾಯಿ ಮೌಲ್ಯದ ಸ್ಥಿರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಜಾರಿ ನಿರ್ದೇಶನಾಲಯವು ಕ್ರಮಗಳನ್ನು ಪ್ರಾರಂಭಿಸಿದ ಕೇವಲ ಎರಡು ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

ಮಕ್ಕಳು ಮೊಬೈಲ್ ಗೀಳಿಗೆ ಬಲಿಯಾಗಲು ಪೋಷಕರೇ ಹೊಣೆ



ಮಕ್ಕಳ ಬೇಸಿಗೆ ಶಿಬಿರಕ್ಕೆ ರಂಗಾಯಣ ನಿರ್ದೇಶಕ ಎಚ್.ಜನಾರ್ಧನ್ ಚಾಲನೆ ನೀಡಿದರು.

ರಂಗಾಯಣ ಮಾಜಿ ನಿರ್ದೇಶಕ ಜನ್ನಿ ಬೇಸರ

ಮೈಸೂರು, ಏ.16(ಎಸ್‌ಪಿಎನ್)– ಬದಲಾಗುತ್ತಿರುವ ಜಗತ್ತಿನಲ್ಲಿ ಮಕ್ಕಳು ಮೊಬೈಲ್ ಬಳಕೆ ಗೀಳಿಗೆ ಬೀಳುತ್ತಿದ್ದಾರೆ. ಇದರಿಂದ ಏಕಾಗ್ರತೆ ಕಳೆದುಕೊಳ್ಳುತ್ತಿರುವುದು ಆತಂಕದ ವಿಷಯ ಎಂದು ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಅಭಿಪ್ರಾಯಪಟ್ಟರು.

ಮೈಸೂರು–ಬೋಗಾದಿ ರಸ್ತೆಯ ಧ್ವನ್ಯಾಲೋಕದಲ್ಲಿ ಜನಮನ ಸಾಂಸ್ಕೃತಿಕ ಸಂಘಟನೆ ವತಿಯಿಂದ ನಡೆದ ಮಕ್ಕಳ ಬೇಸಿಗೆ ಶಿಬಿರದಲ್ಲಿ ಮಾತನಾಡಿದ ಅವರು, ಮಕ್ಕಳ ಮೊಬೈಲ್ ಗೀಳಿಗೆ ಪೋಷಕರೇ ನೇರ ಹೊಣೆ ಎಂದರು.

ಮಕ್ಕಳು ಜಗತ್ತಿನ ಆಸ್ತಿಯಾಗಿದ್ದು, ಅವರ ಲೋಕವೇ ಬ್ರಹ್ಮಾಂಡವಾಗಿದೆ. ಅವರನ್ನು ನಾಲ್ಕು ಗೋಡೆಗಳ ಚೌಕಟ್ಟಿನೊಳಗೆ ಕೂಡಿ ಹಾಕುವುದು ಬೇಡ. ಅವರನ್ನು ಸ್ವಚ್ಛಂದವಾಗಿ ಬಿಟ್ಟರೆ ಅವರ ಲೋಕವನ್ನು ಇತರೆ ಮಕ್ಕಳೊಂದಿಗೆ ಸೇರಿ ಸೃಷ್ಟಿಸಿಕೊಳ್ಳುತ್ತಾರೆ. ಹಾಗಾಗಿ ರಂಗಭೂಮಿ ಮೂಲಕ ಮಕ್ಕಳು ಏಕಾಗ್ರತೆ ರೂಢಿಸಿಕೊಳ್ಳಲು ಸಾಧ್ಯವಿದೆ ಎಂದರು.

ಮಕ್ಕಳನ್ನು ನಿಸರ್ಗಕ್ಕೆ ಹತ್ತಿರವಾಗಿ, ದೇಶದ ಉನ್ನತ ಪ್ರಜೆಯಾಗಿ ಬದುಕು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಮನಸ್ಸನ್ನು ಅಣಿಗೊಳಿಸಬೇಕು. ಇದು ಸಾಧ್ಯವಾಗುವುದು ರಂಗಭೂಮಿಯಿಂದ ಮಾತ್ರ ಹಾಗಾಗಿ ಮಕ್ಕಳಿಗೆ ರಂಗಶಿಕ್ಷಣದ ಮೂಲಕ ಬದುಕು, ವ್ಯಕ್ತಿತ್ವ, ಸಾಮಾಜಿಕ ಜಾಗೃತಿ ಬೆಳೆಸಲು ಇಂತಹ ಶಿಬಿರಗಳ ಮೂಲಕ ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಸಾಮಾಜಿಕ ಹೋರಾಟಗಾರ್ತಿ ಡಾ.ರತಿರಾವ್ ಮಾತನಾಡಿ, ಮಕ್ಕಳನ್ನು ನಮ್ಮ ಬದುಕಿನ ಆಸರೆಯ ವ್ಯಕ್ತಿಯಾಗಿ ರೂಪಿಸುವುದಕ್ಕಿಂತ, ದೇಶದ ಭವಿಷ್ಯ ಪ್ರಜೆಯಾಗಿ ರೂಪಿಸುವುದು ಒಳ್ಳೆಯದು ಎಂದರೆ, ಯುವ ಕಲಾವಿದ ನಟ ಸುಪ್ರೀತ್ ಭಾರದ್ವಾಜ್ ಮಾತನಾಡಿ, ಮಕ್ಕಳಿಗೆ ಹೊಸತನದ ಮೂಲಕ ಅವರನ್ನು ಸೆಳೆಯಲು ಪ್ರಯತ್ನಿಸಬೇಕು. ಬರೀ ಹಳೆಯ ಆಲೋಚನೆಗಳಲ್ಲಿ ಅವರ ಬದುಕು ರೂಪಿಸಲು ಸಾಧ್ಯವಿಲ್ಲ. ಇದರಿಂದ ಮಕ್ಕಳನ್ನು ಆಕರ್ಷಿಸಲು ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಧ್ವನ್ಯಾಲೋಕದ ಮುಖ್ಯಸ್ಥೆ ಪ್ರೊ.ಜಯಶ್ರೀ ಸಂಜಯ್, ಶಿಬಿರದ ನಿರ್ದೇಶಕಿ ಕೆ.ಆರ್. ಸುಮತಿ, ರಂಗ ನಿರ್ದೇಶಕರಾದ ರೂಬಿನ್ ಸಂಜಯ್, ವಿದುಷಿ ಹರಿಣಾಕ್ಷಿ, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ಇದ್ದರು.

ಸುಪ್ರೀಂಕೋರ್ಟ್ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಬಿ.ಆರ್.ಗವಾಯಿ ಹೆಸರು ಶಿಫಾರಸು

ನವದೆಹಲಿ, ಏ.16– ನ್ಯಾಯಮೂರ್ತಿ ಬಿ.ಆರ್. ಗವಾಯಿ ದೇಶದ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಲಿದ್ದಾರೆ.



ಭಾರತದ ಪ್ರಸ್ತುತ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಅಧಿಕೃತವಾಗಿ ಶಿಫಾರಸು ಮಾಡಿದ್ದಾರೆ. ಸಿಜೆಐ ಹೆಸರನ್ನು ಕೇಂದ್ರ ಕಾನೂನು ಸಚಿವಾಲಯದ ಅನುಮೋದನೆಗೆ ಕಳುಹಿಸಿದ್ದಾರೆ. ವರದಿಯ ಪ್ರಕಾರ, ನ್ಯಾಯಮೂರ್ತಿ ಬಿ.ಆರ್. ಗವಾಯಿ ಮೇ 14ರಂದು ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಸ್ತುತ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ಮೇ 13ರಂದು ನಿವೃತ್ತರಾಗಲಿದ್ದಾರೆ.

ನ್ಯಾಯಮೂರ್ತಿ ಗವಾಯಿ ಅವರು ಭಾರತದ 52ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. 64 ವರ್ಷದ ನ್ಯಾಯಮೂರ್ತಿ ಖನ್ನಾ ಅವರು ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ಆರು ತಿಂಗಳ ಅವಧಿಯನ್ನು ಪೂರ್ಣಗೊಳಿಸಿದ್ದಾರೆ. ನ್ಯಾಯಮೂರ್ತಿ ಗವಾಯಿ ಅವರು ಮೇ 14ರಂದು ಪ್ರಮಾಣ ವಚನ ಸ್ವೀಕರಿಸುವ ನಿರೀಕ್ಷೆಯಿದೆ. ನ್ಯಾಯಮೂರ್ತಿ ಗವಾಯಿ ಅವರು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಆರು ತಿಂಗಳ ಅವಧಿಯನ್ನು ಹೊಂದಿರುತ್ತಾರೆ.

ಮೈಸೂರು ಮಿತ್ರ ಗುರುವಾರ 17 ಏಪ್ರಿಲ್ 2025

ಚಿಕ್ಕರಸಿನಕೆರೆಯ ಶ್ರೀಕಾಲಭೈರವೇಶ್ವರ ಕ್ಷೇತ್ರದಲ್ಲಿ ಹಿರಿಯ ದಂಪತಿಗಳಿಗೆ ಸನ್ಮಾನ



ಹಿರಿಯ ದಂಪತಿಗಳೊಂದಿಗೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ಹಾಗೂ ಪುರುಷೋತ್ತಮನಂದನಾಥಸ್ವಾಮಿಗಳು

ಭಾರತೀನಗರ.ಏ.16– ಮನುಷ್ಯರಾದ ನಾವುಗಳು ದೇವರನ್ನು ನೆನೆದರೆ ಶಾಂತಿ, ನೆಮ್ಮದಿ ಸಿಗುತ್ತದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದರು.

ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗ್ರಾಮದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀಕಾಲಭೈರವೇಶ್ವರ ಬಸವಪ್ಪನ ಪುಣ್ಯಕ್ಷೇತ್ರದ ಜಾತ್ರಾ ಮಹೋತ್ಸವದ ಅಂಗವಾಗಿ ಹಿರಿಯ ದಂಪತಿಗಳಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದ ಉದ್ಘಾಟಿಸಿ ಅವರು ಮಾತನಾಡಿದರು.

ದೇವಾಲಯಗಳು ಶಾಂತಿ ನೆಮ್ಮದಿಯನ್ನು ನೀಡುವ ತಾಣಗಳು. ಹಾಗಾಗಿ ಹಿರಿಯರು ಗ್ರಾಮಗಳಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾರೆ. ಶ್ರೀಕಾಲಭೈರ ವೇಶ್ವರ ಶಕ್ತಿ, ಮಹಿಮೆ ಬಹಳ ದೊಡ್ಡದಾಗಿದೆ. ಜಾತ್ರಾ ಮಹೋತ್ಸವಗಳು ನಡೆಯುವುದರಿಂದ ಬಂಧುಬಳಗವನ್ನು ಒಂದುಗೂಡಿಸುತ್ತದೆ. ಆದ್ದರಿಂದ ದೇವಾಲಯಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದ ನಾಥ ಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಷ್ಯನು ಹುಟ್ಟುವಾಗ ಏನನ್ನು ತರುವುದಿಲ್ಲ, ಹುಟ್ಟಿದ ಮೇಲೆ ನಾವು ಮಾಡಿದ ಪಾಪ–ಪುಣ್ಯಗಳು ಲೆಕ್ಕಕ್ಕೆ ಬರುತ್ತದೆ. ಹಾಗಾಗಿ ದ್ವೇಷ ಅಸೂಯೆಗಳನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯಬೇಕೆಂದು ಕಿವಿಮಾತು ಹೇಳಿದರು.

ಹಿರಿಯ ದಂಪತಿಗಳಿಗೆ ಅಭಿನಂದನೆ: ಇದೇ ವೇಳೆ 100ಕ್ಕೂ ಹೆಚ್ಚು ಹಿರಿಯ ದಂಪತಿಗ ಳಿಗೆ ಸೀರೆ ಪಂಚೆ ನೀಡಿ ಶಾಲು ಹೊದಿಸಿ ಮೈಸೂರು ಪೇಟ ತೊಡಿಸಿ ಕಾಲಭೈರವೇಶ್ವ ರನ ನೆನಪಿನ ಕಾಣಿಕೆ ನೀಡಿ ಮಡಿಲು ಅಕ್ಕಿ ಕೊಟ್ಟು ಶುಭಹಾರೈಸಿ ಅಭಿನಂದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಕಾರ್ಕಹಳ್ಳಿ ಶ್ರೀಬಸವೇಶ್ವರಸ್ವಾಮಿ ಬಸವಪ್ಪ ಮತ್ತು ಚಿಕ್ಕರಸಿನಕೆರೆ ಶ್ರೀಕಾಲ ಭೈರವೇಶ್ವರಸ್ವಾಮಿ ಬಸವಪ್ಪಗಳಿಗೆ ಶ್ರೀಕಾಲ ಭೈರವೇಶ್ವರ ಸನ್ನಿಧಿಯಲ್ಲಿ ಪೂಜೆ ಸಲ್ಲಿಸ ಲಾಯಿತು. ಶ್ರೀಕಾಲ ಭೈರವನ ಹೆಸರಿನಲ್ಲಿ ಗ್ರಾಮದ ರಕ್ಷಣೆಗಾಗಿ ಹೋವು ಪೂಜೆ ನಡಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಶಿವಲಿಂಗೇಗೌಡ, ಪದಾಧಿಕಾರಿಗಳಾದ ಚನ್ನೇಗೌಡ, ಪುಟ್ಟರಾಜು, ಡಿ.ಎ.ಕೆರೆ ರಘು, ಪುಟ್ಟೇಗೌಡ, ಅಜ್ಜಹಳ್ಳಿ ಶೇಖರ್, ಸಿ.ಕೆ.ಶಿವಣ್ಣ, ಮರಿಲಿಂಗಮ್ಮ ಜ್ಯೋಗಿಗೌಡ ಹಲವರಿದ್ದರು.

ಹೊಡಾಘಟ್ಟ ಗ್ರಾಮದಲ್ಲಿ ಶಾಸಕರ ಜನತಾ ದರ್ಶನ



ಶಾಸಕ ಪಿ.ರವಿಕುಮಾರ್ ಗಣಿಗ ಸಾರ್ವಜನಿಕರ ಅಹವಾಲುಗಳನ್ನು ಆಲಿಸುತ್ತಿರುವುದು.

ಮಂಡ್ಯ: ಸರ್ಕಾರದ ಸೇವೆಗಳನ್ನು ಸಾರ್ವಜನಿಕರ ಮನೆ ಬಾಗಿಲಿಗೆ ತಲುಪಿಸುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕನಸಾಗಿದೆ ಎಂದು ಶಾಸಕ ಪಿ. ರವಿಕುಮಾರ್ ಗಣಿಗ ಹೇಳಿದರು.

ತಾಲೂಕಿನ ಹೊಡಾಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆ, ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಿಸಿ ಕಚೇರಿ, ತಾಲೂಕು ಕಚೇರಿ, ಪೊಲೀಸ್ ಕಚೇರಿ ಮತ್ತು ಶಾಸಕರ ಕಚೇರಿಗಳಿಗೆ ಸಾರ್ವಜನಿಕರು ಅಲೆಯಬಾರದು, ರೈತರ ಸಮ ಸ್ಯೆಗಳನ್ನು ರೈತರ ಮನೆಯ ಬಾಗಿಲಿಗೆ ಹೋಗಿ ಆಲಿಸಬೇಕು ಎಂಬ ಸದುದ್ದೇಶದಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನತಾ ದರ್ಶನ ಮಾಡಿ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಲಾಗುತ್ತಿದೆ ಎಂದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಸಾಧ್ಯವಾದಲ್ಲಿ ಸ್ಥಳದಲ್ಲೇ ಪರಿಹಾರ ನೀಡಲಾಗುವುದು ಅಥವಾ 30 ದಿನಗಳೊಳಗೆ ನಿಮ್ಮ ಕುಂದು ಕೊರತೆಗಳನ್ನು ನಿವಾರಿಸಲಾಗುವುದು. ಬಹುದಿನಗಳಿಂದ ಬೇಡಿಕೆ ಇದ್ದ ದಾನಾಯಕನಪುರ ಮತ್ತು ಇಚಗೆರೆ ರಸ್ತೆ ನಿರ್ಮಾಣಕ್ಕೆ 4.5 ಕೋಟಿ ಅನುದಾನ ನೀಡಲಾಗಿದೆ. ಮುಂದಿನ ವಾರದಲ್ಲಿ ಭೂಮಿ ಪೂಜೆ ಸಲ್ಲಿಸಿ ಕಾಮಗಾರಿ ಪ್ರಾರಂಭ ಮಾಡಲಾಗುವುದು, ಹೊನ್ನಾನಾಯಕ ಹಳ್ಳಿ ಮತ್ತು ದೊಡ್ಡಬಾಣಸವಾಡಿ, ಚಿಕ್ಕ ಬಾಣಸವಾಡಿ ರಸ್ತೆಗೆ 2 ಕೋಟಿ ಬಿಡುಗಡೆ ಮಾಡಲಾಗಿದೆ, ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ನಿಮ್ಮ ಆಸೆಯಂತೆ ದೊಡ್ಡಬಾಣಸವಾಡಿ ಬ್ರಿಡ್ಜ್ ಮತ್ತು ಗದ್ದೆ ಬಯಲಿನ ರಸ್ತೆ ನಿರ್ಮಾಣಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಅವರು 5 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದಾರೆ ಶೀಘ್ರವಾಗಿ ಅದರ ಗುದ್ದಲಿ ಪೂಜೆಯನ್ನು ನೆರವೇರಿಸಲಾಗುವುದು ಎಂದು ತಿಳಿಸಿದರು.

ತಹಶೀಲ್ದಾರ್ ಶಿವಕುಮಾರ್ ಬಿರಾದರ್ ಮಾತನಾಡಿ, ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ನಡೆಸುವ ಗುರಿ ಹೊಂದಿದ್ದೇವೆ 15 ದಿನಕ್ಕೊಮ್ಮೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಆದ್ದರಿಂದ ಸಾರ್ವಜನಿಕರು ಈ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶಾಸಕರು ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು. ಅರ್ಹ ಫಲಾನುಭವಿಗಳಿಗೆ ಇ–ಸ್ವತ್ತು ಪತ್ರಗಳನ್ನು ವಿತರಣೆ ಮಾಡಲಾಯಿತು. ಜೊತೆಗೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಉಚಿತ ಆರೋಗ್ಯ ತಪಾಸಣೆ ಮತ್ತು ಕಣ್ಣಿನ ತಪಾಸಣೆ ಮಾಡಲಾಯಿತು. ಫಲಾನುಭವಿಗಳಿಗೆ ವೇದಿಕೆಯಲ್ಲಿ ಉಚಿತ ಪರೀಕ್ಷಿತಾ ಕನ್ನಡಕಗಳನ್ನು ವಿತರಿಸಲಾಯಿತು. ಕೃಷಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರೇಷ್ಮೆ ಇಲಾಖೆ ವತಿಯಿಂದ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಳಿಗೆಗಳನ್ನು ತೆರೆಯಲಾಗಿತ್ತು. ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿ ಯೋಜನೆ ತಲುಪದಿರುವವರು ಈ ಸಹಾಯ ಕೇಂದ್ರಕ್ಕೆ ಅಗತ್ಯ ದಾಖಲೆಗಳೊಂದಿಗೆ ಬಂದು ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಂಡು ಗ್ಯಾರಂಟಿ ಯೋಜನೆಗೆ ಅರ್ಜಿ ಸಲ್ಲಿಸಲು ಗ್ಯಾರಂಟಿ ಸಹಾಯ ಮಳಿಗೆಯನ್ನು ಸ್ಥಾಪಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ತಾಪಂ ಇಒ ವೀಣಾ, ಡಿವೈಎಸ್ಪಿ ಲಕ್ಷ್ಮಿನಾರಾಯಣ ಪ್ರಸಾದ್, ಹೊಡಾಘಟ್ಟ ಗ್ರಾಪಂ ಅಧ್ಯಕ್ಷ ಎಚ್.ಬಿ. ಆನಂದ್, ಸದಸ್ಯರಾದ ಗೌರಮ್ಮ, ಗಣೇಶ್, ನಾರಾಯಣಪ್ಪ ಇನ್ನಿತರರಿದ್ದರು.

ಚಿನ್ನದ ಪದಕ ವಿಜೇತೆ ಸಿಪಿಐ ಸುಮಾರಾಣಿಗೆ ಸನ್ಮಾನ



ಕೆ.ಆರ್.ಪೇಟೆ, ಏ. 16– ಮುಖ್ಯಮಂತ್ರಿಗಳ ಚಿನ್ನದ ಪದಕ ಗೌರವಕ್ಕೆ ಭಾಜನರಾಗಿರುವ ಕೆ.ಆರ್. ಪೇಟೆ ಪಟ್ಟಣ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಸುಮಾರಾಣಿ ಅವರನ್ನು ಕೆ.ಆರ್.ಪೇಟೆ ತಾಲೂಕು ಸ್ನೇಹ ಬಳಗದ ವತಿಯಿಂದ ಸನ್ಮಾನಿಸಲಾಯಿತು.

ಸ್ನೇಹ ಬಳಗದ ಪದಾಧಿಕಾರಿಗಳಾದ ರೇಖಾ ಲೋಕೇಶ್, ಚೌಡೇನಹಳ್ಳಿ ಜೆಸಿಬಿ ರವಿ, ಲೋಲಾಕ್ಷಿ ಜಗದೀಶ್, ಸತೀಶ್, ಬೀರೇಶ್, ರತಿ ಮಹದೇವ್ ಮತ್ತಿತರರ ನೇತೃತ್ವದಲ್ಲಿ ಪ್ರತಿಷ್ಠಿತ ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದು ತಾಲೂಕಿನ ಗೌರವವನ್ನು ಹೆಚ್ಚಿಸಿರುವ ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ಸುಮಾರಾಣಿ ಅವರಿಗೆ ಮೈಸೂರು ಪೇಟ ತೊಡಿಸಿ, ಫಲ ತಾಂಬೂಲ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ರೇಖಾ ಲೋಕೇಶ್, ತಾಲೂಕಿನಲ್ಲಿ ಉತ್ತಮ ಅಧಿಕಾರಿಯಾಗಿ ಕೆಲಸ ನಿರ್ವಹಿ ಸುವ ಮೂಲಕ ಒಳ್ಳೆಯ ಹೆಸರು ಪಡೆದಿರುವ ಸುಮಾರಾಣಿ ಅವರಿಗೆ ಮುಖ್ಯಮಂತ್ರಿ ಚಿನ್ನದ ಪದಕ ಸಿಕ್ಕಿರುವುದು ತಾಲೂಕಿಗೆ ಸಂದ ಗೌರವವಾಗಿದೆ. ಇದೇ ರೀತಿ ತಮ್ಮ ದಕ್ಷ, ಪ್ರಾಮಾಣಿಕ ಸೇವೆ ತಾಲೂಕಿಗೆ ಸಿಗಲಿ, ಇನ್ನೂ ಉನ್ನತ ಮಟ್ಟದ ಪ್ರಶಸ್ತಿ, ಗೌರವಗಳು ದೊರಕಲಿ ಎಂದು ಶುಭ ಹಾರೈಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಿಪಿಐ ಸುಮಾರಾಣಿ, ನನಗೆ ಮುಖ್ಯಮಂತ್ರಿಗಳ ಪದಕ ಘೋಷಣೆಯಾದ ದಿನದಿಂದ ದಿನೇ ದಿನೆ ತಾಲೂಕಿನ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸನ್ಮಾನಿಸುವ ಮೂಲಕ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದ್ದೀರಿ. ನಿಮ್ಮ ಈ ಪ್ರೀತಿ ವಿಶ್ವಾಸಕ್ಕೆ ನಾನು ಸದಾ ಚಿರಋಣಿಯಾಗಿರುವುದಾಗಿ ತಿಳಿಸಿದರು.

ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ 3 ಕಾರುಗಳ ನಡುವೆ ಭೀಕರ ಅಪಘಾತ; ಓರ್ವ ಸಾವು

ರಾಮನಗರ, ಏ.16– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಭವಿಸಿದ ಭೀಕರ ಸರಣಿ ಅಪಘಾತದಲ್ಲಿ ಓರ್ವ ಸಾವನ್ನಪ್ಪಿದ್ದು, 10 ಮಂದಿ ಗಂಭೀರ ಗಾಯಗೊಂಡ ಘಟನೆ ಚನ್ನಪಟ್ಟಣ ತಾಲೂಕಿನ ಲಂಬಾಣಿ ತಾಂಡ್ಯದ ಬಳಿ ನಡೆದಿದೆ. ಘಟನೆಯಿಂದಾಗಿ ಹೆದ್ದಾರಿಯಲ್ಲಿ ಕೆಲ ಕಾಲ ಟ್ರಾಫಿಕ್ ಸಮಸ್ಯೆ ಉಂಟಾಗಿತ್ತು.

ಬೆಂಗಳೂರಿನಿಂದ ಮೈಸೂರು ಕಡೆಗೆ ವೇಗವಾಗಿ ಬರುತ್ತಿದ್ದ ಹೋಂಡಾ ಸಿವಿಕ್ ಕಾರಿನ ಚಾಲಕ, ಲಂಬಾಣಿ ತಾಂಡ್ಯದ ಬಳಿ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕದ ಮೇಲೆ ಕಾರು ಹತ್ತಿಸಿದ್ದಾನೆ. ಕಾರು ಪಲ್ಟಿಯಾಗಿ ಪಕ್ಕದ ರಸ್ತೆಗೆ ಜಿಗಿದು, ಬೆಂಗಳೂರು ಕಡೆಗೆ ಹೋಗುತ್ತಿದ್ದ ಮಾರುತಿ ಡಿಸ್ಸೈರ್ ಮತ್ತು ವ್ಯಾಗನರ್ ಕಾರಿಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ವ್ಯಾಗನರ್ ಕಾರಿನಲ್ಲಿದ್ದ ವ್ಯಕ್ತಿ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಮೂರೂ ಕಾರುಗಳಲ್ಲಿದ್ದ 10 ಮಂದಿಗೆ ಗಾಯವಾಗಿದೆ. ಕೂಡಲೇ ಸ್ಥಳೀಯರ ನೆರವಿನಿಂದ ಆಂಬುಲೆನ್ಸ್‌ನಲ್ಲಿ ಗಾಯಾಳುಗಳನ್ನು ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ಥಳಕ್ಕೆ ಚನ್ನಪಟ್ಟಣ ಸಂಚಾರಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ನೇರ ಸಂದರ್ಶನ

ಮಂಡ್ಯ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ.ಎಲ್ ಆ್ಯಂಡ್ ಟಿ ಫೈನಾನ್ಸ್ ಸಂಸ್ಥೆಯಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಕೆಲಸ ಮಾಡಲು 21 ರಿಂದ 32 ವರ್ಷ ವಯೋಮಾನವುಳ್ಳ ಆಸಕ್ತ ಅಭ್ಯರ್ಥಿಗಳು ಏ.17 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಗಾಂಧಿನಗರದಲ್ಲಿನ 2ನೇ ಕ್ರಾಸ್‌ನ ಮೆ. ಎಲ್ ಆಂಡ್ ಟಿ ಫೈನಾನ್ಸ್‌ನಲ್ಲಿ ತಮ್ಮ ರೆಸ್ಯೂಮ್ ಹಾಗೂ ಬಯೋಡೇಟಾಗಳೊಂದಿಗೆ ನೇರಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ.

ಎಫ್‌ಎಲ್‌ಒ (ಫ್ರಂಟ್ ಲೈನ್ ಆಫೀಸರ್ ಫೀಲ್ಡ್ ವರ್ಕ್) ಖಾಲಿಯಿರುವ ಹುದ್ದೆಯಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08232–295124 ಮತ್ತು 9164642684 ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 1ರಂದು ಮಹಾದ್ವಾರ ಉದ್ಘಾಟನೆ

ಮಳವಳ್ಳಿ: ತಾಲೂಕಿನ ಕುಂದೂರುಬೆಟ್ಟದ ಸುಕ್ಷೇತ್ರ ಶ್ರೀ ರಸಸಿದ್ದೇಶ್ವರ ಮಠದ ವತಿಯಿಂದ ಮೇ 1ರಂದು ಷಟ್ಸ್ಥಲ ಬ್ರಹ್ಮೋ ಪದೇಶ ಪೂರ್ವಕ ಗುರುಪಟ್ಟಾಧಿಕಾರ ಮಹೋತ್ಸವ ಹಾಗೂ ಸುಕ್ಷೇತ್ರದ ಶ್ರೀ ಮಹಾದ್ವಾರ ಉದ್ಘಾಟನಾ ಸಮಾರಂಭ ನಡೆಯಲಿದೆ. ಮಹಾದ್ವಾರವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಲಿದ್ದು, ವೇದಿಕೆ ಕಾರ್ಯಕ್ರಮವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ಕನಕಪುರ ದೇಗುಲ ಮಠಾಧ್ಯಕ್ಷ ಡಾ.ಶ್ರೀ ಮುಮ್ಮಡಿ ನಿರ್ವಾಣಮಹಾಸ್ವಾಮಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರಮಹಾಸ್ವಾಮಿ, ತುಮಕೂರು ಸಿದ್ದಗಂಗಾ ಮಠದ ಸಿದ್ದಲಿಂಗಸ್ವಾಮಿ, ಆದಿಚುಂಚನಗಿರಿ ಮಠಾಧ್ಯಕ್ಷ ನಿರ್ಮಲಾನಂದ ಸ್ವಾಮಿರವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಭಾರತೀಪುರ ಕ್ರಾಸ್ ಗ್ರಾಪಂ ಅಧ್ಯಕ್ಷರಾಗಿ ಬಿ.ಎನ್.ಕುಮಾರ್



ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಗ್ರಾ.ಪಂ. ಸದಸ್ಯರು ಮತ್ತು ಮುಖಂಡರು, ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

ಕೆ.ಆರ್.ಪೇಟೆ,ಏ.16– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಭಾರತೀಪುರ ಕ್ರಾಸ್ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಬಿ.ಎನ್.ಕುಮಾರ್, ಉಪಾಧ್ಯಕ್ಷರಾಗಿ ಮಂಜುಳಾ ನಾಗರಾಜಾಚಾರಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷರಾದ ಡಿ.ಕುಬೇರ ಮತ್ತು ಉಪಾಧ್ಯಕ್ಷೆ ರುಕ್ಮಿಣಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ಭಾರತೀಪುರ ಬಿ.ಎನ್. ಕುಮಾರ್ ಮತ್ತು ಉಪಾಧ್ಯಕ್ಷ ಸ್ಥಾನ ಬಯಸಿ ಮಂಜುಳ ನಾಗರಾಜಚಾರಿ ಅವ ರನ್ನು ಹೊರತುಪಡಿಸಿ ಬೇರೆ ಯಾರೂ ಸಹ ನಾಮಪತ್ರ ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾಧಿಕಾರಿಯಾಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಚಂದ್ರೇಗೌಡ, ಸಹ ಚುನಾವಣಾಧಿಕಾರಿಯಾಗಿ ತಾಲೂಕು ಪಂಚಾಯತ್ ವ್ಯವಸ್ಥಾಪಕ ಅನಿಲ್‌ಬಾಬು, ಪಿಡಿಒ ದಿನೇಶ್‌ಕುಮಾರ್ ಕಾರ್ಯನಿರ್ವಹಿಸಿದರು.

ಒಂದನೇ ಪುಟದಿಂದ

ಮೋದಿ ಸರ್ಕಾರ ಬೀಳಿಸ್ತಾರೆ!

ಕಲಬುರಗಿಯಿಂದ ದೇಶದ ವಿವಿಧ ಭಾಗಗಳಿಗೆ 27ಕ್ಕೂ ಹೆಚ್ಚು ರೈಲುಗಳನ್ನು ತಂದಿದ್ದೇವೆ. ಆದರೆ ಕಲಬುರಗಿಯಿಂದ ಬೆಂಗಳೂರಿಗೆ ಹೆಚ್ಚುವರಿ ರೈಲುಗಳನ್ನು ಬಿಡಿ ಎಂದು ಮನವಿ ಮಾಡಿದರೂ ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ ಎಂದರು.

ಕಲಬುರಗಿ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಶ್ರೀನಿವಾಸ ಸರಡಗಿ ಗ್ರಾಮದ ಜನರು ಮುಕ್ತ ಮನಸ್ಸಿನಿಂದ ತಮ್ಮ ಜಮೀನುಗಳನ್ನು ಬಿಟ್ಟುಕೊಟ್ಟಿದ್ದಾರೆ.

ಈಗ ನೋಡಿದರೆ ಇಲ್ಲಿಗೆ ವಿಮಾನಗಳೇ ಬರುತ್ತಿಲ್ಲ. ಕಲಬುರಗಿಗೆ ನಿರಂತರ ವಿಮಾನ ಸೇವೆ ಆರಂಭಿಸಲು ಮೋದಿ ಸರ್ಕಾರ ಯಾವುದೇ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ. ಆದರೆ ಕೇಂದ್ರ ಸರ್ಕಾರಕ್ಕೆ ಆಸಕ್ತಿ ಇರುವುದು ಒಂದೇ ವಿಷಯದಲ್ಲಿ, ಅದು ವಿಪಕ್ಷ ನಾಯಕರ ಮೇಲೆ ಐಟಿ, ಇಡಿ ದಾಳಿಗಳನ್ನು ಮಾಡಿಸುವುದರಲ್ಲಿ ಮಾತ್ರ ನಿರತವಾಗಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಕಾಯಕಲ್ಪಕ್ಕೆ ಹೊಸ ಯೋಜನೆ

ಕೆರೆಗೆ ಕಾಯಕಲ್ಪ ನೀಡಲು ಕಿಂಚಿತ್ತೂ ಪ್ರಯತ್ನ ಮಾಡಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ಗ್ರಾಹಕ ಪರಿಷತ್ ಸೇರಿದಂತೆ ಇತರೆ ಪರಿಸರ ಸಂಘಟನೆಗಳು ಈಗ ಕೆರೆ ಸಂರಕ್ಷಣೆಗೆ ಕ್ರಿಯಾ ಯೋಜನೆ ರೂಪಿಸಲು ಮುಂದಾಗಿದೆ.

ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ನೇತೃತ್ವದ ಮೈಸೂರು ಗ್ರಾಹಕ ಪರಿಷತ್ ತಂಡ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಉಮಾಶಂಕರ್ ಇಂದು ಕೆರೆಗೆ ಭೇಟಿ ನೀಡಿ ಒಳ ಚರಂಡಿ ನೀರು ಕೆರೆಗೆ ಸೇರದಂತೆ ತಡೆಯಲು ಏನೇನು ಕ್ರಮ ಕೈಗೊಳ್ಳಬೇಕು ಹಾಗೂ ಯಾವ ರೀತಿಯ ಕ್ರಿಯಾ ಯೋಜನೆ ರೂಪಿಸಬೇಕು ಎಂಬ ಬಗ್ಗೆ ಚರ್ಚೆ ನಡೆಸಿದರು.

ಈ ವೇಳೆ ಮಾತನಾಡಿದ ಒಂಬತ್ಕೆರೆ ಅವರು, ಕುಕ್ಕರಹಳ್ಳಿ ಕೆರೆ ಮೈಸೂರು ನಗರದ ಅಂತರ್ಜಲ ವೃದ್ಧಿಗೆ ಜಲ ಸೆಲೆಯಾಗಿದೆ. ಆದರೆ ಹಲವು ವರ್ಷಗಳಿಂದ ಒಳ ಚರಂಡಿ ನೀರು ಹರಿಸಿ ಕೆರೆಯ ಶುದ್ಧತೆ ಹಾಳು ಮಾಡಿದ್ದಾರೆ. ಇದರಿಂದ ಸಾವಿರಾರು ಮೀನುಗಳು ಸಾಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿನ್ನೆಲೆ ಕುಕ್ಕರಹಳ್ಳಿ ಕೆರೆಗೆ ಒಳ ಚರಂಡಿ ನೀರು ಹರಿಯದಂತೆ ಕ್ರಿಯಾ ಯೋಜನೆ ರೂಪಿಸಿ, ಅದರ ವರದಿಯನ್ನು ಮೈಸೂರು ನಗರ ಪಾಲಿಕೆ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಗ್ರಾಹಕ ಪರಿಷತ್‌ಗೆ ನೀಡಿ ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿ ಮಾಡಿದರು. ಕ್ರಿಯಾ ಯೋಜನೆ ಆಧರಿಸಿ ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನಗರ ಪಾಲಿಕೆ ಹಾಗೂ ವಿಶ್ವವಿದ್ಯಾನಿಲಯದವರ ಜೊತೆ ಚರ್ಚೆ ನಡೆಸುತ್ತೇವೆ ಎಂದು ಒಂಭತ್ಕೆರೆ ತಿಳಿಸಿದರು.

ತರುವಾಯ ಮಾತನಾಡಿದ ಪರಿಸರ ಅಧಿಕಾರಿ ಉಮಾಶಂಕರ್, ಕುಕ್ಕರಹಳ್ಳಿ ಕೆರೆಯ ನೀರಿನ ಮಾದರಿಯನ್ನು ಪ್ರತಿ ತಿಂಗಳು ಸಂಗ್ರಹಿಸಿ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸುತ್ತಿದ್ದೇವೆ. ಕೆರೆ ನೀರು ಕಲುಷಿತ ಆಗಿರುವುದು ಪ್ರಯೋಗಾಲಯದ ವರದಿ ತಿಳಿಸಿದೆ ಎಂದರು. ಆದರೆ ಈಗ ಕುಕ್ಕರಹಳ್ಳಿ ಕೆರೆಗೆ ಸೇರುತ್ತಿರುವ ಒಳ ಚರಂಡಿ ನೀರಿನ ಮಾದರಿಯನ್ನು ಕೂಡ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ತರುವಾಯ ಕಲುಷಿತ ನೀರು ಕೆರೆಗೆ ಹರಿಯದಂತೆ ಕ್ರಿಯಾ ಯೋಜನೆ ರೂಪಿಸುತ್ತೇವೆ ಎಂದು ಹೇಳಿದರು. ನಗರಪಾಲಿಕೆ, ವಿಶ್ವವಿದ್ಯಾನಿಲಯ, ಗ್ರಾಹಕ ಪರಿಷತ್‌ಗೆ ಕ್ರಿಯಾ ಯೋಜನೆ ವರದಿ ನೀಡುತ್ತೇವೆ. ಮುಂದೆ ಏನು ಮಾಡಬೇಕೆಂದು ಗ್ರಾಹಕ ಪರಿಷತ್‌ನವರು ನಗರ ಪಾಲಿಕೆ ಹಾಗೂ ವಿಶ್ವವಿದ್ಯಾನಿಲಯದವರ ಜೊತೆ ಸೇರಿ ತೀರ್ಮಾನ ಮಾಡುತ್ತಾರೆ ಎಂದು ಉಮಾ ಶಂಕರ್ ತಿಳಿಸಿದರು.

ಐತಿಹಾಸಿಕ ಈ ಕೆರೆಯ ವೈಶಿಷ್ಟ್ಯತೆ

27 ಕಿಲೋ ಮೀಟರ್ ದಿವಾನ್ ಪೂರ್ಣಯ್ಯ ಫೀಡರ್ ಕಾಲುವೆ ನಿರ್ಮಾಣ ಮಾಡಲಾಗಿದೆ. ಕೆರೆಯ ಗರಿಷ್ಠ ಆಳ 16 ಅಡಿ ಇದ್ದು, 4 ದಿಕ್ಕುಗಳಿಂದ ನೀರು ಹಿಡಿದಿಟ್ಟುಕೊಂಡಿದೆ. ಎತ್ತರದ ಬಂಡ್ ನಿರ್ಮಾಣ ಮಾಡಲಾಗಿದ್ದು, ಇದರ ಆವರಣದಲ್ಲಿ ಸಾವಿರಾರು ಗಿಡ ಮರಗಳಿದೆ. ತಂಪಾದ ವಾತಾವರಣ ಮನಸಿಗೆ ಮುದ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಮುಂಜಾನೆ ಹಾಗೂ ಸಂಜೆ ವೇಳೆ ನೂರಾರು ಜನರು ವಾಯು ವಿಹಾರಕ್ಕೆ ಬರಲಿದ್ದು, ವಾಕ್ ವೇ ನಿರ್ಮಿಸ ಲಾಗಿದೆ. ಕೆರೆಯಲ್ಲಿ ಸುಮಾರು 176 ಪ್ರಬೇಧದ ಪಕ್ಷಿಗಳಿದ್ದು, ಚಳಿಗಾಲದಲ್ಲಿ ಸಂತಾನೋ ತ್ಪತ್ತಿಗಾಗಿ ವಿದೇಶದಿಂದಲೂ ಸಾವಿರಾರು ಪಕ್ಷಿಗಳು ಕುಕ್ಕರಹಳ್ಳಿ ಕೆರೆಗೆ ಬರುತ್ತವೆ. ಇಂತಹ ವಿಶಿಷ್ಟ ಕೆರೆಯನ್ನು ರಕ್ಷಿಸಿ, ಉಳಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವ ಮೈಸೂರು ಗ್ರಾಹಕ ಪರಿಷತ್ ಜೊತೆ ಎಲ್ಲರೂ ಕೈಜೋಡಿಸಬೇಕಿದೆ.

ಸಮಿತಿ ರಚನೆ ಸಾಧ್ಯತೆ

ಮುಖ್ಯಮಂತ್ರಿ ಮೇಲೆ ಒತ್ತಡ ಹೇರುವ ತಾಕತ್ತು ಇಲ್ಲ. ಪಕ್ಷದ ವರಿಷ್ಠರ ಕಡೆ ಬೆಟ್ಟು ಮಾಡಿ, ಮುಖ್ಯಮಂತ್ರಿ, 10 ವರ್ಷಗಳಿಂದ ಗೊಂದಲಕ್ಕೆ ಸಿಲುಕಿದ್ದ ವರದಿಯನ್ನು ಬಹಿರಂಗಪಡಿಸಿದ್ದಾರೆ. ಮುಖ್ಯಮಂತ್ರಿ ಇಚ್ಛೆಯಂತೆ ಇದುವರೆಗೂ ಎಲ್ಲವೂ ನಡೆದಿದೆ, ನಾಳೆಯ ಸಂಪುಟ ಸಭೆಯಲ್ಲೂ ವರಿಷ್ಠರ ಅಸ್ತ್ರ ಬಳಸಿ ತಮ್ಮ ಸಹೋದ್ಯೋಗಿಗಳನ್ನು ಕಟ್ಟಿ ಹಾಕಿ, ತಾವು ಏನು ಮಾಡಬೇಕೆಂದಿದ್ದಾರೋ ಅದೇ ತೀರ್ಮಾನ ಕೈಗೊಳ್ಳಲಿದ್ದಾರೆ. ಮುಂದುವರೆದ ಜನಾಂಗದ ಪ್ರಭಾವೀ ಸಚಿವರು, ರಾಜಕೀಯ ಭವಿಷ್ಯದ ದೃಷ್ಟಿಯಿಂದ ವರಿಷ್ಠರನ್ನಾಗಲೀ, ಮುಖ್ಯಮಂತ್ರಿಯನ್ನಾಗಲೀ ಎದುರು ಹಾಕಿಕೊಳ್ಳಲು ಇಚ್ಛಿ ಸುವುದಿಲ್ಲ. ತಮ್ಮ ಸಮುದಾಯಗಳಿಂದ ಎಷ್ಟೇ ಒತ್ತಡ ಬಂದರೂ ಯಾವ ಸಚಿವರೂ ಈ ವಿಷಯದ ಬಗ್ಗೆ ಬಹಿರಂಗ ಹೇಳಿಕೆ ನೀಡಿಲ್ಲ. ಎಲ್ಲರೂ ನಾಳಿನ ಮಂತ್ರಿ ಮಂಡಲ ಸಭೆ ಕಡೆಗೇ ಬೆಟ್ಟು ತೋರಿಸಿದ್ದಾರೆ. ಸಚಿವರ ಸಲಹೆಗಳನ್ನು ಪಡೆಯಲಿರುವ ಮುಖ್ಯಮಂತ್ರಿ, ವರದಿ ಅನುಷ್ಠಾನ ಸಂಬಂಧ ಮತ್ತೊಂದು ವರದಿ ತರಿಸಿಕೊಳ್ಳಲು ಒಂದು ಸಮಿತಿ ರಚಿಸಲಿದ್ದಾರೆ ಎಂಬ ದಟ್ಟ ವದಂತಿ ರಾಜಕೀಯ ವಲಯಗಳಲ್ಲಿ ಕೇಳಿಬರುತ್ತಿದೆ.

ಒಂದೇ ಸಮುದಾಯ ಅನುಭವಿಸುತ್ತಾ ಬಂದಿದೆ...

ಅವರನ್ನು ಪ್ರಶ್ನಿಸಿದ್ದಾರೆ. ಕಳೆದ 20 ವರ್ಷಗಳಲ್ಲಿ ಎ, ಬಿ, ಸಿ, ಡಿ ಗ್ರೂಪ್‌ಗಳಲ್ಲಿ ನಡೆದಿರುವ ನೇಮಕಾತಿ, ವೃತ್ತಿಪರ ಕೋರ್ಸ್ ಪ್ರವೇಶ ಇನ್ನಿತರ ಎಲ್ಲಾ ಸೌಲಭ್ಯಗಳ ಅಂಕಿ–ಅಂಶಗಳು ಸುಳ್ಳು ಹೇಳುತ್ತವೆಯೇ. 2ಎ ಪ್ರವರ್ಗದಲ್ಲಿ ಇರುವ ಮೀಸಲಾತಿಯ ಬಹುತೇಕ ಸೌಲಭ್ಯವನ್ನು ಒಂದು ಸಮುದಾಯಕ್ಕೆ ಬಿಟ್ಟು ಉಳಿದ 100 ಜಾತಿಗಳು ಉದ್ಯೋಗ, ಶೈಕ್ಷಣಿಕ ಹಾಗೂ ಉಳಿದ ವಿಚಾರಗಳಲ್ಲಿ ತಮ್ಮ ಪಾಲನ್ನು ಪಡೆದುಕೊಳ್ಳದೆ, ಲಿಂಗಾಯತ, ಒಕ್ಕಲಿಗರನ್ನು ಏಕೆ ದ್ವೇಷಿಸುತ್ತೀರಿ. ಸರ್ಕಾರದಲ್ಲೇ ಎಲ್ಲಾ ದಾಖಲೆಗಳು ಮತ್ತು ಅಂಕಿ–ಅಂಶಗಳಿವೆ. ಅದನ್ನು ತಿಳಿದು, ನೀವು ಹೋರಾಟಕ್ಕಿಳಿದು, ನಿಮ್ಮ ಹಕ್ಕು ಪಡೆದುಕೊಳ್ಳಿ ಎಂದು ಪ್ರವರ್ಗದಲ್ಲಿನ ಆ 100 ಜಾತಿಗಳಿಗೆ ಕಿವಿಮಾತು ಹೇಳಿದ್ದಾರೆ.

ವೀರಶೈವ/ಲಿಂಗಾಯತ ಮತ್ತು ಒಕ್ಕಲಿಗರ ಕಡೆ ಬೆರಳು ತೋರಿಸಿ, ನಿಮ್ಮ ಮೂಗಿಗೆ ಬೆಣ್ಣೆ ಕೊಸರು ಸವರುತ್ತಿದ್ದಾರೆ. ನಿಮ್ಮ ನ್ಯಾಯಯುತ ಪಾಲಿನಲ್ಲಿ ಸಿಂಹಪಾಲು ಕಬಳಿಸಿದ್ದು ಯಾರೆಂದು ಗೊತ್ತಿದೆ. ಆದರೂ ಏಕೆ ಸುಮ್ಮನಿದ್ದೀರಿ ಎಂದು ಹಿಂದುಳಿದ ಜಾತಿಗಳ ಮುಖಂಡರನ್ನು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಲಿಂಗಾಯತರು, ಒಕ್ಕಲಿಗರನ್ನು ಬೈದರೆ ನಿಮ್ಮ ಹೊಟ್ಟೆ ತುಂಬುವುದೇ, ನಿಮ್ಮ ಮಕ್ಕಳಿಗೆ ನ್ಯಾಯ ಸಿಗುವುದೇ, ಈಗಲಾದರೂ ಅರ್ಥ ಮಾಡಿಕೊಂಡು ನಿಮ್ಮ ಹಕ್ಕಿಗಾಗಿ ಹೋರಾಟ ಮಾಡಿ. ಮಲ್ಲೇಶ್ವರದ ಸಿಇಟಿ ಸೆಲ್‌ನಲ್ಲಿ ಎಲ್ಲ ದಾಖಲೆಗಳಿವೆ. ಅವುಗಳನ್ನು ಒಮ್ಮೆ ಪರಿಶೀಲಿಸಿ ಎಂದು ಈ ಪ್ರವರ್ಗದ ಉಳಿದ 100 ಜಾತಿಗಳಿಗೆ ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ಜಾತಿ ಜನಗಣತಿ ವರದಿಗೆ ಕಾಂಗ್ರೆಸ್‌ನಲ್ಲೇ ಅಪಸ್ವರ

ಲಿಂಗಾಯತ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು

- ಸ್ವಪಕ್ಷೀಯರ ವಿರುದ್ಧ ಶಾಸಕ ಶಿವಗಂಗಾ ಬಸವರಾಜ್ ಕಿಡಿ
- 7 ಜನ ಲಿಂಗಾಯತ ಸಚಿವರೂ ಅಸಮರ್ಥರಿದ್ದಾರೆ

ದಾವಣಗೆರೆ, ಏ.16– ಲಿಂಗಾಯತ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಹೇಳುವ ಮೂಲಕ ಶಾಸಕ ಶಿವಗಂಗಾ ಬಸವರಾಜ್ ಸ್ವಪಕ್ಷೀಯರ ವಿರುದ್ಧವೇ ಕಿಡಿಕಾರಿದ್ದಾರೆ.

ದಾವಣಗೆರೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಿಕೆಶಿಯವರನ್ನು ಏಕೆ ಇಷ್ಟು ಇಷ್ಟಪಡುತ್ತೇವೆ ಅಂದರೆ ಸಮಾಜಕ್ಕೆ ಅನ್ಯಾಯ ಆಗುತ್ತದೆ ಅಂದ ತಕ್ಷಣ ಸಭೆ ಕರೆದರು. ಆದರೆ ನಮ್ಮ ಲಿಂಗಾಯತ ಸಮಾಜದ 7 ಮಂದಿ ಸಚಿವರಿದ್ದರೂ ಧ್ವನಿ ಎತ್ತಿಲ್ಲ. ಶಾಸಕರು ಇದರ ಬಗ್ಗೆ ಚರ್ಚೆ ಮಾಡಲು ಫೋನ್ ಮಾಡಿದರೂ ಸಚಿವರು ರಿಸೀವ್ ಮಾಡಲ್ಲ. 7 ಮಂದಿ ಸಚಿವರೂ ಅಸಮರ್ಥರಿದ್ದಾರೆ. ಕೂಡಲೇ ಅವರು ರಾಜೀನಾಮೆ ನೀಡಬೇಕು ಎಂದು ಶಿವಗಂಗಾ ಬಸವರಾಜ್ ಆಗ್ರಹಿಸಿದರು.



ಮೊನ್ನೆ ಈಶ್ವರ್ ಖಂಡ್ರೆಯವರಿಗೆ ಕಾಲ್ ಮಾಡಿದ್ದೂ ರಿಸೀವ್ ಮಾಡಲಿಲ್ಲ. ಆದರೆ, ಒಕ್ಕಲಿಗ ಸಮಾಜಕ್ಕೆ ಅನ್ಯಾಯ ಆಗಿದೆ ಅಂದ ಕೂಡಲೇ ಡಿಕೆಶಿ ಸಭೆ ಮಾಡಿದ್ದಾರೆ. ಆ ಸಮಾಜದ ಶಾಸಕರ ಜೊತೆ ಚರ್ಚೆ ನಡೆಸಿದ್ದಾರೆ. ಲಿಂಗಾಯತ ಸಮುದಾಯದ ಸಚಿವರು ಮಾತ್ರ ಚರ್ಚೆ ಮಾಡುತ್ತಿಲ್ಲ ಎಂದು ಸ್ವಪಕ್ಷದ ಸಚಿವರ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ.

ನಮ್ಮ ಸಮಾಜದ ಸಚಿವರು ಅವರ ಸ್ವಾರ್ಥಕ್ಕಾಗಿ ಮಾತ್ರ ರಾಜಕೀಯ ಮಾಡುತ್ತಿದ್ದಾರೆ. ಜಾತಿಗಣತಿ ನಮ್ಮ ಸಚಿವರಿಗೆ ಅವಶ್ಯಕತೆ ಇಲ್ಲ. ಯಾವ ಯಾವ ಸಮುದಾಯಕ್ಕೆ ಅನ್ಯಾಯ ಆಗಿದೆಯೋ ಅವರೆಲ್ಲ ಸಭೆ ಮಾಡುತ್ತೇವೆ ಎಂದರಲ್ಲದೇ ಜಾತಿ ಜನಗಣತಿ ಮರುಸಮೀಕ್ಷೆಗೆ ಒತ್ತಾಯಿಸಿದ್ದಾರೆ. ನಾನು ಕೂಡ ನಮ್ಮ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸುತ್ತಿದ್ದೇನೆ. ಇನ್ನೇರಡು ಮೂರು ದಿನಗಳಲ್ಲಿ ವರದಿ ನೀಡುತ್ತೇನೆ. ನಾಳೆ ಜಾತಿ ಜನಗಣತಿ ವರದಿ ಚರ್ಚೆ ಮಾಡಲಿ, ಆದರೆ, ಬಿಡುಗಡೆ ಮಾಡುವುದು ಬೇಡ. ಎಲ್ಲರ ಸಮೀಕ್ಷೆ ಮುಗಿದ ನಂತರ ಬಿಡುಗಡೆ ಮಾಡಲಿ. ಕ್ಷೇತ್ರದಲ್ಲಿ ಉತ್ತರ ಕೊಡುವವರು ನಾವು, ಎಲ್ಲಾ ಸಮುದಾಯಕ್ಕೆ ಉತ್ತರ ಕೊಡಬೇಕಿದೆ ಎಂದು ಹೇಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕೇಂದ್ರಗಳಿಗೆ ಎಂಎಲ್‌ಸಿ ವಿವೇಕಾನಂದ ಭೇಟಿ...



ಮೈಸೂರಿನ ಗುಡ್ ಶೆಫರ್ಡ್ ಕಾನ್ವೆಂಟ್ ಪ್ರೌಢಶಾಲೆ, ಸೆಂಟ್ ಫಿಲೋಮಿನಾಸ್ ಪ್ರೌಢಶಾಲೆಗಳಲ್ಲಿ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕೇಂದ್ರಗಳಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಭೇಟಿ ನೀಡಿ ಶಿಕ್ಷಕರ ಕುಂದು ಕೊರತೆ ಆಲಿಸಿದರು. ಈ ವೇಳೆ ಶಿಕ್ಷಕರಾದ ನಾಗಣ್ಣ, ದೀಪು, ಪುರುಷೋತ್ತಮ್ ಇತರರು ಉಪಸ್ಥಿತರಿದ್ದರು.

ಸಚಿವ ಸಂಪುಟ ಸಭೆಯಲ್ಲಿ ಲಿಂಗಾಯತ ಸಮುದಾಯಕ್ಕೆ ಆಗುವ ಸಮಸ್ಯೆ ಬಗ್ಗೆ ಚರ್ಚೆ

ಬೆಂಗಳೂರು, ಏ.16– ನಮಗೆ ಆಗುವ ಸಮಸ್ಯೆ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಮ್ಮ ಆತಂಕದ ಬಗ್ಗೆ ಸಿಎಂ ಅವರಿಗೆ ಮನವರಿಕೆ ಮಾಡುತ್ತೇವೆ ಎಂದು ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ.




ಜಾತಿಗಣತಿ ಬಗ್ಗೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಯಾವ ಲಿಂಗಾಯತ ಮುಖಂಡರು ಸಭೆ ಮಾಡುತ್ತಿಲ್ಲ. ನಾಳೆ ಕ್ಯಾಬಿನೆಟ್ ಇದೆ. ಅಲ್ಲಿ ಚರ್ಚೆ ಮಾಡುತ್ತೇವೆ. ಶಾಮನೂರು ಶಿವಶಂಕರಪ್ಪನವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಇದೆಲ್ಲವೂ ಪ್ರಾಥಮಿಕ ಹಂತದಲ್ಲಿ ಇದೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗದೇ ಏನೂ ನಿರ್ಣಯ ಆಗಲ್ಲ. ಲಿಂಗಾಯತರಲ್ಲೂ ಅನೇಕ ಸಮಸ್ಯೆ ಇದೆ. ಅದು ಕಾಂತರಾಜುರಿಂದ ಅಥವಾ ಸರ್ಕಾರದಿಂದ ಆಗಿದೆ ಎಂದು ಹೇಳಲ್ಲ. ಲಿಂಗಾಯತದ ಅನೇಕ ಉಪಪಂಗಡಗಳು ಇವೆ. ಮೀಸಲಾತಿ ಸಿಗುತ್ತದೆ ಎಂದು ಅವರು ಬೇರೆ ಬರೆಸಿದ್ದಾರೆ. ಅದನ್ನ ಹೇಗೆ ಬಗೆಹರಿಸಬೇಕು ಎಂದು ನೋಡುತ್ತೇವೆ. ಆ ಉಪಪಂಗಡ ಸೇರಿದರೆ ಜಾಸ್ತಿಯೇ ಆಗುತ್ತದೆ. ಟೆಕ್ನಿಕಲಿ ಸಮಸ್ಯೆ ಇದ್ದಾವೆ, ಅದೇನು ಸರಳ ಇಲ್ಲ. ಮೀಸಲಾತಿ ಬಿಡಿ ಎಂದು ಉಪಪಂಗಡಗಳಿಗೆ ಹೇಳಲು ಆಗಲ್ಲ. ಅದನ್ನು ಅವರು ಬಿಡೋದು ಇಲ್ಲ. ಅವರ ಮಕ್ಕಳಿಗೆ ಮೀಸಲಾತಿ ಸಿಗುತ್ತದೆ ಅಂತ ನಾವು ಟೀಕೆ ಟಿಪ್ಪಣಿ ಮಾಡಿದರೆ ಸರಿಯಲ್ಲ. ಕಾಂತರಾಜು ಮಾಡಿರೋದೆ ಇಷ್ಟು. ಸಮುದಾಯ ಗಣತಿ ಮಾಡಿ ಏನು ಪ್ರಯೋಜನ. 99% ಕ್ಯಾಬಿನೆಟ್‌ನಲ್ಲೇ ಸಮಸ್ಯೆ ಬಗೆಹರಿಯಲಿದೆ ಎಂದು ಎಂ.ಬಿ.ಪಾಟೀಲ್ ಹೇಳಿದರು.

ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳು ಇದ್ದವು, ಆದರೆ ಈಗ 180 ಜಾತಿ ಸೇರಿಸಿದ್ದಾರೆ

ಮಾದಾರ ಚೆನ್ನಯ್ಯ ಸ್ವಾಮೀಜಿ ಆಕ್ಷೇಪ

ಬೆಂಗಳೂರು, ಏ.16– ಜಾತಿಗಣತಿಯಲ್ಲಿ ಗೊಂದಲ ಇದೆ. ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳು ಇದ್ದವು. ಆದರೆ ಈಗ 180 ಜಾತಿ ಸೇರಿಸಿದ್ದಾರೆ ಎಂದು ವರದಿ ಆಗಿದೆ ಎಂದು ಚಿತ್ರದುರ್ಗ ಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಹಾಗಾದರೆ ಜಾತಿಗಣತಿಯಲ್ಲಿ ಸೇರ್ಪಡೆಗೊಂಡ ಜಾತಿಗಳು ಯಾವುದು, ಯಾರು ಅವರು? ಈ ಗೊಂದಲಗಳನ್ನು ಸರ್ಕಾರ ಸರಿಪಡಿಸಬೇಕು. ಕೆಲ ಸಮುದಾಯದವರು ಪರ–ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಾರಿಗೂ ಅನ್ಯಾಯ ಆಗದಂತೆ ಸಾಮಾಜಿಕ ನ್ಯಾಯ ಸಿಗಬೇಕು. ಇನ್ನೂ ಎಡ–ಬಲದ ಬಗ್ಗೆ ಕೆಲ ಜಿಲ್ಲೆಗಳಲ್ಲಿ ಗೊಂದಲ ಇದೆ. ಆದಿ ಕರ್ನಾಟಕ ಅಂತಾ ಕೆಲ ಜಿಲ್ಲೆಗಳಲ್ಲಿ ಇಬ್ಬರು ಬರೆಸಿದ್ದಾರೆ ಎಂದರು. ನಾಗಮೋಹನ್ ದಾಸ್ ವರದಿ ಸಲ್ಲಿಕೆ ವೇಳೆ ಗೊಂದಲ ಪರಿಹರಿಸಿ, ಒಳ ಮೀಸಲಾತಿ ಕಲ್ಪಿಸುವುದಾಗಿ ಹೇಳಿದೆ. 2 ತಿಂಗಳ ಕಾಲಾವಕಾಶ ಕೇಳಿದೆ. ಎಡ–ಬಲ ಸಹೋದರ ಸಮಾನರು, ಹಾಗಾಗಿ ಮೀಸಲಾತಿ ಹಂಚಿಕೆ ವೇಳೆ ಗೊಂದಲ ಬೇಡ ಎಂದರು.

ಸಾಮೂಹಿಕ ಉಪನಯನ

ಮೈಸೂರು: ವಿಪ್ರ ಜಾಗೃತಿ ವೇದಿಕೆ ಮತ್ತು ಪ್ರಕೋದಯಾತ್ ವಿಪ್ರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಮೇ 2ರಂದು ತ್ರಿಮತಸ್ಥ ವಿಪ್ರ ವಟುಗಳಿಗೆ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಅವನಿ ಶಂಕರ ಮಠದಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 9242205331, 9483485262 ಸಂಪರ್ಕಿಸಬಹುದು.

ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಶರತ್ ಜವಳಿ ನಿಧನ

ನವದೆಹಲಿ,ಏ.16–ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಶರತ್ ಎಸ್.ಜವಳಿ (85) ಅವರು ವಯೋಸಹಜ ಅನಾರೋಗ್ಯದಿಂದ ಬುಧವಾರ ಇಲ್ಲಿ ನಿಧನರಾದರು.



ಜವಳಿ ಅವರು ಹಲವು ಪ್ರಮುಖ ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿದ್ದರು. ನ್ಯಾಯಶಾಸ್ತ್ರಜ್ಞ ಫಾಲಿ ನರೀಮನ್ ಜತೆಗೆ ಕೃಷ್ಣಾ, ಕಾವೇರಿ ಹಾಗೂ ಮಹದಾಯಿ ಜಲವಿವಾದಗಳಲ್ಲಿ ಸುಪ್ರೀಂ ಕೋರ್ಟ್ ಹಾಗೂ ನ್ಯಾಯಮಂಡಳಿಗಳಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸಿದ್ದರು. ಬೆಳಗಾವಿ ಗಡಿ ವಿವಾದದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅವರಿಗೆ ಪುತ್ರ ಕಿರಣ್ ಜವಳಿ (ಹೈಕೋರ್ಟ್ ಹಿರಿಯ ವಕೀಲ) ಹಾಗೂ ಪುತ್ರಿ ಇದ್ದಾರೆ.

ಹಾವೇರಿಯಲ್ಲಿ ಜನಿಸಿದ್ದ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿದ್ದರು. ಆರಂಭದಲ್ಲಿ ಮಾಜಿ ಅಟಾರ್ನಿ ಜನರಲ್ ಎಸ್.ವಿ. ಗುಪ್ತೆ ಅವರ ಜತೆಗೆ ಕಿರಿಯ ವಕೀಲರಾಗಿ ಕೆಲಸ ಮಾಡಿದ್ದರು. 61 ವರ್ಷಗಳಿಂದ ಸುಪ್ರೀಂ ಕೋರ್ಟ್ ವಕೀಲರಾಗಿದ್ದರು. ಇತ್ತೀಚೆಗೆ ಇಂಗ್ಲೆಂಡ್‌ನ ಕೇಂಬ್ರಿಜ್ ವಿವಿಯ ಸಿಡ್ನಿ ಸಸೆಕ್ಸ್ ಕಾಲೇಜಿನ ಫೆಲೋ ಗೌರವಕ್ಕೆ ಪಾತ್ರರಾಗಿದ್ದರು.

ಮಳೆ-ಗಾಳಿ ವೇಳೆ ವಿದ್ಯುತ್ ಅವಘಡ ಸಂಭವಿಸದಂತೆ ಎಚ್ಚರ ವಹಿಸಿ

ಸಾರ್ವಜನಿಕರಿಗೆ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಸಲಹೆ


ರಮೇಶ್ ಬಂಡಿಸಿದ್ದೇಗೌಡ

ಮೈಸೂರು, ಏ.16(ಬಿಎಲ್‌ಯು)- ಪೂರ್ವ ಮುಂಗಾರು ಮಳೆ ಆರಂಭಗೊಂಡಿದ್ದು, ಭಾರಿ ಮಳೆ, ಗಾಳಿಯ ಸಂದರ್ಭದಲ್ಲಿ ವಿದ್ಯುತ್ ಅಪಾಯ ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ಶಾಸಕರೂ ಆದ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ಸೆಸ್ಕ್ ವ್ಯಾಪ್ತಿಯ ಐದು ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಆರಂಭವಾಗಿ ಅಲ್ಲಲ್ಲಿ ಮಳೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಭಾರಿ ಮಳೆ, ಗಾಳಿಗೆ ಅನಾಹುತಗಳು ಸಂಭವಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮಳೆಯಿಂದ ಸಂಭವಿಸಬಹುದಾದ ವಿದ್ಯುತ್ ಅವಘಡ ಹಾಗೂ ತೊಂದರೆ ಎದುರಿಸಲು ಸೆಸ್ಕ್ ಸನ್ನದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ. ಈ ಸಂಬಂಧ ಸಾರ್ವಜನಿಕರ ಬಗ್ಗೆ ಹೆಚ್ಚಿನ ನಿಗಾ ವಹಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತಾಕೀತು ಮಾಡಿದ್ದಾರೆ.

ಅಗತ್ಯ ಮುನ್ನೆಚ್ಚರಿಕೆ ವಹಿಸಲು ಟಿಪ್ಸ್

- ರಸ್ತೆಬದಿ ಅಥವಾ ಇತರೆಡೆ ತುಂಡಾಗಿ ಬಿದ್ದ ತಂತಿಗಳನ್ನು ಮುಟ್ಟಬೇಡಿ
- ಬಟ್ಟೆ ಒಣಗಿಸಲು ವಿದ್ಯುತ್ ಕಂಬಗಳು, ವೈಯರ್‌ಗಳನ್ನು ಬಳಸಬೇಡಿ
- ವಿದ್ಯುತ್ ಕಂಬಗಳು ಅಥವಾ ಟ್ರಾನ್ಸ್‌ಫಾರ್ಮರ್ ಅಕ್ಕಪಕ್ಕದಲ್ಲಿ ದನ ಕರುಗಳನ್ನು ಕಟ್ಟಬೇಡಿ
- ಮಳೆ, ಗಾಳಿ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಸಮೀಪ ನಿಲ್ಲದಂತೆ ಎಚ್ಚರಿಕೆ ವಹಿಸಿ

ಸಹಾಯವಾಣಿ 1912ಗೆ ಕರೆ ಮಾಡಿ

ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ತಂತಿ ತುಂಡಾಗಿರುವುದು, ವಿದ್ಯುತ್ ಕಂಬಕ್ಕೆ ಹಾನಿಯಾಗಿರುವುದು, ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಸಮಸ್ಯೆ ಕಂಡು ಬಂದಲ್ಲಿ ಸಾರ್ವಜನಿಕರು ತುರ್ತಾಗಿ 24x7 ಸಹಾಯವಾಣಿ 1912 ಅಥವಾ ವಾಟ್ಸಪ್ ಸಂಖ್ಯೆ 9448991912 ಸಂಖ್ಯೆಗೆ ಫೋಟೋ ಸಹಿತ ಮಾಹಿತಿ ನೀಡಬಹುದು.

-ಕೆ.ಎಂ.ಮುನಿಗೋಪಾಲ್‌ರಾಜು, ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ

ಪಡಿತರ ಚೀಟಿದಾರರು ಇ-ಕೆವೈಸಿ ಮಾಡಿಸುವುದು ಕಡ್ಡಾಯ

ಮೈಸೂರು,ಏ.16(ಪಿಎಂ)- ಜಿಲ್ಲೆಯ ಪಡಿತರ ಚೀಟಿದಾರರ ಪೈಕಿ ಈವರೆಗೆ ಇ-ಕೆವೈಸಿ ಮಾಡಿಸಿರದ ಕುಟುಂಬದ ಸದಸ್ಯರು ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗೆ ತೆರಳಿ ಬಯೋ ದೃಢೀಕರಣ (ಇ-ಕೆವೈಸಿ) ನೀಡಬೇಕೆಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಡಿತರ ಚೀಟಿದಾರರು ತಮ್ಮ ಕುಟುಂಬದ ಎಲ್ಲಾ ಸದಸ್ಯರ ಇ-ಕೆವೈಸಿ (ಆಧಾರ್ ಆಧಾರಿತ ಹೆಬ್ಬೆಟ್ಟಿನ ದೃಢೀಕರಣ) ಮಾಡಿಸುವುದು ಕಡ್ಡಾಯ. ಆದ್ದರಿಂದ ಇದಕ್ಕೆ ಏ.30ರವರೆಗೆ ಮತ್ತೊಮ್ಮೆ ಕೊನೆ ಅವಕಾಶ ನೀಡಲಾಗಿದೆ. ಈ ಆಧಾರ್ ದೃಢೀಕರಣ (ಇ-ಕೆವೈಸಿ) ಮಾಡಿಸುವುದು ಸಂಪೂರ್ಣ ಉಚಿತ. ಪಡಿತರ ಚೀಟಿ, ಜಾತಿ ಪ್ರಮಾಣಪತ್ರ (ಎಸ್‌ಸಿ ಮತ್ತು ಎಸ್‌ಟಿ ಆಗಿದ್ದಲ್ಲಿ ಮಾತ್ರ), ಗ್ಯಾಸ್ ಸಂಪರ್ಕದ ಪುಸ್ತಕ ಮತ್ತು ಆಧಾರ್ ಕಾರ್ಡ್ ಇ-ಕೆವೈಸಿಗೆ ಬೇಕಿರುವ ದಾಖಲೆಗಳಾಗಿವೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಲಕ್ಷ್ಮಿದೇವಿಗೆ ಶಾಸಕ ಶ್ರೀವತ್ಸರಿಂದ ಅಭಿನಂದನೆ...



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ರಘುನಾಥ್ ತಂಡದಿಂದ ಸ್ಪರ್ಧಿಸಿ ಜಯಶೀಲರಾದ ಡಾ.ಲಕ್ಷ್ಮೀದೇವಿ ಅವರನ್ನು ಶಾಸಕ ಟಿ.ಎಸ್.ಶ್ರೀವತ್ಸ ಅಭಿನಂದಿಸಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಹೊಯ್ಸಳ ಕರ್ನಾಟಕ ಸಂಘದ ಕಟ್ಟಡ ಸಮಿತಿ ಮಾಜಿ ಅಧ್ಯಕ್ಷ ಲಕ್ಷ್ಮೀನರಸಿಂಹ, ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಖಜಾಂಚಿ ಕಲ್ಕೆರೆ ನಾಗರಾಜ್, ಶ್ರೀ ರಾಮಾನುಜ ಸಹಕಾರ ಸಂಘದ ನಿರ್ದೇಶಕ ಟಿ.ಎಸ್ ಅರುಣ್, ವಿಪ್ರ ಮುಖಂಡರಾದ ಶಂಕರ ನಾರಾಯಣ್, ಶ್ರೀನಿವಾಸ್‌ಪ್ರಸಾದ್, ವನಜ, ಶಾಂತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರ

ಮೈಸೂರು,ಏ.16- ಮುಕ್ತ ವಿವಿಯ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಆಯೋಜಿಸಿರುವ 50 ದಿನಗಳ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಉದ್ಘಾಟನೆ ಸಮಾರಂಭವನ್ನು ಏ.17ರಂದು ಬೆಳಗ್ಗೆ 11 ಗಂಟೆಗೆ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರವನ್ನು ಹಿರಿಯ ಐಪಿಎಸ್ ಅಧಿಕಾರಿ, ಮೈಸೂರು ದಕ್ಷಿಣ ವಲಯದ ಪೊಲೀಸ್ ಉಪಮಹಾನಿರೀಕ್ಷಕ ಡಾ.ಎಂ.ಬಿ. ಬೋರಲಿಂಗಯ್ಯ, ಉದ್ಘಾಟಿಸಲಿದ್ದಾರೆ. ಮೈಸೂರು ಮಹಾನಗರಪಾಲಿಕೆಯ ಉಪ ಆಯುಕ್ತ ಜಿ.ಎಸ್.ಸೋಮಶೇಖರ್ ಪರೀಕ್ಷಾ ಸಿದ್ಧತೆ ಕುರಿತು ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿ ಸಂವಾದ ನಡೆಸಲಿದ್ದಾರೆ. ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ ಉಪಸ್ಥಿತರಿರಲಿದ್ದಾರೆ. ಆಸಕ್ತ ಅಭ್ಯರ್ಥಿಗಳು ಈಗಲೂ ಪ್ರವೇಶಾತಿಗಾಗಿ 0821-2515944/ 9964760090 ಅನ್ನು ಸಂಪರ್ಕಿಸಬಹುದು ಎಂದು ಸ್ಪರ್ಧಾತ್ಮಕ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ವೈ.ಪುಣ್ಯ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು,ಏ.16-ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಪಿಯು ಕಾಲೇಜಿನ ವಿದ್ಯಾರ್ಥಿನಿ ವೈ ಪುಣ್ಯ ದ್ವಿತೀಯ ಪಿಯುಸಿ ಪರೀಕ್ಷೆ ವಿಜ್ಞಾನ ವಿಭಾಗದಲ್ಲಿ 575 (95.83%) ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವೈ.ಪುಣ್ಯ ಕನ್ನಡದಲ್ಲಿ 100, ಇಂಗ್ಲಿಷ್-95, ಭೌತಶಾಸ್ತ್ರ-94, ರಸಾಯನಶಾಸ್ತ್ರ-89, ಗಣಿತ-98, ಜೀವಶಾಸ್ತ್ರ-99 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಕಾಂಗ್ರೆಸ್ಸಿನ ಒಬಿಸಿ ಮುಖಂಡ, ಉಪ್ಪಾರ ಸಮಾಜದ ಮೈಸೂರು ಜಿಲ್ಲಾಧ್ಯಕ್ಷ ಎಸ್.ಯೋಗೀಶ ಉಪ್ಪಾರ ಹಾಗೂ ಪ್ರಭಾ ದಂಪತಿ ಪುತ್ರಿ.

ಅರಣ್ಯ ಗಸ್ತು ಪಾಲಕರ ಹುದ್ದೆ ಅಭ್ಯರ್ಥಿಗಳಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆ





ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಅರಣ್ಯ ಗಸ್ತುಪಾಲಕರ ಹುದ್ದೆಗಳ ನೇಮಕಾತಿಗಾಗಿ ಬುಧವಾರ ನಡೆದ ದೈಹಿಕ ಪರೀಕ್ಷೆಯಲ್ಲಿ 1600 ಮೀಟರ್ ಪುರುಷರ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಅಭ್ಯರ್ಥಿಗಳು. ಉದ್ದ ಜಿಗಿತ ಪರೀಕ್ಷೆಯಲ್ಲಿ ಪಾಲ್ಗೊಂಡಿರುವ ಮಹಿಳಾ ಅಭ್ಯರ್ಥಿಯನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.16(ಎಂಟಿವೈ)- ಅರಣ್ಯ ಇಲಾಖೆ ಮೈಸೂರು ವೃತ್ತದಲ್ಲಿ 47 ಅರಣ್ಯ ಗಸ್ತು ಪಾಲಕರ ನೇರ ನೇಮಕಾತಿಗಾಗಿ ಅರ್ಜಿ ಸಲ್ಲಿಸಿ, ದೈಹಿಕ ಪರೀಕ್ಷೆಗಾಗಿ ಆಯ್ಕೆಯಾಗಿದ್ದ 367 ಅಭ್ಯರ್ಥಿಗಳು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಭಾಗಿಯಾದರು.

ಕರ್ನಾಟಕ ಅರಣ್ಯ ಇಲಾಖೆಯ ಮೈಸೂರು ವೃತ್ತಕ್ಕೆ 2023-24ನೇ ಸಾಲಿನಲ್ಲಿ ಹಂಚಿಕೆಯಾದ 47 ಹುದ್ದೆಗಳಿಗಾಗಿ ಪಿಯುಸಿ ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದವರಿಂದ ಕಳೆದ ಆಗಸ್ಟ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ರಾಜ್ಯದಾದ್ಯಂತ 11,726 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅವರಲ್ಲಿ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿದ್ದ ಅಭ್ಯರ್ಥಿಗಳ ಪಟ್ಟಿ ತಯಾರಿಸಿ, 1:20ರಂತೆ 778 ಮಂದಿಯನ್ನು ದೈಹಿಕ ಪರೀಕ್ಷೆಗಾಗಿ ಆಯ್ಕೆ ಮಾಡಲಾಗಿತ್ತು. ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಬೆಳಗ್ಗಿನಿಂದ ಸಂಜೆವರೆಗೆ ನಡೆದ ದೈಹಿಕ ಪರೀಕ್ಷೆಯಲ್ಲಿ 290 ಪುರುಷ, 97 ಮಹಿಳಾ ಅಭ್ಯರ್ಥಿಗಳು ಸೇರಿದಂತೆ 367 ಮಂದಿ ಪಾಲ್ಗೊಂಡು, ತಮ್ಮ ದೈಹಿಕ ಸಾಮರ್ಥ್ಯ ಪ್ರದರ್ಶಿಸಿದರು.

ಚಾಮರಾಜನಗರ ಜಿಲ್ಲೆಯ ಸಿಸಿಎಫ್ ಟಿ.ಹೀರಾಲಾಲ್ ಅವರು ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಚಾಲನೆ ನೀಡಿ, ಯಾವುದೇ ಲೋಪ-ದೋಷವಾಗದಂತೆ ಕಟ್ಟುನಿಟ್ಟಾಗಿ ದೈಹಿಕ ಪರೀಕ್ಷೆ ನಡೆಸುವಂತೆ ಸಲಹೆ ನೀಡಿದರು. ಬಳಿಕ ಪರೀಕ್ಷೆಗಾಗಿ ಆಗಮಿಸಿದ್ದ ಅಭ್ಯರ್ಥಿಗಳಲ್ಲಿ ಯುವಕ-ಯುವತಿಯರನ್ನು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ, ದೈಹಿಕ ಪರೀಕ್ಷೆ ನಡೆಸಲಾಯಿತು.

ಪುರುಷ ಅಭ್ಯರ್ಥಿಗಳಿಗೆ: ಪುರುಷ ಅಭ್ಯರ್ಥಿಗಳು 7 ನಿಮಿಷದಲ್ಲಿ 1600 ಮೀಟರ್ ಓಟ, 15 ಸೆಕೆಂಡ್‌ನಲ್ಲಿ 100 ಮೀಟರ್ ಓಟ, 1.20 ಮೀಟರ್ ಎತ್ತರ ಜಿಗಿತ, 3.80 ಮೀಟರ್ ಉದ್ದ ಜಿಗಿತ, 5.60 ಮೀಟರ್ ಗುಂಡು ಎಸೆತ(16 ಎಲ್‌ಬಿ)ದ ಪರೀಕ್ಷೆ ಎದುರಿಸಬೇಕಾಯಿತು. ಅರಣ್ಯ ಇಲಾಖೆ ನೀಡಿದ ನಿಗದಿತ ಗುರಿಯೊಳಗೆ ಪರೀಕ್ಷೆ ಎದುರಿಸಿದ ಅಭ್ಯರ್ಥಿಗಳನ್ನು ಮುಂದಿನ ಪರೀಕ್ಷೆಗೆ ಆಯ್ಕೆ ಮಾಡಿ, ನಿಗದಿತ ಸಮಯ ಮತ್ತು ಮಾನದಂಡದಲ್ಲಿ ಪರೀಕ್ಷೆಗೆ ಎದುರಿಸದವರನ್ನು ತಿರಸ್ಕರಿಸಲಾಯಿತು.

ಮಹಿಳಾ ಅಭ್ಯರ್ಥಿಗಳಿಗೆ: 97 ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ, ದೈಹಿಕ ಪರೀಕ್ಷೆ ಎದುರಿಸಲು ಆಗಮಿಸಿದ್ದರು. ಮಹಿಳಾ ಅಭ್ಯರ್ಥಿಗಳಿಗೆ 1000 ಮೀಟರ್ ಓಟವನ್ನು 6 ನಿಮಿಷದಲ್ಲಿ ಪೂರೈಸುವ, 18.5 ಸೆಕೆಂಡ್‌ನಲ್ಲಿ 100 ಮೀಟರ್ ಓಟ, 0.90 ಮೀಟರ್ ಎತ್ತರ ಜಿಗಿತ, 2.50 ಮೀಟರ್ ಉದ್ದ ಜಿಗಿತ, 3.76 ಮೀಟರ್ ಗುಂಡು ಎಸೆತ(8ಎಲ್‌ಬಿ) ಹಾಗೂ 40 ಸೆಕೆಂಡ್‌ನಲ್ಲಿ 200 ಮೀಟರ್ ಓಡಬೇಕಾದ ಗುರಿ ನೀಡಲಾಗಿತ್ತು.

ಉತ್ತರ ಕರ್ನಾಟಕದವರೇ ಹೆಚ್ಚು: ಅರ್ಜಿ ಸಲ್ಲಿಸಿದ್ದವರಲ್ಲಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳೇ ಹೆಚ್ಚಾಗಿದ್ದರು. ಕೆಲವರು ಕುಟುಂಬದ ಸದಸ್ಯರೊಂದಿಗೆ ಆಗಮಿಸಿ ಸಂದರ್ಶನ ಎದುರಿಸಲು ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಆಗಮಿಸಿದ್ದರು. ಅಲ್ಲದೆ, ದೈಹಿಕ ಪರೀಕ್ಷೆಯಲ್ಲೂ ಉತ್ತಮ ಪ್ರದರ್ಶನ ನೀಡಿದರು. ಕೆಲವರು ಕೆಲ ಸೆಕೆಂಡ್‌ನಲ್ಲಿ ಗುರಿ ತಲುಪಲಾಗದೆ ಮುಂದಿನ ಹಂತದ ಪರೀಕ್ಷೆಯಿಂದ ನಿರ್ಗಮಿಸಿದರು.

ಹಿರಿಯ ಅಧಿಕಾರಿಗಳ ಉಪಸ್ಥಿತಿ: ಮೈಸೂರು ಡಿಸಿಎಫ್ ಡಾ.ಕೆ.ಎನ್.ಬಸವರಾಜ್ ಉಸ್ತುವಾರಿಯಲ್ಲಿ ನಡೆದ ದೈಹಿಕ ಪರೀಕ್ಷೆ ವೇಳೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎ.ಸೀಮಾ, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಪ್ರಭುಗೌಡ, ಆನೆ ಕಾರ್ಯಪಡೆಯ ಡಿಸಿಎಫ್ ನವೀನ್, ಸಂಚಾರ ದಳದ ಡಿಸಿಎಫ್ ಡಾ.ಚಂದ್ರಶೇಖರ್ ಪಾಟೀಲ್, ಡಿಸಿಎಫ್‌ಗಳಾದ ಸುಮಂತ್, ಮಹಮದ್ ಫಯಾಜುದ್ದೀನ್, ತಹಸೀನ್ ಬಾನು ದವಾಡಿ ಸೇರಿದಂತೆ ಎಸಿಎಫ್‌ಗಳು, ಆರ್‌ಎಫ್‌ಓ, ಡಿಆರ್‌ಎಫ್‌ಓಗಳು ಉಪಸ್ಥಿತರಿದ್ದರು.

ನಾಳೆಯಿಂದ ವೈದ್ಯಕೀಯ ಪರೀಕ್ಷೆ: ಇಂದು ನಡೆದ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನಾಳೆ(ಏ.17)ಯಿಂದ ಏ.25ರವರೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಯಶಸ್ವಿಯಾಗಿ ಪರೀಕ್ಷೆ ನಡೆಸಲಾಗಿದೆ

"ಮೈಸೂರು ವೃತ್ತದಲ್ಲಿ 47 ಅರಣ್ಯ ಗಸ್ತು ಪಾಲಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಒಟ್ಟು 11,726 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅವರಲ್ಲಿ ಹೆಚ್ಚು ಅಂಕ ಪಡೆದ 778 ಮಂದಿಯನ್ನು ದೈಹಿಕ ಪರೀಕ್ಷೆಗೆ ಆಯ್ಕೆ ಮಾಡಲಾಗಿತ್ತು. ಆದರೆ ಇಂದು 290 ಪುರುಷ, 97 ಮಹಿಳಾ ಅಭ್ಯರ್ಥಿಗಳು ದೈಹಿಕ ಸಾಮರ್ಥ್ಯದ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಇಂದು ಐದು ವಿವಿಧ ದೈಹಿಕ ಪರೀಕ್ಷೆ ನಡೆಸಲಾಗಿದೆ. ಅವುಗಳಲ್ಲಿ ಕಡ್ಡಾಯವಾಗಿ 3 ಪರೀಕ್ಷೆಯಲ್ಲಿ ಆಯ್ಕೆಯಾದ 226 ಪುರುಷ ಹಾಗೂ 79 ಮಹಿಳಾ ಅಭ್ಯರ್ಥಿಗಳಿಗೆ ನಾಳೆಯಿಂದ ದೇಹದಾರ್ಢ್ಯತೆ ಪರೀಕ್ಷೆ ನಡೆಸಲಾಗುತ್ತದೆ. ಬಳಿಕ ಲಿಖಿತ ಪರೀಕ್ಷೆ ನಡೆಸಿ, ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗುತ್ತದೆ.

-ಕೆ.ಎನ್.ಬಸವರಾಜು, ಡಿಸಿಎಫ್ ಮೈಸೂರು.

ಮುಂದುವರೆದ ಲಾರಿ ಮುಷ್ಕರ: ಕಂಗಾಲಾಗಿರುವ ಲೋಡರ್‌ಗಳು



ಡೀಸೆಲ್ ದರ ಏರಿಕೆ ಖಂಡಿಸಿ ರಾಜ್ಯಾದ್ಯಂತ ಆರಂಭಿಸಿರುವ ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಬುಧವಾರವೂ ಮುಂದುವರಿಯಿತು.

ಮೈಸೂರು, ಏ. 16(ಆರ್‌ಕೆ)- ಡೀಸೆಲ್ ದರ ಏರಿಕೆ ಖಂಡಿಸಿ ರಾಜ್ಯಾದ್ಯಂತ ಆರಂಭಿಸಿರುವ ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಇಂದೂ (ಬುಧವಾರ) ಮುಂದುವರಿಯಿತು.

ಪರಿಣಾಮ ರೈಲು ಬೋಗಿಗಳಲ್ಲಿ ಬರುವ ರಸಗೊಬ್ಬರ, ಆಹಾರ ಧಾನ್ಯಗಳನ್ನು ಅನ್‌ಲೋಡ್ ಮಾಡಿ ಲಾರಿಯಲ್ಲಿ ಸಾಗಿಸುತ್ತಿದ್ದ ಕಾರ್ಮಿಕರು ಕೆಲಸ, ಕೂಲಿ ಇಲ್ಲದೇ ಕಂಗಾಲಾಗಿದ್ದಾರೆ. ಮೇಟಗಳ್ಳಿಯ ರೈಲ್ವೇ ಗೂಡ್ಸ್ ಶೆಡ್, ಹಳೇ ಆರ್‌ಎಂಸಿ ಮಾರುಕಟ್ಟೆ, ಬಂಡೀಪಾಳ್ಯದ ಎಪಿಎಂಸಿ, ಸಂತೇಪೇಟೆ ಸೇರಿದಂತೆ ಹಲವೆಡೆ ಕೆಲಸ ಮಾಡುತ್ತಿದ್ದ ಲೋಡರ್‌ಗಳು ಕೂಲಿ ಸಿಗದ ಕಾರಣ ಊಟ-ತಿಂಡಿಗೂ ಪರದಾಡುವಂತಾಗಿದೆ.

ಲೋಡ್-ಅನ್‌ಲೋಡ್ ಮಾಡಿ ಅದರಿಂದ ಬಂದ ಕೂಲಿ ಹಣದಿಂದ ಆ ದಿನದ ಜೀವನ ನಡೆಸುತ್ತಿದ್ದ ಕಾರ್ಮಿಕರು, ಕುಟುಂಬ ನಿರ್ವಹಣೆಗೂ ಅದನ್ನೇ ನಂಬಿಕೊಂಡಿದ್ದಾರೆ. ಲಾರಿಗಳು ಕಾರ್ಯಸ್ಥಗಿತಗೊಳಿಸಿರುವುದರಿಂದ ಗೂಡ್ಸ್ ಶೆಡ್ ಬಳಿ, ಮಾರುಕಟ್ಟೆ ಬಳಿ ಖಾಲಿ ಕೈಯ್ಯಲ್ಲಿ ಕೆಲಸಕ್ಕಾಗಿ ಕಾದು ಕುಳಿತಿದ್ದಾರೆ.

ಲಾರಿ ಮುಷ್ಕರದಿಂದಾಗಿ ಮೈಸೂರು ನಗರದಲ್ಲಿ ಸುಮಾರು 2,000 ಮಂದಿ ಲೋಡರ್‌ಗಳು ತಮಗೆ ಸಮಸ್ಯೆಯಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಮ್ಮ ಅಳಲು ತೋಡಿಕೊಂಡರು. ಈ ಮಧ್ಯೆ ಮುಷ್ಕರ ನಡೆಸುತ್ತಿರುವ ಲಾರಿ ಮಾಲೀಕರು, ಸರ್ಕಾರದ ನಡೆಗಾಗಿ ಎದುರು ನೋಡುತ್ತಿದ್ದಾರೆ.

ಕಬ್ಬಿಣ, ಸಿಮೆಂಟ್, ಆಹಾರ ಧಾನ್ಯ, ರಸಗೊಬ್ಬರ, ಮದ್ಯ ಲೋಡ್ ಮಾಡಿ ಅನ್‌ಲೋಡ್ ಮಾಡುತ್ತಿದ್ದರಿಂದ ದಿನಕ್ಕೆ 1,000ದಿಂದ 1,500 ರೂ. ಕೂಲಿ ಸಂಪಾದಿಸಿ ಹೇಗೋ ಹೊಟ್ಟೆ ಹೊರೆಯುತ್ತಿದ್ದೆವು. ಇದೀಗ ದುಡಿಯುವ ಕೈಗಳಿಗೆ ಕೆಲಸವಿಲ್ಲದಂತಾಗಿದೆ ಎಂದು ಲೋಡರ್‌ಗಳು ತಿಳಿಸಿದ್ದಾರೆ.

ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಹಾಗೂ ಸಾರಿಗೆ ಸಚಿವರ ಮಾತುಕತೆ ಫಲಪ್ರದವಾಗದ ಕಾರಣ ನಾವು ಮುಷ್ಕರ ಮುಂದುವರಿಸಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಬಿ. ಕೋದಂಡರಾಮು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜಾತಿಗಣತಿ ತಿರಸ್ಕರಿಸದಿದ್ದರೆ ರಾಜ್ಯಾದ್ಯಂತ ಹೋರಾಟ: ಒಕ್ಕಲಿಗರ ಸಂಘ ಎಚ್ಚರಿಕೆ

ಮೈಸೂರು,ಏ.16(ಜಿಎ)-ಜಾತಿ ಗಣತಿ ವರದಿ ಅವೈಜ್ಞಾನಿಕವಾಗಿರುವ ಕಾರಣ ಸರ್ಕಾರ ಅದನ್ನು ತಿರಸ್ಕರಿಸದಿದ್ದರೆ ರಾಜ್ಯದಾದ್ಯಂತ ಒಕ್ಕಲಿಗರು ತೀವ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮೈಸೂರು, ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಇ.ಚೇತನ್ ಈ ವಿಷಯ ತಿಳಿಸಿ, 1991ರಲ್ಲಿ ರಾಜ್ಯದ ಜನಸಂಖ್ಯೆ 4.49 ಕೋಟಿಗೂ ಅಧಿಕವಿದೆ. ಇದರಲ್ಲಿ ಒಕ್ಕಲಿಗರ ಸಂಖ್ಯೆ 55 ಲಕ್ಷಕ್ಕೂ ಹೆಚ್ಚು ಇತ್ತೆಂದು ತಿಳಿಸಲಾಗಿದೆ. ಆದರೆ ಇಂದಿನ ಜನಸಂಖ್ಯೆಗೆ ಅನುಗುಣವಾಗಿ ಸುಮಾರು 1 ಕೋಟಿಗೂ ಹೆಚ್ಚು ಇದ್ದಾರೆ. ಈ ನಡುವೆ ಕಾಂತರಾಜು ಆಯೋಗ ಕೇವಲ 61 ಲಕ್ಷ ಎಂದು ತಿಳಿಸಿದೆ. ಇದು ಒಕ್ಕಲಿಗ ಸಮುದಾಯವನ್ನು ಒಡೆಯುವ ಹಾಗೂ 2ನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ತಳ್ಳುವ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಸಮೀಕ್ಷೆ ವೇಳೆ ಮನೆ ಮನೆಗೆ ಭೇಟಿ ನೀಡದೇ ಗಣತಿ ಮಾಡಲಾಗಿದೆ. ಆಧಾರ್ ಕಾರ್ಡ್, ವೋಟರ್ ಐಡಿ, ಪಾನ್‌ಕಾರ್ಡ್‌ಗಳಲ್ಲಿ ಜಾತಿ ನಮೂನೆ ಅಥವಾ ಜಾತಿ ಸೂಚಕ ಇಲ್ಲ. ಕೇವಲ ಶಾಲಾ ವರ್ಗಾವಣೆ ಪತ್ರ ಹಾಗೂ ಜಾತಿ ಪ್ರಮಾಣ ಪತ್ರಗಳಲ್ಲಿ ಮಾತ್ರ ಇದೆ. ಹೀಗಿರುವಾಗ ರಾಜ್ಯದಲ್ಲಿರುವ ಎಲ್ಲಾ ಒಕ್ಕಲಿಗ ಒಳಪಂಗಡಗಳ ಪೈಕಿ ಎಷ್ಟು ಜನರಿಗೆ ಟಿಸಿ ಇದೆ, ಎಷ್ಟು ಜನ ವರ್ಗಾವಣೆ ಪ್ರಮಾಣ ಪತ್ರ ಹೊಂದಿದ್ದಾರೆ ಎನ್ನುವುದನ್ನು ಯಾವ ಮಾನದಂಡದ ಆಧಾರದ ಮೇಲೆ ಖಾತರಿ ಮಾಡಿಕೊಂಡರು ಎಂಬುದು ತಿಳಿಯದಾಗಿದೆ ಎಂದು ಲೇವಡಿ ಮಾಡಿದರು.

ಈ ವರದಿಯ ಉದ್ದೇಶ ಕೇವಲ ಒಕ್ಕಲಿಗ ಸಮುದಾಯವನ್ನು ಒಡೆಯುವ ಯತ್ನವಾಗಿದೆ. ಪ್ರಾತಿನಿಧ್ಯವನ್ನು ಎಲ್ಲ ಮೂಲಗಳಿಂದ ತೆಗೆದು ಹಾಕುವ ಸಂಚು ನಡೆಸಿದ್ದಾರೆ. ಹೀಗಾಗಿ ಒಕ್ಕಲಿಗ ಸಮುದಾಯದ ಜನಪ್ರತಿನಿಧಿಗಳು ಇದನ್ನು ವಿರೋಧಿಸದಿದ್ದರೆ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಂಜೇಗೌಡ, ಮರಿಸ್ವಾಮಿ, ಪ್ರಕಾಶ್, ಕುಮಾರ್‌ಗೌಡ, ಪ್ರಸನ್ನ ಗೌಡ, ಸುಶೀಲಾ ನಂಜಪ್ಪ, ನಾಗಣ್ಣ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮತ್ತಿತರರಿದ್ದರು.

ಮರಗಳ ಹನನ ಖಂಡಿಸಿ ನಾಳೆ ಮೌನ ಪ್ರತಿಭಟನೆ

ಮೈಸೂರು, ಏ.16(ಜಿಎ)-ಮೈಸೂರಿನ ಎಸ್‌ಪಿ ಕಚೇರಿ ಬಳಿಯ ರಸ್ತೆಯಲ್ಲಿನ ಮರಗಳನ್ನು ಏಕಾಏಕಿ ಕಡಿದಿರುವ ಘಟನೆ ಖಂಡಿಸಿ ಏ.18ರಂದು ಸಂಜೆ 6.30ಕ್ಕೆ ಮರಗಳು ಕಡಿಯಲ್ಪಟ್ಟ ಸ್ಥಳದಲ್ಲಿ ಕಪ್ಪು ಪಟ್ಟಿ ಧರಿಸಿ, ಮೊಂಬತ್ತಿ ಹಚ್ಚಿ ಮೌನ ಪ್ರತಿಭಟನೆ ನಡೆಸಲು ಪರಿಸರ ಉಳಿವಿಗಾಗಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಈ ವಿಷಯ ತಿಳಿಸಿ, ಮೈಸೂರಿನ ತಾಪಮಾನ ಕಳೆದ ವರ್ಷ 40 ಡಿಗ್ರಿ ಸೆಂಟಿಗ್ರೇಡ್ ದಾಟಿತ್ತು. ಇಂತಹ ಸಂಕಷ್ಟದ ಸಮಯದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಬೇಕಾದ ಅರಣ್ಯ ಇಲಾಖೆ ಸುಮಾರು 40 ದೊಡ್ಡ ಮರಗಳನ್ನು ಕಡಿಯಲು ಅನುಮತಿ ನೀಡಿದ್ದು, ಸರಿಯಲ್ಲ. ರಸ್ತೆ ಅಗಲೀಕರಣದ ಹೆಸರಿನಲ್ಲಿ ಅಮಾನುಷವಾಗಿ ಮರಗಳನ್ನು ಕಡಿಯಲಾಗಿದೆ. ಇಲ್ಲಿ ರಸ್ತೆ ಅಗಲೀಕರಣವೇ ಅಗತ್ಯವಿರಲಿಲ್ಲ. ಅನಿವಾರ್ಯವಾಗಿದ್ದಲ್ಲಿ ಲಲಿತ ಮಹಲ್ ಹತ್ತಿರದ ಎಟಿಐ ಮುಂಭಾಗದಲ್ಲಿ ಅನುಸರಿಸಿರುವ ವಿಧಾನ ಸೂಕ್ತವಾಗಿತ್ತು ಎಂದರು.

ಈ ಕೃತ್ಯ ಖಂಡಿಸಿ ಏ.18ರಂದು ಪ್ರತಿಭಟನೆ ಹಮ್ಮಿಕೊಂಡು ಮರಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ. ಆದ್ದರಿಂದ ನಾಗರಿಕರು, ಪರಿಸರ ಪ್ರೇಮಿಗಳು, ವಿದ್ಯಾರ್ಥಿಗಳು ಮೊದಲಾದವರು ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಏ.24ರಂದು ಮರಗಳಿಗೆ ತಿಥಿ ಕಾರ್ಯ ಮಾಡಿ ನಂತರ ಮೈಸೂರಿನಲ್ಲಿ ಈ ರೀತಿ ಘಟನೆಗಳು ಎಂದೂ ನಡೆಯದಂತೆ ಮನವಿ ಪತ್ರವನ್ನು ಮುಖ್ಯಮಂತ್ರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ. ಹಾಗೇ ಅರಣ್ಯ ಇಲಾಖೆಯೂ ಮುಂದಿನ ದಿನಗಳಲ್ಲಿ ಮರ ಕಟಾವು ಮಾಡುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ನಿರ್ಣಯಗಳ ಬಗ್ಗೆ ವಿಶೇಷ ಸಮಿತಿ ಅನುಮತಿ ಪಡೆದುಕೊಳ್ಳಬೇಕು ಎಂದು ಆಗ್ರಹಿಸಲಾಗುತ್ತದೆ ಎಂದು ತಿಳಿಸಿದರು.

ಈಗಾಗಲೇ 40 ಮರಗಳ ಹನನ ಮಾಡಿರುವುದು ಸಾಲುವುದಿಲ್ಲ ಎಂದು ಉತ್ತನಹಳ್ಳಿ ದೇವಾಲಯದ ದ್ವಾರದ ಮುಂಭಾಗದ ರಸ್ತೆಯಲ್ಲಿ 25 ಮರಗಳನ್ನು ಕಡಿಯಲು ನಿರ್ಧರಿಸಿ, ಮರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದು ಮುಂದುವರೆದರೆ ಮೈಸೂರಲ್ಲಿ ತೀವ್ರ ರೂಪದಲ್ಲಿ ಪರಿಸರ ಪ್ರೇಮಿಗಳು ಹೋರಾಟ ಮಾಡುತ್ತಾರೆ ಎಂದು ಎಚ್ಚರಿಸಿದರು.

ಮೈಸೂರು ಮಹಾನಗರ ಪಾಲಿಕೆಯು ಮೈಸೂರು ನಗರದಲ್ಲಿ ಕಿರಿದಾದ ರಸ್ತೆಗಳನ್ನು ಅಗಲೀಕರಣ ಮಾಡಲಿ ಅದನ್ನು ಬಿಟ್ಟು ಅನಗತ್ಯವಾಗಿ 40 ವರ್ಷದಿಂದ ಸಮೃದ್ಧಿಯಿಂದ ಬೆಳೆದು ಆಮ್ಲಜನಕ, ವಿವಿಧ ಪಕ್ಷಿ, ಕೀಟಗಳಿಗೆ ಆಹಾರ, ವಾಸಸ್ಥಾನವಾಗಿದ್ದ ಮರಗಳನ್ನು ಕಡಿಯುತ್ತಿರುವುದು ಖಂಡನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಪತ್ರಕರ್ತ ಕಮಲ್ ಗೋಪಿನಾಥ್, ಗಟ್ಟಯ್ಯ, ಗೋಕುಲ್, ಕುಸುಮಾ ಆಯರಹಳ್ಳಿ ಉಪಸ್ಥಿತರಿದ್ದರು.

ಏ.19, ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್ಸ್ ಸಂಪುಟ ಪದಗ್ರಹಣ

ಮೈಸೂರು, ಏ.16(ಜಿಎ)-ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್‌ನ ಜಿಲ್ಲೆ 255 (ಎಸ್)ನ ಸಂಪುಟ ಪದಗ್ರಹಣ ಕಾರ್ಯಕ್ರಮ ಏ.19ರಂದು ಬೆಳಗ್ಗೆ 10 ಗಂಟೆಗೆ ಹೆಬ್ಬಾಳು ರಿಂಗ್ ರಸ್ತೆಯ ಹೋಟೆಲ್ ಕಲ್ಯಾಣಿಯಲ್ಲಿ ಸೇವಾ ಯೋಗ ಶೀರ್ಷಿಕೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ್ ವಿ. ಭೈರಿ ಈ ವಿಷಯ ತಿಳಿಸಿ, ಅಂದಿನ ಕಾರ್ಯಕ್ರಮವನ್ನು ಅಂತಾರಾಷ್ಟ್ರೀಯ ಅಧ್ಯಕ್ಷ ರಾಜ್‌ಕುಮಾರ್ ಸಕ್ಸೇನಾ ಉದ್ಘಾಟಿಸುವರು, ಡಾ.ಬಿ.ಜಿ. ಶಾಸ್ತ್ರಿ, ಜಿ.ಪಿ.ದಿವಾಕರ್ ಭಾಗವಹಿಸಲಿದ್ದಾರೆ. ಈ ವೇಳೆ ವಿವಿಧ ಸೇವಾ ಕಾರ್ಯ ನಡೆಯಲಿದ್ದು, ನಂತರ ಮಧ್ಯಾಹ್ನ 2 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಸ್.ವೆಂಕಟೇಶ್, ಬೆಟ್ಟೇಗೌಡ, ಕೃಷ್ಣೋಜಿರಾವ್, ಸಿ.ಬಿ.ಶ್ರೀಶೈಲ ಉಪಸ್ಥಿತರಿದ್ದರು.

ದೇಶ - ವಿದೇಶ

ಭಾರತೀಯ ವಿದ್ಯಾರ್ಥಿಯ ಗಡಿಪಾರು; ಟ್ರಂಪ್ ಸರ್ಕಾರದ ಆದೇಶಕ್ಕೆ ತಡೆ



ನ್ಯೂಯಾರ್ಕ್, ಏ.16- ವಿದ್ಯಾರ್ಥಿ ವೀಸಾ ರದ್ದುಗೊಂಡ 21 ವರ್ಷದ ಭಾರತೀಯ ಪದವಿ ವಿದ್ಯಾರ್ಥಿಯನ್ನು ಗಡಿಪಾರು ಮಾಡದಂತೆ ಡೊನಾಲ್ಡ್ ಟ್ರಂಪ್ ಸರ್ಕಾರಕ್ಕೆ ಅಮೆರಿಕದ ಫೆಡರಲ್ ನ್ಯಾಯಾಧೀಶರು ತಾತ್ಕಾಲಿಕ ತಡೆ ನೀಡಿದ್ದಾರೆ. ಕ್ರಿಶ್‌ಲಾಲ್ ಇಸೆರ್ದಾಸನಿ 2021ರಿಂದ ಎಫ್-1 ವಿದ್ಯಾರ್ಥಿ ವೀಸಾದೊಂದಿಗೆ ವಿಸ್ಕಾನ್ಸಿನ್-ಮ್ಯಾಡಿಸನ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪೂರ್ಣ ಸಮಯದ ದಾಖಲಾತಿ ಮತ್ತು ಉತ್ತಮ ಶೈಕ್ಷಣಿಕ ಸ್ಥಿತಿಯನ್ನು ಕಾಯ್ದುಕೊಂಡಿರುವ ಇಸ್ಸೆರ್ದಾಸನಿ ಈಗ ತಮ್ಮ ಕೊನೆಯ ಪದವಿ ವರ್ಷದ ಅಂತಿಮ ಸೆಮಿಸ್ಟರ್‌ನಲ್ಲಿದ್ದು, ಮೇ 10ರಂದು ನಿರೀಕ್ಷಿತ ಪದವಿ ಪಡೆಯುವವರೆಗೆ 30 ದಿನಗಳಿಗಿಂತ ಕಡಿಮೆ ಸಮಯ ಉಳಿದಿದೆ ಎಂಬ ಮಾಹಿತಿ ಲಭ್ಯವಾಗಿದೆ. ಏ.4ರಂದು ವಿಸ್ಕಾನ್ಸಿನ್-ಮ್ಯಾಡಿಸನ್ ವಿವಿ ಅಂತಾರಾಷ್ಟ್ರೀಯ ವಿದ್ಯಾರ್ಥಿ ಸೇವೆಗಳ ಕಚೇರಿಯು ಇಸ್ಸೆರ್ದಾಸನಿಗೆ ಅವರ ವಿದ್ಯಾರ್ಥಿ ಮತ್ತು ವಿನಿಮಯ ಸಂದರ್ಶಕ ವ್ಯವಸ್ಥೆ ದಾಖಲೆಯನ್ನು ಕೊನೆಗೊಳಿಸಲಾಗಿದೆ ಎಂದು ಇಮೇಲ್ ಮೂಲಕ ತಿಳಿಸಿತ್ತು.

ಅಕ್ರಮ ಸಂಬಂಧ ಪ್ರಶ್ನಿಸಿದ ಪತಿಯನ್ನೇ ಕೊಂದ ಪತ್ನಿ

ಚಂಡೀಗಢ, ಏ.16- ಮೀರತ್‌ನಲ್ಲಿ ನಡೆದ ಸೌರಭ್ ಕೊಲೆ ಪ್ರಕರಣವನ್ನೇ ನೆನಪಿಸುವ ಮತ್ತೊಂದು ಭೀಕರ ಹತ್ಯೆ ಹರ್ಯಾಣದಲ್ಲಿ ವರದಿಯಾಗಿದ್ದು, ಸಾಮಾಜಿಕ ಜಾಲತಾಣದ ಗೀಳು ಹಚ್ಚಿಸಿಕೊಂಡಿದ್ದ ಪತ್ನಿ ಯೂಟ್ಯೂಬರ್ ಜೊತೆ ಅಕ್ರಮ ಸಂಬಂಧ ಹೊಂದಿ ಅದನ್ನು ಪ್ರಶ್ನಿಸಿದ ಗಂಡನನ್ನೇ ಕೊಂದುಹಾಕಿದ್ದಾಳೆ. ಹರ್ಯಾಣದ ಭಿವಾನಿಯಲ್ಲಿ ಈ ಕೊಲೆ ಪ್ರಕರಣ ಬೆಳಕಿಗೆ ಬಂದಿದ್ದು, ಪತಿ ಪ್ರವೀಣ್‌ನನ್ನು ಕೊಲೆ ಮಾಡಿದ ಆರೋಪದ ಮೇರೆಗೆ ಆತನ ಪತ್ನಿ ರವೀನಾ ಮತ್ತು ಹರ್ಯಾಣದ ಯೂಟ್ಯೂಬರ್ ಸುರೇಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಪರಸ್ಪರ ರೀಲ್ಸ್ ಮಾಡುತ್ತಿದ್ದ ರವೀನಾ ಮತ್ತು ಸುರೇಶ್ ನಡುವೆ ಅಕ್ರಮ ಸಂಬಂಧ ಏರ್ಪಟ್ಟಿತ್ತು. ಪೊಲೀಸ್ ಮೂಲಗಳ ಪ್ರಕಾರ ಮಾ.25ರಂದು ಪತಿ ಪ್ರವೀಣ್ ಕೆಲಸಕ್ಕೆ ಹೋಗಿದ್ದಾಗ ಪತ್ನಿ ರವೀನಾ ಯೂಟ್ಯೂಬರ್ ಸುರೇಶ್‌ನನ್ನು ಮನೆಗೆ ಕರೆಸಿಕೊಂಡಿದ್ದಳು. ಇಬ್ಬರೂ ಮನೆಯಲ್ಲಿದ್ದಾಗ ಅಚಾನಕ್ಕಾಗಿ ಮನೆಗೆ ಬಂದ ಪ್ರವೀಣ್ ಇಬ್ಬರನ್ನೂ ಅಶ್ಲೀಲ ಸ್ಥಿತಿಯಲ್ಲಿ ನೋಡಿದ್ದಾನೆ. ಈ ವೇಳೆ ಸುರೇಶ್ ಮೇಲೆ ಹಲ್ಲೆ ಮಾಡಿದ ಪ್ರವೀಣ್, ರವೀನಾಗೂ ಥಳಿಸಿದ್ದಾನೆ. ಇದೇ ಹೊತ್ತಿನಲ್ಲಿ ರವೀನಾ, ಸುರೇಶ್ ಇಬ್ಬರೂ ಸೇರಿ ದುಪ್ಪಟಾದಿಂದ ಪ್ರವೀಣ್‌ನ ಕುತ್ತಿಗೆ ಹಿಸುಕಿ ಕೊಂದು ಹಾಕಿದ್ದಾರೆ.

ದುಬೈನಲ್ಲಿ ಇಬ್ಬರು ತೆಲಂಗಾಣ ನಿವಾಸಿಗಳ ಕೊಂದ ಪಾಕ್ ವ್ಯಕ್ತಿ!

ದುಬೈ: ಧಾರ್ಮಿಕ ದ್ವೇಷದ ಕಾರಣಕ್ಕೆ ತೆಲಂಗಾಣದ ಇಬ್ಬರನ್ನು ಪಾಕಿಸ್ತಾನದ ವ್ಯಕ್ತಿಯೊಬ್ಬ ಚೂರಿಯಲ್ಲಿ ಇರಿದು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಇತರ ಇಬ್ಬರು ಗಾಯಗೊಂಡಿದ್ದಾರೆ. ಈ ಹೃದಯವಿದ್ರಾವಕ ಘಟನೆ ದುಬೈನಲ್ಲಿ ನಡೆದಿದೆ. ಈ ಘಟನೆ ಕಳೆದ ಶುಕ್ರವಾರ ನಡೆದಿರುವಂತೆ ತೋರುತ್ತಿದ್ದು, ತಡವಾಗಿ ಬೆಳಕಿಗೆ ಬಂದಿದೆ. ನಿರ್ಮಲ್ ಜಿಲ್ಲೆಯ ಸೋನ್ ಮಂಡಲದ 40 ವರ್ಷದ ಪ್ರೇಮ್ ಸಾಗರ್ ಮತ್ತು ನಿಜಾಮಾಬಾದ್ ಜಿಲ್ಲೆಯ ಶ್ರೀನಿವಾಸ್, ದುಬೈನ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮೇಲೆ ಪಾಕಿಸ್ತಾನಿ ವ್ಯಕ್ತಿಯೊಬ್ಬ ಚಾಕುವಿನಿಂದ ದಾಳಿ ಮಾಡಿ ಕೊಂದಿದ್ದಾನೆ. ಧಾರ್ಮಿಕ ವಿವಾದದಿಂದಾಗಿ ಈ ಘಟನೆ ನಡೆದಿದೆ ಎಂದು ನಂಬಲಾಗಿದೆ. ಈ ವಿಷಯವನ್ನು ಅವರ ಕುಟುಂಬ ಸದಸ್ಯರಿಗೆ ದೂರವಾಣಿ ಮೂಲಕ ತಿಳಿಸಲಾಗಿದೆ. ಅಲ್ಲಿನ ಅಧಿಕಾರಿಗಳು ಪ್ರಸ್ತುತ ಘಟನೆಯ ಬಗ್ಗೆ ಸಂಪೂರ್ಣ ತನಿಖೆ ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.



ಭೂ ಅವ್ಯವಹಾರ; ಎರಡನೇ ದಿನವೂ ವಿಚಾರಣೆಗೆ ಹಾಜರಾದ ರಾಬರ್ಟ್ ವಾದ್ರಾ



ನವದೆಹಲಿ, ಏ.16-2008ರ ಹರಿಯಾಣ ಭೂ ವ್ಯವಹಾರಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಸತತ ಎರಡನೇ ದಿನವಾದ ಇಂದು ಬುಧವಾರ ಕೂಡ ಸಂಸದೆ ಪ್ರಿಯಾಂಕಾ ವಾದ್ರಾ ಪತಿ ರಾಬರ್ಟ್ ವಾದ್ರಾ ಜಾರಿ ನಿರ್ದೇಶನಾಲಯದ ಮುಂದೆ ಹಾಜರಾದರು.

ಕೇರಳದ ವಯನಾಡಿನ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಇದ್ದರು. ನಿನ್ನೆ ಅವರನ್ನು ಸುಮಾರು 5 ಗಂಟೆ ಕಾಲ ವಿಚಾರಣೆ ನಡೆಸಲಾಯಿತು. ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಫೆಡರಲ್ ತನಿಖಾ ಸಂಸ್ಥೆ ಅವರ ಹೇಳಿಕೆಯನ್ನು ದಾಖಲಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಫೆಬ್ರವರಿ 2008ರ ಭೂ ವ್ಯವಹಾರವನ್ನು ರಾಬರ್ಟ್ ವಾದ್ರಾ ಈ ಹಿಂದೆ ನಿರ್ದೇಶಕರಾಗಿದ್ದ ಸ್ಕೈಲೈಟ್ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯು ಶಿಕೋಪುರದಲ್ಲಿ 3.5 ಎಕರೆ ಭೂಮಿಯನ್ನು ಓಂಕಾರೇಶ್ವರ ಪ್ರಾಪರ್ಟೀಸ್ ಎಂಬ ಸಂಸ್ಥೆಯಿಂದ 7.5 ಕೋಟಿ ರೂ.ಗೆ ಖರೀದಿಸಿದ್ದರು. ಆ ಸಮಯದಲ್ಲಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು.

ಇಸ್ರೇಲ್ ವೈಮಾನಿಕ ದಾಳಿ; ಗಾಜಾದಲ್ಲಿ ವೈದ್ಯ ಸಾವು



ದೀರ್ ಅಲ್-ಬಲಾಹ್, ಏ.16- ಗಾಜಾಪಟ್ಟಿಯ ಫೀಲ್ಡ್ ಆಸ್ಪತ್ರೆಯ ಉತ್ತರ ದ್ವಾರದ ಮೇಲೆ ಇಸ್ರೇಲ್ ಮಂಗಳವಾರ ನಡೆಸಿದ ವಾಯು ದಾಳಿಯಲ್ಲಿ ವೈದ್ಯರು ಸಾವನ್ನಪ್ಪಿದ್ದು, ಒಂಬತ್ತು ಜನ ಗಾಯಗೊಂಡಿದ್ದಾರೆ.

ಮುವಾಸಿ ಪ್ರದೇಶದ ಕುವೈತ್ ಫೀಲ್ಡ್ ಆಸ್ಪತ್ರೆಯ ಮೇಲೆ ಈ ದಾಳಿ ನಡೆದಿದ್ದು, ಲಕ್ಷಾಂತರ ಜನರು ವಿಶಾಲವಾದ ಟೆಂಟ್‌ನಲ್ಲಿ ಆಶ್ರಯ ಪಡೆದಿದ್ದಾರೆ. ಗಾಯಾಳುಗಳೆಲ್ಲರೂ ರೋಗಿಗಳು ಮತ್ತು ವೈದ್ಯರಾಗಿದ್ದು, ಇಬ್ಬರು ರೋಗಿಗಳ ಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆ ವಕ್ತಾರ ಸಬರ್ ಮೊಹಮ್ಮದ್ ಹೇಳಿದ್ದಾರೆ. 18 ತಿಂಗಳ ಯುದ್ಧದ ಸಮಯದಲ್ಲಿ ಇಸ್ರೇಲ್ ಮಿಲಿಟರಿ ಹಲವಾರು ಬಾರಿ ಆಸ್ಪತ್ರೆಗಳ ಮೇಲೆ ದಾಳಿ ನಡೆಸಿದ್ದು, ಹಮಾಸ್ ಉಗ್ರಗಾಮಿಗಳು ಅವುಗಳಲ್ಲಿ ಅಡಗಿಕೊಂಡಿದ್ದಾರೆ ಅಥವಾ ಮಿಲಿಟರಿ ಉದ್ದೇಶಗಳಿಗಾಗಿ ಅವುಗಳನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿದೆ. ಇಸ್ರೇಲ್ ಆರೋಪವನ್ನು ಆಸ್ಪತ್ರೆ ಸಿಬ್ಬಂದಿ ತಳ್ಳಿಹಾಕಿದ್ದು, ಇಸ್ರೇಲ್ ಅಜಾಗರೂಕತೆಯಿಂದ ನಾಗರಿಕರನ್ನು ಅಪಾಯಕ್ಕೆ ತಳ್ಳಿದೆ ಮತ್ತು ಈ ಪ್ರದೇಶದ ಆರೋಗ್ಯ ವ್ಯವಸ್ಥೆಯನ್ನು ನಾಶ ಮಾಡಿದೆ ಎಂದು ಹೇಳಿದ್ದಾರೆ.

ಪಂಜಿನ ಮೆರವಣಿಗೆಯ ಮೂಲಕ ಎಡಮ್ಯಾರ್ 1 ಆಚರಣೆ



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪಂಜಿನ ಮೆರವಣಿಗೆ ನಡೆಸಿತು.

ಮಡಿಕೇರಿ,ಏ.16–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ 31ನೇ ವರ್ಷದ ಎಡಮ್ಯಾರ್ 1 ಅನ್ನು ಗೋಣಿಕೊಪ್ಪಲಿನಲ್ಲಿ ಪಂಜಿನ ಮೆರವಣಿಗೆಯ ಮೂಲಕ ಆಚರಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಆರ್‌ಎಂಸಿ ಯಾರ್ಡ್‌ನಿಂದ ಬಸ್ ನಿಲ್ದಾಣದವರೆಗೆ ಪಂಜಿನ ಮೆರವಣಿಗೆಯಲ್ಲಿ ಸಾಗಿದ ಸದಸ್ಯರು ಕೊಡವ ಲ್ಯಾಂಡ್ ಪರ ಘೋಷಣೆಗಳನ್ನು ಕೂಗಿದರು.

ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಿರ್ಮಿಸಿ ಮಾತನಾಡಿದ ಎನ್.ಯು.ನಾಚಪ್ಪ, ಪೊಂಬೊಳಕ್ ಮೆರವಣಿಗೆ ಆಚರಣೆ ಕೊಡವ ಜನಾಂಗೀಯ ಸಮುದಾಯದ ಶ್ರೀಮಂತ ಪರಂಪರೆ ಮತ್ತು ಕಾನೂನು ಬದ್ಧ ಸಂವಿಧಾನಿಕ ಹಕ್ಕುಗಳ ಕುರಿತು ಜಗತ್ತಿಗೆ ತಿಳಿಸುವ ಉದ್ದೇಶವಾಗಿದೆ ಎಂದರು. ಕೊಡವ ಜನಾಂಗೀಯ ಸಮುದಾಯ ಪಂಚಾಂಗದ ಪ್ರಕಾರ ಸೌರಮಾನ ಕ್ಯಾಲೆಂಡರ್ ಕೊಡವ ಬುಡಕಟ್ಟಿನ ಹೊಸ ವರ್ಷ ಅಂದರೆ ಎಡಮ್ಯಾರ್–1 ಗ್ರೆಗೋರಿಯನ್ ಕ್ಯಾಲೆಂಡರ್‌ಗೆ ಹೊಂದಿಕೆಯಾಗುತ್ತದೆ. ಎಡಮ್ಯಾರ್ 1 ಕೊಡವ ಜನಾಂಗದ ಸೌರಮಾನ ಹೊಸ ವರ್ಷವನ್ನು ಪ್ರಕೃತಿಯ ಚಕ್ರದಲ್ಲಿ ಮೊದಲ ಹಬ್ಬವೆಂದು ಪರಿಗಣಿಸಲಾಗಿದೆ. ಕೊಡವ ಮಂಗಳಕರ ಹೊಸ ವರ್ಷವನ್ನು ನಾವು ಧಾರ್ಮಿಕ ಉತ್ಸಾಹದಿಂದ ಆಚರಿಸುತ್ತಿದ್ದೇವೆ ಎಂದರು.

ಬೊಟ್ಟಂಗಡ ಸವಿತಾ, ಅರೆಯಡ ಸವಿತಾ, ಪಟ್ಟಮಾಡ ಲಲಿತಾ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ಪಟ್ಟಮಾಡ ಸೌಮ್ಯ ಪೃಥ್ವಿ, ಕೊಲ್ಲೀರ ಗಯಾ, ಬಾಚರಣಿಯಂಡ ಚಿಪ್ಪಣ್ಣ, ಕೊಲ್ಲೀರ ಗೋಪಿ ಚಿಣ್ಣಪ್ಪ, ಕಂಬೀರಂಡ ಬೋಪಣ್ಣ, ಕಿರಿಯಮಾಡ ಸವನ್ ಸೇರಿದಂತೆ ಹತ್ತಾರು ಮಂದಿ ಪಾಲ್ಗೊಂಡಿದ್ದರು.

ಇಂದು ವಿವಿದೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಮೂರ್ನಾಡು ವಿತರಣಾ ಕೇಂದ್ರದಿಂದ ಮಳೆಗಾಲ ಮುಂಜಾಗ್ರತಾ ನಿರ್ವಹಣೆ ಕಾಮಗಾರಿ ನಿಮಿತ್ತ ಏ.17 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬಲಮುರಿ, ಪಾರಾಣೆ, ಬಾವಲಿ, ಕೈಕಾಡು, ಕಿರುಂದಾಡು, ಎಡಪಾಲ, ಕಡಂಗ, ಚೆಂಯ್ಯಂಡಾಣೆ, ಚೇಲಾವಾರ, ಮರಂದೋಡ, ಕೋಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ತಿಳಿಸಿದ್ದಾರೆ.

ಸೋಲಾರ್ ತಂತಿ ತಗುಲಿ ಕಾಡಾನೆ ಸಾವು



ಕುಶಾಲನಗರ: ಆಹಾರ ಅರಸಿಕೊಂಡು ಕಾಫಿ ತೋಟಕ್ಕೆ ಬಂದ ಕಾಡಾನೆ ಸೋಲಾರ್ ತಂತಿ ತಗುಲಿ ಸ್ಥಳದಲ್ಲಿಯೆ ಮೃತಪಟ್ಟ ದುರ್ಘಟನೆ ಸಂಭವಿಸಿದೆ.

ಆನೆಕಾಡು ಮೀಸಲು ಅರಣ್ಯ ಪ್ರದೇಶದಿಂದ ಆಹಾರವನ್ನರಸಿಕೊಂಡು ಬಂದ 32 ವರ್ಷದ ಗಂಡಾನೆ ಸಮೀಪದ ಏಳನೇ ಹೊಸಕೋಟೆ ಬಳಿಯ ಕಂಬಿಬಾಣೆಯ ಮ್ಯಾಗ್ ಡೋರ್ ಎಸ್ಟೇಟ್‌ನಲ್ಲಿ ಅಳವಡಿಸಿದ್ದ ಸೋಲಾರ್ ವಿದ್ಯುತ್ ತಂತಿ ಸ್ಪರ್ಶದಿಂದ ಸಾವನ್ನಪ್ಪಿದೆ.

ಡಿಸಿಎಫ್ ಭಾಸ್ಕರ್ ಸೂಚನೆ ಮೇರೆಗೆ ಸ್ಥಳಕ್ಕೆ ಸೋಮವಾರಪೇಟೆ ವಿಭಾಗದ ಎಸಿಎಫ್ ಗೋಪಾಲ್ ಹಾಗೂ ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ತೋಟದ ಮಾಲೀಕ ಸೋಮನಾಥನ್ ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ

ಸುನ್ನಿ ಸಮನ್ವಯ ಸಮಿತಿ ಬೃಹತ್ ಪ್ರತಿಭಟನೆ



ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಜಿಲ್ಲಾ ಸುನ್ನಿ ಸಮನ್ವಯ ಸಮಿತಿ ಬೃಹತ್ ಪ್ರತಿಭಟನೆ ನಡೆಸಿತು.

ಮಡಿಕೇರಿ,ಏ.16: ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಕೊಡಗು ಜಿಲ್ಲಾ ಸುನ್ನಿ ಸಮನ್ವಯ ಸಮಿತಿ ಬೃಹತ್ ಪ್ರತಿಭಟನೆ ನಡೆಯಿತು.

ಜಿಲ್ಲಾ ಖಾಝಿ ಅಬ್ದುಲ್ಲಾ ಫೈಝಿ ಮತ್ತು ಜಿಲ್ಲಾ ಜಮಾಯತ್ ಉಲಮಾ ಅಧ್ಯಕ್ಷ ಸೈಯ್ಯದ್ ಶಿಹಾಬುದ್ದೀನ್ ಹೈದ್ರೋಸಿ ಮುಂದಾಳತ್ವದಲ್ಲಿ ಜಿಲ್ಲೆಯಾದ್ಯಂತದಿಂದ ಆಗಮಿಸಿದ್ದ ಸಹಸ್ರಾರು ಮಂದಿ ಸುದರ್ಶನ ವೃತ್ತದಿಂದ ಗಾಂಧಿ ಮೈದಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಧಾರ್ಮಿಕ ಭಾವನೆಗಳಿಗೆ ಧಕ್ಕೆ: ಮುಸ್ಲಿಂ ಬಾಂಧವರನ್ನು ಉದ್ದೇಶಿಸಿ ಅಬ್ದುಲ್ಲಾ ಫೈಝಿ ಮಾತನಾಡಿ, ಕೇಂದ್ರದ ವಕ್ಫ್ ತಿದ್ದುಪಡಿ ಕಾಯ್ದೆ ಜಾರಿಗೆ ಬಂದಲ್ಲಿ ಮುಸ್ಲಿಂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನು ಉಂಟು ಮಾಡುತ್ತದೆ. ದೇವರ ಹೆಸರಿನಲ್ಲಿ ವಕ್ಫ್‌ಗೆ ನೀಡಿದ ಆಸ್ತಿಯ ಸಂರಕ್ಷಣೆಗೆ ತೊಡಕನ್ನು ಉಂಟು ಮಾಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ ಮಾಸ್ಟರ್ ಮಾತನಾಡಿ, ಕೇಂದ್ರದ ವಕ್ಫ್ ತಿದ್ದುಪಡಿ ಕಾಯ್ದೆ ಜಾರಿಗೆ ಬಾರದಂತೆ ತಡೆಯುವ ನಿಟ್ಟಿನಲ್ಲಿ ಸರ್ವರು ಸಂಘಟಿತವಾದ ಹೋರಾಟಕ್ಕೆ ಇಳಿಯಬೇಕು. ಯಾವುದೇ ಕಾರಣಕ್ಕೂ ಕಾಯ್ದೆಗೆ ಜಾರಿಗೆ ಅವಕಾಶ ಒದಗಿಸ ಬಾರದು ಎಂದು ತಿಳಿಸಿದರು.

ಸಮಿತಿಯ ಮಾಧ್ಯಮ ಸಂಚಾಲಕ ಸಿ.ಎಂ.ಹಮೀದ್ ಮೌಲ್ವಿ, ಎಸ್‌ಡಿಪಿಐ ಜಿಲ್ಲಾ ಅಧ್ಯಕ್ಷ ಅಮೀನ್ ಮೊಹಿಸಿನ್ ಮಾತನಾಡಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮುಖ್ಯಮಂತ್ರಿಗಳು ಅಲ್ಪಸಂಖ್ಯಾತರ ಹಿತ ಕಾಪಾಡಲು ಕಾಯ್ದೆಯನ್ನು ಜಾರಿಗೆ ತರಲು ಅವಕಾಶ ನೀಡುವುದಿಲ್ಲ. ಕಾಯ್ದೆ ಜಾರಿಯ ಮೂಲಕ ವಕ್ಫ್ ಆಸ್ತಿಯನ್ನು ಕಸಿಯುವ ಕೇಂದ್ರದ ಕನಸು ಎಂದಿಗೂ ನನಸಾಗುವುದಿಲ್ಲ ಎಂದರು.

ಗಾಂಧಿ ಮೈದಾನದ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ಮೂಲಕ ಕೊಡಗು ಜಿಲ್ಲಾ ಸುನ್ನಿ ಸಮನ್ವಯ ಸಮಿತಿ ಪ್ರಮುಖರು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಲಮಾ ಅಧ್ಯಕ್ಷ ಕಿಲ್ಲೂರು ತಂಙಳ್, ಸುನ್ನಿ ಸಮನ್ವಯ ಸಮಿತಿಯ ಉಪಾಧ್ಯಕ್ಷ ಕೆ.ಎ.ಯಾಕುಬ್, ಪಿ.ಎಂ.ಲತೀಫ್, ಖಜಾಂಚಿ ಮಹಮ್ಮದ್ ಹಾಜಿ ಕುಂಜಿಲ ಹಾಗೂ ಕಾರ್ಯದರ್ಶಿ ಉಮ್ಮರ್ ಫೈಝಿ, ಜಿಲ್ಲಾ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ಎಂ.ಬಿ. ಹಮೀದ್, ಪಿ.ಎ. ಯೂಸುಫ್ ಹಾಜಿ ಎಮ್ಮೆಮಾಡು ಸೇರಿದಂತೆ ಹಲವು ಪ್ರಮುಖರು ಪಾಲ್ಗೊಂಡಿದ್ದರು.

ಮೀನು ಹಿಡಿಯಲು ಹೋಗಿ ಯುವಕ ಜಲಸಮಾಧಿ



ಮಡಿಕೇರಿ,ಏ.16–ಮೀನು ಹಿಡಿಯಲು ತೆರಳಿದ್ದ ಯುವಕನೋರ್ವ ಹಾರಂಗಿ ಹಿನ್ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ಸೋಮವಾರಪೇಟೆ ತಾಲೂಕಿನ ಗರಗಂದೂರಿನಲ್ಲಿ ನಡೆದಿದೆ.

ಸೋಮವಾರಪೇಟೆ ಬಳಿಯ ನಗರೂರು ಗ್ರಾಮದ ಯೋಗೇಶ್(25) ಮೃತ ದುರ್ದೈವಿ. ಹೊಸತೋಟ ಬಳಿಯ ಗರಗಂದೂರಿನಲ್ಲಿ ತೋಟದ ಕೆಲಸಕ್ಕೆ ಯೋಗೇಶ್ ಮತ್ತು ಆತನ ಸ್ನೇಹಿತ ಪ್ರದೀಪ್ ತೆರಳಿದ್ದರು. ಆದರೆ ಕೆಲಸಕ್ಕೆ ರಜೆ ಇದ್ದ ಹಿನ್ನೆಲೆಯಲ್ಲಿ ಗರಗಂದೂರಿನ ಹಾರಂಗಿ ಹಿನ್ನೀರಿನಲ್ಲಿ ಮೀನು ಹಿಡಿಯಲು ಯೋಗೇಶ್ ನೀರಿಗೆ ಇಳಿದಿದ್ದು, ಮುಳುಗಿ ಮೃತಪಟ್ಟಿದ್ದಾನೆ. ಮಾಹಿತಿ ಅರಿತು ಸ್ಥಳಕ್ಕಾಗಮಿಸಿದ ಸೋಮವಾರಪೇಟೆ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಸ್ಥಳೀಯ ಈಜುಗಾರರ ನೆರವಿನಿಂದ ಮೃತದೇಹವನ್ನು ಹೊರ ತೆಗೆದಿದ್ದಾರೆ. ಈ ಘಟನೆ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸೋತಾಗ ಎದೆಗುಂದದೇ ಗೆಲ್ಲುವ ಛಲ ಮೈಗೂಡಿಸಿಕೊಳ್ಳಬೇಕು: ಸಿ.ಡಿ.ಮಾದಪ್ಪ



ಕಾವೇರಿ ಕಾಲೇಜು ಕ್ರೀಡಾ ದಿನಾಚರಣೆಯಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗೋಣಿಕೊಪ್ಪ: ಕಾವೇರಿ ಕಾಲೇಜಿನಲ್ಲಿ ವಾರ್ಷಿಕ ಕ್ರೀಡಾ ದಿನಾಚರಣೆಯನ್ನು, ದಾನಿ ಭಾಗ್ಯಲಕ್ಷ್ಮೀ ಯೋಗೇಶ್ ದೀಪಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭಕೋರಿದರು.

ಕಾವೇರಿ ಎಜುಕೇಷನ್ ಸೊಸೈಟಿ ಖಜಾಂಚಿ ಸಿ.ಡಿ. ಮಾದಪ್ಪ ಮಾತನಾಡಿ ಕ್ರೀಡೆ ವಿದ್ಯಾರ್ಥಿಗಳನ್ನು ದೈಹಿಕವಾಗಿ ಸದೃಢರನ್ನಾಗಿ ಮಾಡುವುದರ ಜತೆಗೆ, ಆತ್ಮವಿಶ್ವಾಸ, ಶಿಸ್ತು ಸಮಯ ಪಾಲನೆಯನ್ನು ಕಲಿಸಿಕೊಡುತ್ತದೆ. ಒಬ್ಬ ಕ್ರೀಡಾಪಟು ಗೆದ್ದಾಗ ಸಂಭ್ರಮಿಸುವುದು ಮಾತ್ರವಲ್ಲ, ಸೋತಾಗ ಎದೆಗುಂದದೇ ಮತ್ತಷ್ಟು ಅಭ್ಯಾಸದಲ್ಲಿ ತೊಡಗಿಕೊಂಡು ಗೆಲ್ಲುವ ಛಲವನ್ನು ಬೆಳೆಸಿಕೊಳ್ಳಬೇಕು ಎಂದರು.

ನಿರ್ದೇಶಕ ಕೆ.ಪಿ.ಅಚ್ಚಯ್ಯ ಮಾತನಾಡಿ, ಬಿಡುವಿನ ಸಮಯದಲ್ಲಿ ಕ್ರೀಡೆಯಲ್ಲಿ ತೊಡಗಿಕೊಂಡು, ದುಶ್ಚಟಗಳಿಂದ ದೂರ ಇರಬೇಕು. ಹೆತ್ತವರಿಗೆ, ಗುರು ಹಿರಿಯರಿಗೆ ಗೌರವ ನೀಡಬೇಕು. ತಾವು ವಿದ್ಯಾಭ್ಯಾಸ ಮುಗಿಸಿ ಉದ್ಯೋಗಕ್ಕೆ ಸೇರಿಕೊಂಡ ನಂತರ ಶಿಕ್ಷಣ ಕಲಿತ ವಿದ್ಯಾಸಂಸ್ಥೆಯ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು. ಈ ಸಂದರ್ಭ ಕ್ರೀಡೆಯಲ್ಲಿ ವಿಶ್ವವಿದ್ಯಾನಿಲಯ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಬಹುಮಾನ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಪ್ರಾಂಶುಪಾಲ ಡಾ. ಎಂ. ಬಿ. ಕಾವೇರಿಯಪ್ಪ, ಐಕ್ಯೂಎಸಿ ಸಂಚಾಲಕಿ ಡಾ. ನಯನಾ ತಮ್ಮಯ್ಯ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಂಘದ



ನಾಪೋಕ್ಲು: ಇಲ್ಲಿಗೆ ಸಮೀಪದ ಕೈಕಾಡು ಗ್ರಾಮದ ಮಕ್ಕೋಟು ಮಹಾಲಕ್ಷ್ಮಿ ದೇವರ ವಾರ್ಷಿಕ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಮಾ.29ರಿಂದ ಮಿನ್ನಾರ್ 2ನೇ ಮಂಗಳವಾರದ ನಂತರದ ದಿನ

ಮಕ್ಕೋಟು ಮಹಾಲಕ್ಷ್ಮಿ ದೇವರ ವಾರ್ಷಿಕ ಉತ್ಸವ

ಪ್ರಾರಂಭಗೊಂಡು ಏ.15ರವರೆಗೆ ಎರಡು ವರ್ಷಕೊಮ್ಮೆ ನಡೆಯುವ ಹಬ್ಬದಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. 15 ದಿನಗಳು ರಾತ್ರಿ ಹದಿನೆಂಟು ತರಹದ ದೇವರ ಕುಣಿತವನ್ನು ಕೈಕಾಡು ಗ್ರಾಮದ, ಮಕ್ಕೋಟು ಕೇರಿಯ 18 ವರ್ಷ ಮೇಲ್ಪಟ್ಟ ಸದಸ್ಯರು ಕುಣಿದರು. ಬೆಳಿಗ್ಗೆ ದೇವತಕ್ಕರಾದ ಚೊಟ್ಟೆಯಂಡ, ಭಂಡಾರ ತಕ್ಕರ ನೆರೆಯಂಡಮ್ಮಂಡ ಕುಟುಂಬದಿಂದ ಹಾಗೂ ಪಾಡೆಯಂಡ, ಬಟ್ಟೆಯಂಡ, ಕದ್ದಣಿಯಂಡ, ನಾಯಕಂಡ 6 ಕುಟುಂಬದವರು ಎತ್ತುಪೊರಾಟದೊಂದಿಗೆ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಪ್ರವೇಶಿಸಿ ಸಾಂಪ್ರದಾಯಕವಾಗಿ ವಿವಿಧ ಬಗೆಯ ಕುಣಿತಗಳನ್ನು ಕುಣಿಯುತ್ತಾ ಸಂಪನ್ನಗೊಂಡಿತು.

ನಿಯಂತ್ರಣ ತಪ್ಪಿ ಬೈಕ್ ಸವಾರ ಸಾವು

ಚಾಮರಾಜನಗರ: ತಾಲೂಕಿನ ಆಲೂರು–ಕನ್ನೇಗಾಲ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮಂಗಳವಾರ ತಡರಾತ್ರಿ ನಡೆದ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಮೃತಪಟ್ಟಿದ್ದಾನೆ. ಕಾಗಲವಾಡಿ ಗ್ರಾಮದ ಎಂ. ರಾಜಬುದ್ಧಿ(41) ಮೃತಪಟ್ಟ ದುರ್ದೈವಿ. ದ್ವಿಚಕ್ರ ವಾಹನದಲ್ಲಿ ನರಸೀಪುರದಿಂದ ಕಾಗಲವಾಡಿ ಗ್ರಾಮಕ್ಕೆ ಸಂತೇಮರಹಳ್ಳಿ ಆಲೂರು ಮಾರ್ಗವಾಗಿ ಬರುತ್ತಿದ್ದಾಗ ನಿಯಂತ್ರಣ ತಪ್ಪಿ ಬಿದ್ದು ಮೃತಪಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಪೂರ್ವ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆದ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯ ಹಿಂಬಾಗಿಲ ಚಿಲಕ ಮೀಟಿ ಚಿನ್ನ, ಬೆಳ್ಳಿ ನಗದು ಕಳವು

ಚಾಮರಾಜನಗರ, ಏ.16 –ಮನೆಯ ಹಿಂಬಾಗಿಲ ಚಿಲಕ ಮೀಟಿ ಒಳನುಗ್ಗಿರುವ ಕಳ್ಳರು ನಗದು ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ.

ನಗರದ ಪಿಡಬ್ಲ್ಯುಡಿ ಕಾಲೋನಿಯ ಅಂಬೇಡ್ಕರ್ ಪಾರ್ಕ್ ಬಳಿ ಮನೆಯೊಂದರಲ್ಲಿ ಕಳ್ಳತನ ನಡೆಸಿ ಚಿನ್ನ, ಬೆಳ್ಳಿ, ನಗದನ್ನು ಕೊಂಡೊಯ್ದಿದ್ದಾರೆ.

ಮಂಜುಳಾ ಎಂಬಾಕೆ 2 ವರ್ಷಗಳಿಂದ ಬಾಡಿಗೆಗೆ ಇದ್ದು ಭಾನುವಾರ ತಮ್ಮ ತಾಯಿ ಮನೆಗೆ ಹೋಗಿದ್ದಾರೆ. ಮಂಗಳವಾರ ಬೆಳಗ್ಗೆ ಬಂದು ಬಾಗಿಲು ತೆಗೆಯಲಸಾಧ್ಯವಾದಾಗ ಅನುಮಾನಗೊಂಡು ಹಿಂದಿನ ಬಾಗಿಲ ಬಳಿ ಹೋಗಿ ನೋಡಿದಾಗ ಬಾಗಿಲು ತೆರೆದಿತ್ತೆನ್ನಲಾಗಿದೆ. ಒಳಹೋಗಿ ನೋಡಿದಾಗ 120 ಚಿನ್ನ, 210 ಗ್ರಾಂ ಬೆಳ್ಳಿ ಹಾಗೂ 10 ಸಾವಿರ ನಗದು ಕಳುವಾಗಿದೆ ಎಂದು ಮಂಜುಳಾ ಪೋಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸ್ಥಳಕ್ಕೆ ಎಎಸ್ಪಿ ಶಶಿಧರ್, ಇನ್ಸ್‌ಪೆಕ್ಟರ್ ರಾಜೇಶ್ ಹಾಗೂ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಬೆರಳಚ್ಚು ತಜ್ಞರು ಹಾಗೂ ಶ್ವಾನ ದಳ ಕೂಡ ತೆರಳಿ ಪರಿಶೀಲಿಸಿದೆ. ಯಾವುದೇ ಗುರುತು ಸಿಗದಂತೆ ಮಾಡಲು ಕಳ್ಳರು ಮನೆಯ ಬಳಿ ಕಾರದ ಪುಡಿ ಎರಚಿ ಹೋಗಿದ್ದಾರೆ.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಛಾವಣಿ ಶೀಟ್ ಬಿದ್ದು ಮೂವರಿಗೆ ಗಾಯ

ಚಾಮರಾಜನಗರ: ಸಂಜೆ ಬಂದ ಬಿರುಗಾಳಿ ಸಹಿತದ ಮಳೆಗೆ ನೆರೆ ಮನೆಯ ಛಾವಣಿ ಶೀಟ್ ಮತ್ತೊಂದು ಮನೆ ಮೇಲೆ ಬಿದ್ದು ಮೂವರು ಗಾಯಗೊಂಡ ಘಟನೆ ನಡೆದಿದೆ.

ಗ್ರಾಮದ ಭಾಗ್ಯ, ದೀಪಿಕಾ ಹಾಗೂ ಸಂಜನಾ ಗಾಯಗೊಂಡವರು. ಗಾಳಿ ಆರ್ಭಟದಿಂದ ಭಾಗ್ಯ ಮಹದೇವಸ್ವಾಮಿ ಎಂಬುವರ ಮನೆಗೆ ಪಕ್ಕದ ಮನೆಯ ಶೀಟ್ ಬಿದ್ದ ಪರಿಣಾಮ ಮನೆಯ ಹಂಚು ಒಡೆದು ಮನೆಯಲ್ಲಿದ್ದ ಮೂವರು ಗಾಯಗೊಂಡಿದ್ದಾರೆ. ಅಲ್ಲದೇ, ಮನೆಯಲ್ಲಿದ್ದ ಟಿವಿ, ಬೀರು, ಟೇಬಲ್, ಚೇರ್ ಸೇರಿದಂತೆ ಇನ್ನಿತರ ಪರಿಕರಗಳು ನಾಶವಾಗಿದೆ. ಘಟನೆ ನಡೆದ ತಕ್ಷಣವೇ ನೆರೆಹೊರೆಯ ಜನರ ಧಾವಿಸಿ ಮೂವರನ್ನು ರಕ್ಷಣೆ ಮಾಡಿದ್ದು, ಹೆಚ್ಚಿನ ಅಪಾಯವನ್ನು ತಪ್ಪಿಸಿದ್ದಾರೆ. ಬಳಿಕ ಮನೆಯ ಮೇಲೆ ಬಿದ್ದಿದ್ದ ಛಾವಣಿ ಶೀಟ್ ಅನ್ನು ಕೂಡಾ ತೆರವು ಮಾಡಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಅಧ್ಯಕ್ಷರಾಗಿ ನೀಲಕಂಠಪ್ಪ, ಉಪಾಧ್ಯಕ್ಷರಾಗಿ ಕರಿಯಯ್ಯ ಅವಿರೋಧವಾಗಿ ಆಯ್ಕೆಯಾದರು.

ಬೇಗೂರು: ಸಮೀಪದ ಹೊರೆಯಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಂಗ್ರೆಸ್ ಹಿರಿಯ ಮುಖಂಡ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಹೊರೆಯಾಲ ನೀಲಕಂಠಪ್ಪ ಹಾಗೂ ಉಪಾಧ್ಯಕ್ಷರಾಗಿ ಕರಿಯಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನೂತನ ನಿರ್ದೇಶಕರಾದ ಮಹದೇವನಾಯಕ, ಬಿ.ಆರ್.ಸುಧಾ, ಕೆಂಪಯ್ಯ, ರಾಜುಗೌಡ, ಬಿ ಆರ್ ಮಹದೇವಪ್ಪ, ವಿರೂಪಾಕ್ಷ, ನಾಗರತ್ನಮ್ಮ, ಗೌರಿಶಂಕರ್ ಸ್ವಾಮಿ, ಗುರುಸ್ವಾಮಿ, ಚಿನ್ನಸ್ವಾಮಿ, ಗ್ರಾಮದ ಗೌಡಕೆ ಗುರುಸ್ವಾಮಪ್ಪ, ಬೆಳ್ಳಪ್ಪ, ವೃಷಭೇಂದ್ರಪ್ಪ, ಗಂಗಣ್ಣ, ಇಂದ್ರನಾಯ್ಕ, ತಿಬ್ಬನಾಯಕ, ಚುನಾವಣಾಧಿಕಾರಿ ನಾಗೇಶ್, ಸಿಇಒ ನಾಗೇಶ ಹಾಗೂ ಗ್ರಾಮದ ಹಲವು ಮುಖಂಡರುಗಳು ಹಾಜರಿದ್ದರು.

ಪ್ಲಾಸ್ಟಿಕ್ ಬಳಕೆ ನಿಲ್ಲಿಸಲು ಅರಣ್ಯ ಇಲಾಖೆ ಖಡಕ್ ಎಚ್ಚರಿಕೆ

ಬೆಟ್ಟದ ತಪ್ಪಲಿನಲ್ಲಿ ಪ್ಲಾಸ್ಟಿಕ್ ತೆರವು ಕಾರ್ಯಾಚರಣೆ



ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿನ ಹೋಟೆಲ್ ಅಂಗಡಿಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ತೆರವು ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

ಗುಂಡ್ಲುಪೇಟೆ,ಏ16– ತಾಲೂಕಿನ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಹೋಟೆಲ್ ಮತ್ತು ಅಂಗಡಿಗಳವರು ವಾರದೊಳಗೆ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು ಎಂದು ಅರಣ್ಯ ಇಲಾಖೆ ಖಡಕ್ ಎಚ್ಚರಿಕೆ ನೀಡಿದೆ.

10 ವರ್ಷಗಳ ಹಿಂದೆಯೇ ಗೋಪಾಲಸ್ವಾಮಿ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವೆಂದು ಘೋಷಿಸಿದ್ದರೂ ಹೋಟೆಲ್ ಮತ್ತು ಅಂಗಡಿಗಳಲ್ಲಿ ನೀರು ಹಾಗೂ ಜ್ಯೂಸ್ ಬಾಟಲುಗಳನ್ನು ಮಾರಾಟ ಮಾಡುತ್ತಿದ್ದರು. ಅರಣ್ಯ ಇಲಾಖೆ ನಾಲ್ಕಾರು ಬಾರಿ ಎಚ್ಚರಿಕೆ ನೀಡಿದ್ದರೂ ಕಿವಿಗೊಡದ ಪರಿಣಾಮ ಇಂದು ಪ್ಲಾಸ್ಟಿಕ್ ತೆರವು ಕಾರ್ಯಾಚರಣೆ ನಡೆಸಿತು

ಪರಿಸರ ಸೂಕ್ಷ್ಮ ಪ್ರದೇಶದಲ್ಲಿರುವ ಬೆಟ್ಟದಲ್ಲಿ ಅರಣ್ಯ ಇಲಾಖೆ ತನಗಿಷ್ಟ ಬಂದತೆ ನಡೆದುಕೊಳ್ಳುತ್ತಿದೆ. ಸಂಜೆ 4 ಗಂಟೆ ನಂತರ ಬೆಟ್ಟಕ್ಕೆ ಬಿಡಲು ನಿರ್ಬಂಧಿಸುವ ಅಧಿಕಾರಿಗಳು ಹಣದಾಸೆಗೆ ತಮಗೆ ಬೇಕಾದವರನ್ನು ಮಾತ್ರ ಬಿಟ್ಟು ಕಳಿಸುತ್ತಾರೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಯಂತ್ರಗಳ ಬಳಕೆ ನಿರ್ಬಂಧಿಸಿದ್ದರೂ ಅರಣ್ಯದೊಳಗೆ ಜೆಸಿಬಿ ಬಳಸಿ ಕಾಮಗಾರಿ ನಡೆಸುತ್ತಿದ್ದಾರೆ. ಅಲ್ಲದೆ ಶಾಶ್ವತ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲದಿದ್ದರೂ ಸದ್ಯ ಪರಿಸರ ಅಭಿವೃದ್ಧಿ ಸಮಿತಿಯ ಹೆಸರಿನಲ್ಲಿ ಬೆಟ್ಟದ ತಪ್ಪಲಿನಲ್ಲಿ ಮಾರಾಟ ಮಳಿಗೆ ನಿರ್ಮಿಸಿ ದುಬೈನಲ್ಲಿರುವ ವ್ಯಕ್ತಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಮುಜರಾಯಿ ಇಲಾಖೆಯ ಗಮನಕ್ಕೂ ತರದೆ ಮಲೆಯಾಳಂ ಚಲನ ಚಿತ್ರದ ಶೂಟಿಂಗ್‌ಗೆ ಅವಕಾಶ ನೀಡಿದ್ದಾರೆ. ಸದ್ಯ ಬೆಟ್ಟದ ತಪ್ಪಲಿನಲ್ಲಿ ದೊಡ್ಡ ಹೋಟೆಲ್ ನಿರ್ಮಿಸುವ ಸಲುವಾಗಿ ಸಣ್ಣಪುಟ್ಟ ಹೋಟೆಲ್ ಇಟ್ಟುಕೊಂಡು ಜೀವನೋಪಾಯ ನಡೆಸುತ್ತಿರುವ ಬಡವರನ್ನು ಒಕ್ಕಲೆಬ್ಬಿಸಲು ಮುಂದಾಗಿದ್ದಾರೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಇದರಿಂದ ಅರಣ್ಯ ಇಲಾಖೆ ಕಾರ್ಯಾಚರಣೆ ಸ್ಥಗಿತಗೊಳಿಸಿದೆ. ಮುಂದಿನ ವಾರದೊಳಗೆ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು. ತಪ್ಪಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸಿಎಫ್ ಎನ್.ಪಿ. ನವೀನ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಸಿದ್ದಗಂಗಾ ಶ್ರೀಗಳ ಜಯಂತಿ



ಗುಂಡ್ಲುಪೇಟೆ ಪಟ್ಟಣದ ಮಡಹಳ್ಳಿ ವೃತ್ತದಲ್ಲಿ ಬುಧವಾರ ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಿದ್ದಗಂಗಾ ಶ್ರೀಗಳ ಜಯಂತಿಯನ್ನು ಆಚರಿಸಿತು. ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಸಿಬ್ಬಂದಿಗಳಾದ ನಟೇಶ್, ಜಯಕುಮಾರ್, ಮಹೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಅಲೀಂ ಪಾಶಾ, ಪುರಸಭೆ ಸದಸ್ಯ ಶಶಿಧರ್‌ದೀಪು ಮೊದಲಾದವರು ಭಾಗವಹಿಸಿದ್ದರು.

ಏ.19 ಶ್ರೀ ಭಗೀರಥ ಜಯಂತಿ ಪೂರ್ವಭಾವಿ ಸಭೆ

ಚಾಮರಾಜನಗರ,ಏ.16– ಶ್ರೀ ಭಗೀರಥ ಜಯಂತಿ ಆಚರಿಸುವ ಸಂಬಂಧ ಪೂರ್ವಭಾವಿ ಸಭೆಯನ್ನು ಏ.19ರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದೆ.

ಈ ಸಭೆಗೆ ಜಿಲ್ಲೆಯ ಭಗೀರಥ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಸಮುದಾಯದ ಮುಖಂಡರು ಹಾಜರಾಗಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಓದಿಗೆ ಹೆಚ್ಚು ಆದ್ಯತೆ ನೀಡಲು ವಿದ್ಯಾರ್ಥಿಗಳಿಗೆ ಡಿಸಿಪಿ ಕರೆ



ಭೀಮನಗರದ ಅಂಬೇಡ್ಕರ್ ಜಯಂತಿ ಆಚರಣಾ ಸಮಿತಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಡಿಸಿಪಿ ಸುಂದರರಾಜು ಅಭಿನಂದಿಸಿದರು

ಕೊಳ್ಳೇಗಾಲ, ಏ.16– ಡಾ. ಬಿ.ಆರ್ ಅಂಬೇಡ್ಕರ್ ಅವರು ಹೆಚ್ಚು ಓದಿಗೆ ಆದ್ಯತೆ ನೀಡಿದ್ದರಿಂದಲೆ ಇಂದು ಮಹಾನ್ ನಾಯಕರಾಗಿ ಹೊರಹೊಮ್ಮಿದ್ದಾರೆ, ಅಂದು ಶಿಕ್ಷಣ ಪಡೆಯಲು ಸಾಕಷ್ಟು ಸಂಕಷ್ಟ ಪಡೆಯಬೇಕಿತ್ತು, ಇಂದು ಶಿಕ್ಷಣ ಪಡೆದುಕೊಳ್ಳಲು ಅನೇಕ ಸೌಲಭ್ಯಗಳಿದ್ದು ಎಲ್ಲವನ್ನು ಬಳಸಿಕೊಂಡು ವಿದ್ಯಾರ್ಥಿಗಳು ಓದಿಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಉತ್ತಮ ಸಾಧನೆ ಮಾಡಬೇಕು ಎಂದು ಮೈಸೂರಿನ ಉಪ ಪೊಲೀಸ್ ಆಯುಕ್ತ ಸುಂದರರಾಜು ಹೇಳಿದರು

ಇಲ್ಲಿನ ಭೀಮನಗರ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದ ಸ್ಥಳದಲ್ಲಿ ಸೋಮವಾರ ರಾತ್ರಿ ಆಯೋಜಿಸಿದ್ದ ಗೀತಗಾಯನ, ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದ ಮಹತ್ವವನ್ನು ಅಂಬೇಡ್ಕರ್ ನಮ್ಮೆಲ್ಲರಿಗೂ ತಿಳಿಸಿಕೊಟ್ಟಿದ್ದಾರೆ, ಇದನ್ನರಿತು, ನಾವು ಶಿಕ್ಷಣ ಪಡೆಯುವಲ್ಲಿ ಹಿಂದುಳಿದರೆ ಬದುಕಿನಲ್ಲೂ ಹಿಂದುಳಿದಂತಾಗುತ್ತದೆ ಎಂದರು.

ಡಿವೈಎಸ್ಪಿ ಮಹಾನಂದ ಮಾತನಾಡಿ ಅಂಬೇಡ್ಕರ್ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳೋಣ ಎಂದರು.

ರಕ್ತದಾನ ಶಿಬಿರದಲ್ಲಿ 103 ಯೂನಿಟ್ ರಕ್ತ ಸಂಗ್ರಹವಾಗಿರುವುದು ಹೆಮ್ಮೆಯ ವಿಚಾರ. ಕಾರ್ಯಕ್ರಮ ಸಂಘಟಿಸಿದ್ದಕ್ಕೆ ಶ್ಲಾಘಿಸಿದರು. ಹತ್ತನೆ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ 56ಕ್ಕೂ ಅಧಿಕ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ವೃತ್ತ ನಿರೀಕ್ಷಕ ಶಿವಮಾದಯ್ಯ ಅಂಬೇಡ್ಕರ್ ಕುರಿತು ಗೀತೆ ಹಾಡಿ ರಂಜಿಸಿದರು. ಸುಂದರ ಮೂರ್ತಿ, ಎಂ.ನಟರಾಜಮಾಳಿಗೆ, ನಿಂಪು ರಾಜೇಶ್, ರಾಜಶೇಖರಮೂರ್ತಿ, ರಮೇಶ್, ಸಿದ್ದಾರ್ಥ, ಲಿಂಗರಾಜು, ಸಿದ್ದಪ್ಪಾಜಿ, ನಟರಾಜು, ಚಂದು ಇನ್ನಿತರಿದ್ದರು.

ಡೀಸೆಲ್ ದರ ಏರಿಕೆ: ಲೋಕಲ್ ಲಾರಿ ಮಾಲೀಕರ ಸಂಘದ ಪ್ರತಿಭಟನೆ



ಡಿಸೇಲ್ ಮೇಲೆ ತೆರಿಗೆ ಹೆಚ್ಚಳ ಮಾಡಿರುವುದನ್ನು ವಿರೋಧಿಸಿ ಲೋಕಲ್ ಲಾರಿ ಮಾಲೀಕ ಸಂಘ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಜು, 16–ರಾಜ್ಯ ಸರ್ಕಾರ ಡೀಸೆಲ್ ಮೇಲೆ ತೆರಿಗೆ ಹೆಚ್ಚಳ ವಿವಿಧ ತೆರಿಗೆಗಳ ಹೆಚ್ಚಳವನ್ನು ಖಂಡಿಸಿ ರಾಜ್ಯ ಲಾರಿ ಮಾಲೀಕರ ಸಂಘ ಕರೆ ನೀಡಿರುವ ಲಾರಿಗಳ ಬಂದ್‌ಗೆ ಚಾ.ನಗರದ ಲೋಕಲ್ ಲಾರಿ ಮಾಲೀಕ ಸಂಘ ಬೆಂಬಲ ನೀಡಿ ಪ್ರತಿಭಟನೆ ನಡೆಸಿತು.

ನಗರದ ಹೊರ ವಲಯದಲ್ಲಿರುವ ಬೈಪಾಸ್ ರಸ್ತೆಬದಿಯಲ್ಲಿ ಸರಕು ಸಾಗಾಣಿಕೆ ಲಾರಿಗಳನ್ನು ನಿಲ್ಲಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಧೋರಣೆಯ ವಿರುದ್ಧ ಲಾರಿ ಮಾಲೀಕರು ಘೋಷಣೆ ಕೂಗಿದರು. ಲೋಕಲ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿಯಾವುಲ್ಲಾ, ಮಾತನಾಡಿ, ದಿನೇ ದಿನೇ ಸರಕು ಸಾಗಾಣಿಕೆಗಳ ದರ ಏರಿಕೆಯಾಗುತ್ತಿದೆ. ಖಾಸಗಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದುಕೊಂಡು ಪ್ರತಿ ತಿಂಗಳು ಇಎಂಐ ಕಟ್ಟಲು ಪರದಾಡುವಂತಾಗಿದೆ. ಖರ್ಚು ಜಾಸ್ತಿಯಾಗುತ್ತಿದೆ. ಆದಾಯ ಮಾತ್ರ ಕಡಿಮೆ. ಹೀಗಾಗಿ ಲಾರಿಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಗುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಇರ್ಷಾದ್ ಪಾಷಾ, ಪದಾಧಿಕಾರಿಗಳಾದ ಜುಬೇರ್‌ವುಲ್ಲಾ, ತಾಬರೇಸ್, ಗಾಳಿಪುರ ಮಹೇಶ್, ಎಂಎಸ್‌ಕೆ ಮಂಜು, ನಯಿಮಾವುಲ್ಲಾ, ಇಲಿಯಾಜ್ ಅಹಮದ್, ಉಬೇದ್‌ಖಾನ್ ಹಾಗೂ ಲಾರಿ ಚಾಲಕರು ಮತ್ತು ಮಾಲೀಕರು ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
New 40x63, 3 BHK two car park, all teak granite, furnished Harividyalaya-Christ School Road, Bogadi.
Mob: 9482883566

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7th, 10th PUC Diploma any degree pass or fail. ಸಂಬಳ 15000 ರಿಂದ 30000 ರ ವರೆಗೆ.
ವಿ. ಸೂ : ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ, Age below 35 years. Android Mobile ಹಾಗೂ Two wheeler ಇರಬೇಕು.
Contact - 9880151303

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ, ಹೂಟಗಳ್ಳಿ, ಒಂಟಿಕೊಪ್ಪಲ್ ಮತ್ತು ದೇವೇಗೌಡ ವೃತ್ತಗಳಲ್ಲಿ ಸೆಕ್ಯೂರಿಟಿ ಕೆಲಸ ನಿರ್ವಹಿಸಲು 45 ವರ್ಷದೊಳಗಿನ ಗಂಡಸರು ಬೇಕಾಗಿದ್ದಾರೆ. ಸಂಪರ್ಕಿಸಿ:
9900481819 / 9972945905

ಮುಡಾ ನೋಂದಾಯಿತ ಸೈಟು ಮಾರಾಟಕ್ಕಿದೆ
30x43 E/F
ಹಿಂಭಾಗದಲ್ಲಿ ಪಾರ್ಕ್. BVL ರೆಡ್ಡಿ ಲೇಔಟ್, 4ನೇ ಹಂತ.
Mob: 7353498918

WANTED
TEACHING STAFF for reputed institution (Experience Preferred) for English, Science and Maths. Transport facilities available. Drop your resume through WhatsApp. *Contact:*
8971577685, 9980631121



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್‌ನಲ್ಲಿ ಹಾಲು ಮತ್ತು ಸ್ಟೇಷನರಿ ಅಂಗಡಿಗೆ ಕೆಲಸಕ್ಕೆ ಹುಡುಗ ಬೇಕಾಗಿದ್ದಾರೆ.
9845121694 / 8310425593

ಸೈಟು ಮಾರಾಟಕ್ಕಿದೆ
ಜೆ.ಪಿ. ನಗರ ಹತ್ತಿರ 60x40, 80 Lakhs
H.D. ಕೋಟೆ ರಸ್ತೆ 60x40 65 Lakhs.
R.T. ನಗರ ಹತ್ತಿರ 30x40 68 Lakhs.
ದಟ್ಟಗಳ್ಳಿ ಹತ್ತಿರ 30x40, 60x40 ಇದೆ.
ಹೆಚ್.ಡಿ. ಕೋಟೆ ರಸ್ತೆ 30x50 52 Lakhs.
SKL ಪ್ರಾಪರ್ಟೀಸ್
Mob: 9341624462

ಮನೆ ಬಾಡಿಗೆಗೆ
ನೀಡಲು / ಪಡೆಯಲು ಮಧ್ಯವರ್ತಿಗಳಿಗೆ ಸ್ವಾಗತ.
Mob: 9480185371



ಮಾರುತಿ ಟ್ಯೂಬ್ ವೆಲ್ಸ್ (ರಿ)
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
ಕೋರಲ್ ಡ್ರಾ, ಫೋಟೋಶಾಪ್ ಡಿ.ಟಿ.ಪಿ. ಕಲಿತಿದ್ದು, ಅನುಭವಿಗಳಾಗಿರಬೇಕು. ಆಕರ್ಷಕ ಸಂಬಳ ನೀಡಲಾಗುವುದು ಸಂಪರ್ಕಿಸಿ :
9980049505

REQUIRED LADY WARDEN
Age between 21 to 35, Any Degree, Diploma or ITI
Freshers can also apply
Warden need to stay in the hostel, accommodation with food will be provided.
Salary Rs. 12,000/- including PF with ESI
Location : Mysore City (Bannimantap)
Call: 99642 42430

Boys / Girls
ಅಗ್ರಹಾರ ಹತ್ತಿರ, Door ಶೋರೂಂನಲ್ಲಿ ಕೆಲಸ ಮಾಡಲು Boys & Girls ಬೇಕಾಗಿದ್ದಾರೆ.
Mob: 9886640503

SITE FOR SALE
30x40 East face site, Gayathri Layout (Attach R.T. Nagar)
Call: 9880273834

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

TEACHERS REQUIREMENT
D.Ed. Teacher - 1
Hindi B.Ed. Teacher - 1
Computer Teacher - 1
Rotary Mysore North Higher Primary School
Vajamangala, Mysore
Call : 8123839688

ಮನೆ ಬಾಡಿಗೆಗೆ ಇದೆ
20x30 ನಿವೇಶನದಲ್ಲಿ ನಿರ್ಮಿಸಿರುವ ಮೂರು ಬೆಡ್ ರೂಮ್ (1 ರೂಮ್ ಅಟ್ಯಾಚ್ಡ್) ಹಾಲ್, ಕಿಚನ್, ಬಾತ್ ರೂಂ. ದೇವರ ಮನೆ ಇರುವ ಡ್ಯೂಪ್ಲೆಕ್ಸ್ ಮನೆ ಶ್ರೀರಾಂಪುರ ಬೆಮೆಲ್ ಆರ್ಚ್ ಬಳಿ ಬಾಡಿಗೆಗೆ ಇದೆ. ಸಂಪರ್ಕಿಸಿ
9986404828

ವೆಲ್ಡರ್ ಬೇಕಾಗಿದ್ದಾರೆ
ಕೃಷಿ ಯಂತ್ರೋಪಕರಣ ತಯಾರಕ ಕಂಪನಿಯಲ್ಲಿ ವೆಲ್ಡರ್ ಬೇಕಾಗಿದ್ದಾರೆ.
Fabricator required for farm machine manufacturing company
9538994312
7899818241

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕಂಟೇನರ್ ವಾಹನಗಳಿಗೆ ಟ್ರಕ್ ಚಾಲಕರು ತಕ್ಷಣ ಬೇಕಾಗಿದ್ದಾರೆ ಸ್ಥಳೀಯ ಚಾಲಕರು, ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಲಭ್ಯವಿದೆ. ದಯವಿಟ್ಟು ಸಂಪರ್ಕಿಸಿ:
9341623350

ಶ್ರೀ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ (ರಿ)
ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹೆಡಿಯಾಲ, ನಂಜನಗೂಡು ತಾಲ್ಲೂಕು–571315
ಶಿಕ್ಷಕರು ಬೇಕಾಗಿದ್ದಾರೆ
Posts: Science, Physics, Chemistry. Qlfn: M.Sc. with B.Ed.
Kannada: M.A. B.Ed.
Hindi - M.A., B.Ed.
ಕಛೇರಿಯಲ್ಲಿ ಭೇಟಿಯ ಸಮಯ ಬೆಳಿಗ್ಗೆ 10.30 ರಿಂದ 1 ಹಾಗೂ ಸಾಯಂಕಾಲ 3 ರಿಂದ 4.
–ಕಾರ್ಯದರ್ಶಿ / ಮುಖ್ಯೋಪಾಧ್ಯಾಯರು

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ, ಹೈವೇ ಸರ್ಕಲ್, ಕೆ.ಆರ್. ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್, ಲ್ಯಾಬ್ ಟೆಕ್ನಿಷಿಯನ್ ವಾರ್ಡ್ ಬಾಯ್‌ಗಳು ಬೇಕಾಗಿದ್ದಾರೆ.
Mob: 8971367078

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA Approved
Near St. Joseph School, Yelwala, Mysore
Mob: 8217851695

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

House For Sale
20/30 Single Floor
MUDA Allotment
East Facing Door
Shanthaveri Gopal Gowda Nagar
Contact
9380284276

JOB OPENINGS
Education: B.Com., M.Com., MBA, BBM, BBA other degree canddiates also can apply. Work location: Mysore. Only for office and system works.
Pride HR Solutions
Hebbal, Mysore
8762939935 / 9481668694

SITE FOR SALE
Jnanabharathi Layout, Behind Airport on Dadadahalli Highway. 30x40 East facing and Corner sites, MUDA khata & E-khatha ready. Direct owner.
Contact: Rajashekar
Mob: 9342123373

WANTED
Office Executives - M/F
Teachers - F for pre-school.
Helpers - (F) for pre-school.
Salary depends on experience.
9448031964 / 7795301535

OPPORTUNITY
Candidates willing to use spare time to generate extra income through sales / marketing / advisory.
Call: 9731299766

BUILT TO SUIT
3500 square feet, near BSNL Office, Opp. to Jyothi Hospital, Rajkumar Road, Mysore. Contact:
9448294483 / 9663062222

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ರೆಸಾರ್ಟ್ ಒಂದರಲ್ಲಿ ಕೆಲಸ ಮಾಡಲು ಓದು ಬರಹ ತಿಳಿದಿರುವ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸ್ಥಳ : ಭುಗತಹಳ್ಳಿ, ಬನ್ನೂರು ರಸ್ತೆ. ವಯೋಮಿತಿ 50 ವರ್ಷದ ಒಳಗೆ, ಊಟ ಮತ್ತು ವಸತಿ ಸೌಲಭ್ಯ ವಿರುತ್ತದೆ. ಸಂಪರ್ಕಿಸಿ:
9900212487 / 9972444291

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ – ವಿಳಾಸ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

ತಮಿಳುನಾಡು ಯಾತ್ರೆ
4 ದಿನ ಪ್ರವಾಸ
9 ನವಗ್ರಹಗಳು, ಕನ್ಯಾಕುಮಾರಿ, ರಾಮೇಶ್ವರಂ, ಮಧುರೈ ಸೇರಿದಂತೆ ಇನ್ನು ಹಲವಾರು ಸ್ಥಳಗಳು. ಕೆಲವೇ ಸೀಟುಗಳು ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 8151952944

SITE FOR SALE
MUDA APPROVED
20x30
Near Vidya Vikas College, Bannur Road.
8792207164 / 6361799533

SITE FOR SALE
N/E corner 60x70 Suvarna Nagara, Bhogadi Road.
Mob: 8050821108

SBIT ಟ್ರಾವೆಲ್ಸ್
ದುಬೈ ಪ್ರವಾಸ 2025
22 , 24 ಏ | 3,10,26,30 ಮೇ
ವಿಮಾನ ಟಿಕೆಟ್‌ಗಳು | ಹೋಟೆಲ್ ವೀಸಾ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
9343524127
(ಸರಸ್ವತಿಪುರಂ, ಮೈಸೂರು)

WANTED
Post: **Medical Officer**
Qualification: MBBS
Salary: 65000 + Free 2 BHK accommodation. Place: PHC Kanoor, Ponnampete Taluku, Kodagu district (PPP model)
Contact: Dr. Kantharaju C.K.
Gree Dot Trust
9845058023

New House for Sale
MUDA Approved 20x30, GF & FF 100% Vaasthu. Sump 12,000 litress, full teak with spray polish, foundation 3 feet from road level. Rate Rs. 67,00,000. Negotiable. Srinidhi Enclave, Near Excel Public School.
Mob: 7975110915

WANTED
Telecallers (Girls only)
IFB Service.
Qualification: Any Degree / PUC with basic computer knowledge. Location: Vijayanagara 2nd Stage (Hoysala Circle). Salary: 9000 / 10,000 + incentive.
9743992211 / 7090735565

COMMERCIAL SPACE FOR RENT
1st Floor, 1800 sq.ft. Adipampa Road, next to Empire Hotel, K.D. Road, Mysore. Contact:
Mob: 9845570570

LOST DOCUMENTS
I, Smt. Dr Leelavathi, residing at Door No. CH/29, 7th Main, 5th Cross, Saraswathipuram, Mysore (PIN 570009), have lost the Allotment Letter and Possession Certificate for the above-mentioned property on 15/04/2025. These documents are critical to my property ownership. If anyone has found them or has any information regarding their whereabouts, kindly contact me at **9448054184** or inform the nearest police station.

WANTED
Customer support executive Female
12 & any degree
Language -Telugu Mandatory and kannada
Walking interview 18 &19th
Mysore Saraswathipuram
9945551674

ಬೇಕಾಗಿದ್ದಾರೆ
ಸೌತ್ ಇಂಡಿಯನ್ ಆಲ್ ರೌಂಡರ್ ಅಡುಗೆ ಭಟ್ಟರು ಬೇಕಾಗಿದ್ದಾರೆ (ಗಂಡಸರು).
ಸಂಬಳ: 25,000.
ಸ್ಥಳ: ಸಿದ್ದಾರ್ಥ ಲೇಔಟ್, ಮೈಸೂರು
Mob: 9380362236

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾ ಟಿವಿಎಸ್ ಫ್ಯಾಕ್ಟರಿಯಲ್ಲಿ ಮತ್ತು ಬಲ್ಲಾಳ್ ಸರ್ಕಲ್ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು. ವಯೋಮಿತಿ: 50 ವರ್ಷದೊಳಗೆ. ಸಂಬಳ: 18000 – 26 ದಿನಗಳು. ESI, PF, ಊಟ, ತಿಂಡಿ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ:
9620777819 / 9620667819

ಕೆಲಸಕ್ಕೆ ಬೇಕಾಗಿದ್ದಾರೆ
ಆಸಕ್ತಿಯುಳ್ಳವರು ಗಂಡಸರು **House Keeping** ಕೆಲಸಕ್ಕೆ ಬೇಕಾಗಿದ್ದಾರೆ. ಮೈಸೂರಿನ ಸ್ಥಳೀಯರಿಗೆ ಮೊದಲ ಆದ್ಯತೆ.ವಯೋಮಿತಿ: 20 ವರ್ಷದಿಂದ 45 ವರ್ಷದವರೆಗೆ.
ಇಸ್ಕಾನ್ ಟೆಂಪಲ್ # 213, 18ನೇ ಅಡ್ಡರಸ್ತೆ ಜಯನಗರ ಮೈಸೂರು – 570014
Ph: 8496915162

ಅಂಬಾರಿ ರೆಸ್ಟೋರೆಂಟ್
ಜೆಕೆ ಟೈಯರ್ಸ್ ರೇಡಿಯಲ್ ಪ್ಲಾಂಟ್ ಎದುರು
ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
ಊಟ ವಸತಿ 15000 ತಿಂಗಳಿಗೆ ಸಂಬಳ
9611415014 / 9591408601

ಸೈಟುಗಳು ಮಾರಾಟಕ್ಕಿವೆ
30x40, 30x50
ಶ್ರೀರಾಂಪುರ ರಿಂಗ್ ರೋಡ್ ಹಾಗೂ ಹೊಸ ಮನೆ ಮಾರಾಟಕ್ಕಿದೆ 20x30
ಲಾಲ್ ಬಹದ್ದೂರ್ ಶಾಸ್ತ್ರಿನಗರ, ಮೈಸೂರು.
Mob: 8050345574

ಕೆಲಸ ಖಾಲಿ ಇದೆ
ವಯಸ್ಸಾದವರನ್ನು ನೋಡಿಕೊಳ್ಳುವುದು ಅಡುಗೆ ಹಾಗೂ ಮನೆ ಕೆಲಸ ಮಾಡುವುದು ಮಗು ಬಾಣಂತಿ ನೋಡಿಕೊಳ್ಳುವುದು ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. Day / Night / 24 hrs ಕೆಲಸ ಮಾಡುವವರು ಸಂಪರ್ಕಿಸಿ:
Mob: 8123252840

MOBILE ರಿಪೇರಿ ಟ್ರೈನಿಂಗ್
20 ವರ್ಷದಿಂದ Mobile, Electrical, ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

Wanted- Employee Requirement
At Nanjangud & Mysore Industry
Conatct - 8904060693

Description	Candidates required
Welders (Arc & Argon)	10
Vehicle Maintenance Field officers 2 years experience and above	2
Manpower handling Field Officers 2 years experience and above	2
Delivery persons-at Field (male or Female)	5

Wanted- Employee Requirement
At Nanjangud & Mysore Industry
Conatct - 8904060693

Description	Candidates required
Lorry drivers with valid Licence.	10
Fork lift drivers with valid Licence.	10
Electricians with valid wireman licence.	5
IBR welder with valid Licence.	2

WANTED
Mechanical / Civil Engineer (Male)
Diploma / BE completed
2 to 3 years experience
For Construction Company
Cell : 7337801422

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18–45. ಸಂಬಳ ಇಎಸ್‌ಐ, ಪಿಎಫ್ ಕಳೆದು 17,500. 8 ಗಂಟೆಗಳ ಡ್ಯೂಟಿ. 3 ಶಿಫ್ಟ್‌ಗಳು ಇರುತ್ತವೆ. ವಿದ್ಯಾರ್ಹತೆ ಬೇಕಿಲ್ಲ. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ಮೈಸೂರು.
Mob: 9986874574

ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ
ಮದುವೆಯಾಗಲಿಲ್ಲವೇ? ವಧು–ವರರ ಹುಡುಕಾಟ ದಲ್ಲಿದ್ದೀರಾ? ಚಿಂತಿಸಬೇಡಿ, ಶೀಘ್ರ ವಿವಾಹಕ್ಕಾಗಿ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ, ಇನ್ನಿತರ ಎಲ್ಲಾ ಜಾತಿಯ ವಧು–ವರರ ವೈವಾಹಿಕ ಸಂಬಂಧದ ಆಯ್ಕೆಗೆ ಸಂಪರ್ಕಿಸಿ: (ಎರಡನೇ ವಿವಾಹಕ್ಕಾಗಿ) ವಿಧವೆ, ವಿಧುರ, ವಿಚ್ಛೇದಿತರು, ಡೈವೋರ್ಸ್, ಜಾತಿಯ ಅಂತರ ಇಲ್ಲದವರು ವಿವಾಹಕ್ಕಾಗಿ ಹೆಸರು ನೋಂದಾಯಿಸಿ. ಬಡ ವಧುಗಳಿಗೆ ಮಾತ್ರ ಉಚಿತ ನೋಂದಾವಣಿ, ಆರ್ಥಿಕ ಸಹಾಯ (ವಧು–ವರಾನ್ವೇಷಣೆ ಕೇಂದ್ರ).
Mob: 8904834199

ವೃದ್ಧಾಶ್ರಮ
ನಿಮ್ಮ ಪ್ರೀತಿಯ ವೃದ್ಧರು, ಪಾರ್ಶ್ವವಾಯು ಪೀಡಿತರು ಮತ್ತು ಹಾಸಿಗೆ ಹಿಡಿದವರನ್ನು ಮನೆಯವರಂತೆಯೇ ನಮ್ಮ ಸ್ಥಳದಲ್ಲಿ (ಮೈಸೂರಿನಲ್ಲಿ) 24/7 ನೋಡಿಕೊಳ್ಳಲಾಗುವುದು (ಹೋಂ ನರ್ಸ್ ಸೇವೆಯೂ ಲಭ್ಯವಿದೆ). ಸಂಪರ್ಕಿಸಿ:
Mob: 8951190340

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೋರ್ ಸೂಪರ್ ಮಾರ್ಕೆಟ್‌ನಲ್ಲಿ ಪಾರ್ಟ್‌ಟೈಂ ಕೆಲಸ ಮಾಡಲು **ಯುವಕರು ಬೇಕಾಗಿದ್ದಾರೆ.** ವಯೋಮಿತಿ 18 ರಿಂದ 35 ವರ್ಷ. ವಿದ್ಯಾಭ್ಯಾಸ: ಎಸ್‌ಎಸ್‌ಎಲ್‌ಸಿ +. ಹೊಸಬರಿಗೆ ಮಾತ್ರ ಆದ್ಯತೆ. ಡಿಎಲ್ ಕಡ್ಡಾಯವಾಗಿ ಇರತಕ್ಕದ್ದು. ಸಂದರ್ಶನದ ಸ್ಥಳ: ಕೆ.ಡಿ. ರೋಡ್, ವಿಜಯನಗರ, 3ನೇ ಸ್ಟೇಜ್, ಜೆ.ಪಿ. ನಗರ, ಸರಸ್ವತಿಪುರಂ. Mob: 8904110261

ಕಳೆದಿದೆ
ಪ್ರಭುಸ್ವಾಮಿ, ಕೋಡಗಪುರ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಇಲ್ಲಿ ವಾಸವಿದ್ದು, ದಿನಾಂಕ 7-12-2024 ರಂದು ಬೇಗೂರು ಬಸ್ ನಿಲ್ದಾಣದಲ್ಲಿ ಇವರ ಮನೆಯ ತೀರುವಳಿ ಪತ್ರವು ಕಳೆದುಹೋಗಿದ್ದು, ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಈ ನಂಬರನ್ನು ಸಂಪರ್ಕಿಸಿ:
Mob: 8105736411

HOUSE FOR RENT
2 BHK, 1st Floor, 2nd Stage, Gayathripuram. Contact:
Mob: 6360777652

ಬೇಕಾಗಿದ್ದಾರೆ
Dosa Chef (ದೋಸಾ ಭಟ್ರು)
Supplier /Waiter (ಸಪ್ಲೈಯರ್)
South Chef (ಸೌತ್ ಭಟ್ರು ಕುಕ್)
South Assistant (ಸೌತ್ ಹೆಲ್ಪರ್)
Counter /Packing (ಕೌಂಟರ್ / ಪ್ಯಾಕಿಂಗ್)
North & Chinese Chef
ಮೈಸೂರ್ ನಲ್ಲಿ ಕಾಳಿದಾಸ ರೋಡ್ –ಜಯಲಕ್ಷ್ಮಿಪುರಂ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಸಂಪರ್ಕಿಸಿ–
Mob: 90199 16266

Sai Nalanda Central School
K.R. Nagara
Wanted Teachers
1) Social Studies and English (BA / M.A., B.Ed.) 2) Hindi and Sanskrit 3) Computer (BCA / MCA) 4) PET / Yoga 5) Admission Counsellor (Master's) 6) Accountant (3 years experience in Tally) Good English fluency preferred. Free accommodation. Contact:
8722073456, 8722093456
nalandakrn@gmail.com, Web: www.sainalanda.com

ಸುವರ್ಣಾವಕಾಶ
ಪ್ರಸಿದ್ಧ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/-salary.
100% ಗ್ಯಾರೆಂಟಿ ಕೆಲಸ
7795474282 / 7353000488

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

ಬೇಕಾಗಿದ್ದಾರೆ
ಬ್ಯೂಟಿಷಿಯನ್ ಹಾಗೂ ಟೆಲಿಕಾಲರ್ ಬೇಕಾಗಿದ್ದಾರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ:
8951204902 / 8884448688

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಹೂಟಗಳ್ಳಿ ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ ವಿದ್ಯಾ ಅರ್ಹತೆ, Supervisor Job, BE Mech. Diploma mech. Production: ITI ,8th TO 2nd PUC ವರೆಗೆ. ಊಟ, ವಸತಿ, ವಾಹನ ಸೌಲಭ್ಯ ESI ಇತರ ಸೌಲಭ್ಯ ಸಂಬಳ 11,500 ರಿಂದ 20,000 ಇರುತ್ತದೆ.
Ph- 8951869646 / 8884424402

ಬೇಕಾಗಿದ್ದಾರೆ
ನಗರದ ಅಂಗಡಿಯವೊಂದಕ್ಕೆ
*ಡ್ರೈವರ್ *ಅಡುಗೆ ಕೆಲಸಕ್ಕೆ *ಸ್ಟೋರ್ ಕೀಪರ್ *ಡೆಲಿವರಿ ಬಾಯ್ *ಕೌಂಟರ್ ಸೇಲ್ಸ್ *ಪ್ರೊಡಕ್ಷನ್ ಹೆಲ್ಪರ್ ಕೆಲಸಕ್ಕೆ ಹೆಂಗಸರು/ ಗಂಡಸರು *ಸೂಪರ್ವೈಸರ್ *ಚಾಟ್ಸ್ ಮಾಡಲು ಹೆಲ್ಪರ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ:9606116663/4

WANTED
Experienced Teachers for a Pre-School
Any Degree with NTTc is must. Location: Mysore, Gundlupet & Chamarajanagara. Contact:
9980777433 or 9980777633

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಇರುವ ಕಂಪನಿಯಲ್ಲಿ ಕೆಲಸ ಮಾಡಲು SSLC, PUC and ITI ಓದಿರುವ (Pass / fail) ಹುಡುಗರು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
9886795741 / 9620081003
9902644639

SITE FOR SALE
(30x40) Nisarga Layout (Near Sindhuvalli-Kadakola TVS Factory Road). Ready to construct. DTCP approved 18 Lakhs.
Mob: 95388-39926

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 12 ಗಂಟೆಗಳು ESI + PF & W/o ಸೂಪರ್‌ವೈಸರ್ 12 ಗಂಟೆಗಳು ESI + PF & W/o ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ 23,000/ ಸಂಬಳ. ಹೂಟಗಳ್ಳಿ, ಇಲವಾಲ, ಬೆಳವಾಡಿ+ ಬಸ್ತಿಪುರದಟ್ಟಿಗಳ್ಳಿ + ಓಟಿ ಬಸ್‌ಸ್ಟ್ಯಾಂಡ್ + ಜಯಲಕ್ಷ್ಮೀಪುರಂ, ಹೆಬ್ಬಾಳ್. ಮೊದಲು ಬಂದವರಿಗೆ ಆದ್ಯತೆ. ಊಟ / ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
8073203179 / 8951661568

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು **ಹುಡುಗರು ಮತ್ತು ಹುಡುಗಿಯರು** ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.
Mob: 6364748485

ತಕ್ಷಣ ಕೆಲಸ
ಪುರುಷರು ಹಾಗೂ ಮಹಿಳೆಯರಿಗೆ ಹೆಲ್ತ್‌ಕೇರ್ ಸಂಸ್ಥೆಗೆ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವದ ಅಗತ್ಯವಿರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. ಸರ್ಕಾರಿ ನೊಂದಾಯಿತ ಸಂಸ್ಥೆ.
9513203333 / 9071042555

SITE FOR SALE
40x60 South facing, Opposite Park, Vijayanagar 4th Stage, 2nd Phase, near National Public School. Contact:
Mob: 9739267577

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ತ್ರಿವಿಧ ದಾಸೋಹಿ ಶಿವಕುಮಾರ ಶ್ರೀಗಳಿಂದ ಶಿಕ್ಷಣ ಕ್ರಾಂತಿ

ತುಮಕೂರು ಸಿದ್ಧಗಂಗಾ ಶ್ರೀಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ

ತಿ.ನರಸೀಪುರ, ಏ.16– ತ್ರಿವಿಧ ದಾಸೋಹಿ, ನಡೆದಾಡುವ ದೇವರು ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರು ರಾಜ್ಯದಲ್ಲಿ ಬಹುದೊಡ್ಡ ಶಿಕ್ಷಣ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ಕೆಲಸ ಮಾಡಿದರು ಎಂದು ತುಮಕೂರು ಸಿದ್ಧಗಂಗಾ ಶ್ರೀಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಡಾ.ಶಿವಕುಮಾರಸ್ವಾಮಿಗಳ ಸೇವಾ ಟ್ರಸ್ಟ್‌ನಿಂದ ಹಮ್ಮಿಕೊಳ್ಳಲಾಗಿದ್ದ ಡಾ.ಶ್ರೀ ಶಿವಕುಮಾರಸ್ವಾಮಿಗಳ 118ನೇ ಜಯಂತಿ ಉದ್ಘಾಟಿಸಿ, ನಂತರ ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ಶಿವಕುಮಾರ ಸ್ವಾಮಿಗಳು ನಾಡು ಕಂಡ ಮಹಾನ್ ಶಿವಯೋಗಿಗಳು. ಅವರ ಬದುಕು, ಸೇವೆ ಮತ್ತು ತ್ಯಾಗದ ಸಂಗಮವಾಗಿತ್ತು. ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಟ್ಟರು. ಇದರಿಂದ ಅನೇಕ ಮಹಿಳೆಯರ ಸ್ವಾವಲಂಬನೆ ಬದುಕಿಗೆ ಸಹಕಾರಿಯಾಯಿತು ಎಂದರು.

ಈ ಭಾಗದಿಂದಲೂ ಸಾಕಷ್ಟು ಮಕ್ಕಳು ಸಿದ್ಧಗಂಗಾ ಮಠಕ್ಕೆ ಬಂದು ತಮ್ಮ ಬದುಕು ರೂಪಿಸಿಕೊಳ್ಳುವ ಶಿಕ್ಷಣ ಪಡೆದಿದ್ದಾರೆ. ಅದಕ್ಕೆ ಶಿವಾನಂದ ಶರ್ಮರು ಕಾರಣ. 1918 ರಲ್ಲಿ ಉದ್ದಾನಶ್ರೀಗಳು ನಾಡಿಗೆ ಸೇವೆ ಸಲ್ಲಿಸಿದ್ದರೆಂಬುದನ್ನು ಯಾರಿಂದಲೂ ಊಹಿಸಲು ಸಾಧ್ಯವಿಲ್ಲ. ಉದ್ದಾನ ಶ್ರೀಗಳ ಒಡನಾಡಿಗಳಾಗಿ ಅವರ ಜೊತೆಯಲ್ಲಿದ್ದ ಶಿವಾನಂದ ಶರ್ಮರು ನಮ್ಮ ಮಠದ ವಿದ್ಯಾರ್ಥಿ ಎಂದು ಹೇಳಲು ಅಭಿಮಾನ ಹಾಗೂ ಹೆಮ್ಮೆ ಎನಿಸುತ್ತದೆ. ಪರಮಪೂಜ್ಯರು ರಚಿಸಿದ ಸಿದ್ಧಗಂಗಾ ಮಠ ಎಂಬ ಕಮ್ಮಟದಲ್ಲಿ ಅನೇಕರು ತಮ್ಮ ಬದುಕು ರೂಪಿಸಿಕೊಂಡಿದ್ದಾರೆ. ಪರಮಪೂಜ್ಯರಿಗೆ ಹಳ್ಳಿ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಬಹುದೊಡ್ಡ ಕನಸಿತ್ತು. ಅದಕ್ಕಾಗಿ ಅವರು ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳನ್ನು ಸ್ಥಾಪಿಸಿ ಅನೇಕ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡಿದರು. ಮಠಕ್ಕೆ ಎಷ್ಟೇ ಮಕ್ಕಳು ಬಂದರೂ ಆಶ್ರಯ ಕೊಡುವಂತಹ ಜಾತ್ಯಾತೀತ, ವಿಶಾಲ ಮನೋಭಾವ ಇಟ್ಟುಕೊಂಡು ಯಾವುದೇ ಭೇದ ಭಾವ ಮಾಡದೇ ಎಲ್ಲರಿಗೂ ಅವಕಾಶ ಕೊಡುವ ಕೆಲಸ ಮಾಡಿದ ಶಿವಕುಮಾರ ಸ್ವಾಮೀಜಿಗಳ ಸೇವೆ ಅನನ್ಯ. ಮೈಸೂರು ಮತ್ತು ಚಾಮರಾಜನಗರ ಭಾಗಗಳಲ್ಲಿ ಹೆಚ್ಚಾಗಿ ಆರಾಧಿಸುವಂತಹ ಭಕ್ತ ಸಮೂಹ ಇದ್ದು ಹಳ್ಳಿಗಳಲ್ಲಿ ಅವರ ಮೂರ್ತಿ ಸ್ಥಾಪನೆ ಮಾಡುವ ಮೂಲಕ ಅವರಿಗೆ ಬಹುದೊಡ್ಡ ಗೌರವ, ಭಕ್ತಿ, ಶ್ರದ್ಧೆ ಅರ್ಪಿಸಲಾಗುತ್ತಿದೆ ಎಂದರು.

ಎಂಎಲ್ ಹುಂಡಿ ವಿರಕ್ತ ಮಠದ ಪೀಠಾಧ್ಯಕ್ಷ ಶ್ರೀಗೌರಿ ಶಂಕರಸ್ವಾಮಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ತ್ರಿವಿಧ ದಾಸೋಹದ ಮೂಲಕ ಮನೆ ಮಾತಾಗಿದ್ದಾರೆ. ನಡೆದಾಡುವ ದೇವರೆಂದೇ ಹೆಸರು ವಾಸಿಯಾಗಿದ್ದಾರೆ. ಸಾವಿರಾರು ಮಕ್ಕಳಿಗೆ ನೆರವಾಗಿದ್ದಾರೆ. ಹೀಗಾಗಿ ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು. ಹಾಗಾದರೆ ಮಾತ್ರ ಅವರ ಜಯಂತಿಗೆ ಅರ್ಥ ಬರುತ್ತದೆ. ಶ್ರೀಗಳು ಅನ್ನ, ಅಕ್ಷರದ ಮೂಲಕ ಸಾವಿರಾರು ಮಕ್ಕಳ ಬದುಕಿಗೆ ನೆರವಾಗಿದ್ದಾರೆ. ಅವರ ಮೂಲಕ ಅನೇಕರು ಪ್ರೇರಣೆ ಪಡೆದಿದ್ದಾರೆ. ತ್ರಿವಿಧ ದಾಸೋಹ (ಅನ್ನ, ಅಕ್ಷರ ಮತ್ತು ಜ್ಞಾನ ದಾಸೋಹ) ಕ್ಕಾಗಿ, ಶತಾಯುಷಿ ಶ್ರೀಸ್ವಾಮೀಜಿಯವರ ಜೀವನ ಅಧ್ಯಯನ ಮಾಡುವುದರಿಂದ ನಮಗೆ ಸಕಾರಾತ್ಮಕ ಮತ್ತು ದೈವಿಕ ಚಿಂತನೆ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ ಎಂದರು.

ನಂತರ ಕಾಲೇಜು ವೃತ್ತದಲ್ಲಿ ಏರ್ಪಡಿಸಿದ್ದ ಅನ್ನ ದಾಸೋಹಕ್ಕೆ ಶ್ರೀಗಳು ಚಾಲನೆ ನೀಡಿದರು. ಈ ವೇಳೆ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಡ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನಸ್ವಾಮಿ, ಗುರುಪಾದ ಸ್ವಾಮೀಜಿ, ರೇಣುಕಾ ಶಿವಚಾರ್ಯ ಸ್ವಾಮೀಜಿ, ಸಹಜಾನಂದ ಸ್ವಾಮೀಜಿ, ಇಮ್ಮಡಿ ಶಿವಕುಮಾರ ಸ್ವಾಮೀಜಿ, ಚಂಡಿಕೇಶ್ವರ ಶಿವಕುಮಾರ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ವಿದ್ಯೋದಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಪಿ.ಮಹದೇವ ಸ್ವಾಮಿ, ಶ್ರೀಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ, ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ರವಿ, ಸ್ಫಟಿಕ ಸಂಘದ ರಾಜೇಶ್ ಪಟೇಲ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಖಜಾಂಚಿ ದೊಡ್ಡಹುಂಡಿ ನಂಜುಂಡಸ್ವಾಮಿ, ಕುಮಾರಸ್ವಾಮಿ, ತಾಲೂಕು ಅಧ್ಯಕ್ಷ ಕೈಯಂಬಳ್ಳಿ ಅಶೋಕ್, ತುರುಗನೂರು ಮಲ್ಲೇಶ್ ಸಹ ಕಾರ್ಯದರ್ಶಿ ವಾಟಾಳ್ ಗುರುಪಾದ, ಉಪಾಧ್ಯಕ್ಷ ಮಾವಿನಹಳ್ಳಿ ಸೋಮಣ್ಣ, ಖಜಾಂಚಿ ಕೆಬ್ಬೆಹುಂಡಿ ಮಾಯಪ್ಪ, ದೊಡ್ಡಹುಂಡಿ ಲೋಕೇಶ್, ಕಾರ್ ಮಲ್ಲಪ್ಪ, ಹಿರಿಯೂರು ಪ್ರಕಾಶ್, ಕೆಬ್ಬೆಹುಂಡಿ ಸೋಮಶೇಖರ್, ಪರಮೇಶ್ ಪಟೇಲ್, ಜ್ಯೋತಿ ಪರಮೇಶ್, ಅದೃಷ್ಟ ಮಾದಪ್ಪ, ವಕೀಲ ಜ್ಞಾನೇಂದ್ರಮೂರ್ತಿ, ಆಡಿಟರ್ ಮಂಜುನಾಥ್, ಕುಮಾರ್, ಸಿದ್ದಲಿಂಗಸ್ವಾಮಿ ಸೇರಿದಂತೆ ಮತ್ತಿತರರು ಹಾಜರಿದ್ದರು.



ಡಾ.ಶಿವಕುಮಾರಸ್ವಾಮಿಗಳ ಜಯಂತಿಯನ್ನು ಶ್ರೀಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಜಾತಿ, ಧರ್ಮದ ಎಲ್ಲೆ ಮೀರಿ ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ದಾಸೋಹ ಮಾಡಿದ ಶಿವಕುಮಾರಶ್ರೀಗಳನ್ನು ನಾಡಿನ ದೇವರೆಂದೇ ಭಾವಿಸುತ್ತೇವೆ. ಶ್ರೀಗಳಿಗೆ ಯಾರು ಕೇಳದಿದ್ದರೂ ಭಾರತ ರತ್ನ ಕೊಡಬೇಕಿತ್ತು. ರಾಜ್ಯದಲ್ಲಿ ವೀರಶೈವ ಲಿಂಗಾಯಿತ ಸಮುದಾಯ 2 ಕೋಟಿಗೂ ಅಧಿಕ ಸಂಖ್ಯೆಯಲ್ಲಿದ್ದರೂ ಈಗಿನ ಸರ್ಕಾರ ಅವೈಜ್ಞಾನಿಕವಾಗಿ ಜಾತಿ ಜನಗಣತಿ ನಡೆಸಿರುವುದರಿಂದ ಗುರುವಾರ ಮಂಡನೆ ಆಗುವ ವರದಿ ಒಪ್ಪುವುದಿಲ್ಲ. ಸಂಪುಟ ಸಹೋದ್ಯೋಗಿಗಳಲ್ಲೇ ಸರ್ಕಾರದ ಜಾತಿ ಜನಗಣತಿ ವರದಿ ಬಗ್ಗೆ ಆಕ್ಷೇಪಣೆಗಳು ಕೇಳಿ ಬರುತ್ತಿರುವುದರಿಂದ ಅವೈಜ್ಞಾನಿಕ ವರದಿ ಸರ್ಕಾರ ಕೈಬಿಡಬೇಕು.

– ಡಾ.ಹಳವರಹುಂಡಿ ಸಿದ್ದಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ.

ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಕ್ರಮ

ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ



ಸಮಸ್ಯೆ ಬಗೆಹರಿಸುವಂತೆ ಶಾಸಕರಿಗೆ ಮನವಿ ಸಲ್ಲಿಸಲಾಯಿತು.

ಹುಣಸೂರು, ಏ.16– ನಗರದ ಸಂವಿಧಾನ ವೃತ್ತದ ಪಕ್ಕದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲು ಹಾಗೂ ಐಎಎಸ್, ಕೆಎಎಸ್ ತರಬೇತಿ ಕೇಂದ್ರ ಮತ್ತು ನರ್ಸಿಂಗ್ ಕಾಲೇಜು ಸ್ಥಾಪನೆಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳುತ್ತೇನೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ ನೀಡಿದರು.

ನಗರದ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಆಡಳಿತದಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ನಗರದ ಸಂವಿಧಾನ ವೃತ್ತದ ಪಕ್ಕದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲು ಈಗಾಗಲೇ ನಗರಸಭೆಯಿಂದ ನಡಾವಳಿ ಮಾಡಲಾಗಿದ್ದು, ಸರ್ಕಾರದ ಮಟ್ಟದಲ್ಲಿ ಪ್ರತಿಮೆಗೆ ಎಷ್ಟು ಜಾಗಬೇಕು ಎನ್ನುವುದನ್ನು ಖಾತ್ರಿಪಡಿಸಿಕೊಂಡು ಮಂಜೂರು ಮಾಡಿಸಿ ಪ್ರತಿಮೆ ಸ್ಥಾಪನೆ ಮಾಡಲು ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಐಎಎಸ್, ಕೆಎಎಸ್ ತರಬೇತಿ ಕೇಂದ್ರ ಮತ್ತು ನರ್ಸಿಂಗ್ ಕಾಲೇಜುಗಳ ಸ್ಥಾಪನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಮಾತನಾಡಿ ಇದು ಅಗತ್ಯವಾಗಿ ಬೇಕಾಗಿರುವುದರಿಂದ ಎಲ್ಲರಿಗೂ ಅನುಕೂಲವಾಗುವಂತೆ ಕ್ರಮ ವಹಿಸುತ್ತೇನೆ ಎಂದರು.

ಇದೇ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ತಾಲೂಕಿನ ಪ್ರಮುಖ ಸಮಸ್ಯೆಗಳ ಬಗೆಹರಿಸುವಂತೆ ದಸಂಸ ವತಿಯಿಂದ ಮನವಿ ಸಲ್ಲಿಸಲಾಯಿತು. ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿದರು. ಎಸಿ ವಿಜಯ್ ಕುಮಾರ್, ತಹಸೀಲ್ದಾರ್ ಮಂಜುನಾಥ್, ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಕುಮಾರ್, ಇಒ ಹೊಂಗಯ್ಯ, ದಸಂಸ ಕೆಂಪರಾಜು, ಗಜೇಂದ್ರ, ಸ್ವಾಮಿ, ಆದಿಜಾಂಬವ ಸಂಘದ ಡಿ.ಕುಮಾರ್, ಹಿರಿಯ ದಲಿತ ಮುಖಂಡ ಬಸವಲಿಂಗಯ್ಯ ಇತರರಿದ್ದರು.

ಸನ್ಮಾನ



ಪಿರಿಯಾಪಟ್ಟಣ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆ.ಹೊಲದಪ್ಪ ಅವರನ್ನು ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ತಾಲೂಕು ವೀರಶೈವ ಲಿಂಗಾಯತ ಸಮಾಜದಿಂದ ಸನ್ಮಾನಿಸಲಾಯಿತು.

ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಮೈಸೂರು ತಾಲೂಕಿನ ಜಯಪುರ ದೊಡ್ಡಪ್ರಮಾಣ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿಗ ಮಾವಿನಹಳ್ಳಿ ಮರಿಸಿದ್ದೇಗೌಡ ಮತ್ತು ಉಪಾಧ್ಯಕ್ಷರಾಗಿ ಅರಸನಕೆರೆ ಕೆಂಪರಾಜು ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಮುಖಂಡರಾದ ಸುಜುಕಿ ಸಿದ್ದೇಗೌಡ, ವಕೀಲ ತಿಮ್ಮೇಗೌಡ, ರಾಜೇಶ್, ಜವರನಾಯಕ, ಬಿ.ಡಿ.ಬಸವಣ್ಣ, ಭೈರೇಶ, ಎಂ.ನಾಗರಾಜು, ಬಸವೇಗೌಡ, ಸೋಮಣ್ಣ, ನಿರ್ದೇಶಕರಾದ ಅಭಿಷೇಕ್, ಎಂ.ಮಹದೇವಯ್ಯ, ಎಂ.ರಂಗಸ್ವಾಮಿ, ಬಸವಣ್ಣ, ಎಂ.ಮಂಜುನಾಥ್, ಅಬ್ದುಲ್ ಮುತಾಲಿಬ್, ರತ್ನಮ್ಮ, ಭಾಗ್ಯಮ್ಮ ಉಪಸ್ಥಿತರಿದ್ದರು.

ನಟ ಪ್ರಭುದೇವರಿಂದ ಮಹದೇಶ್ವರ ದೇವಾಲಯ ಜೀರ್ಣೋದ್ಧಾರ

ನಂಜನಗೂಡು, ಏ.16– ತಾಲೂಕಿನ ಕೆಂಬಾಲು ಗ್ರಾಮದ ಮಲೆ ಮಹದೇಶ್ವರ ದೇವಾಲಯವನ್ನು ಬಹುಭಾಷಾ ನಟ ಪ್ರಭುದೇವ 25 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ.

ತಾಲೂಕಿನ ಕೆಂಬಾಲು ಗ್ರಾಮದಲ್ಲಿರುವ ನೂರಾರು ವರ್ಷ ಪುರಾತನ ಹೊಯ್ಸಳರ ಕಾಲದ ಮಲೆ ಮಹದೇಶ್ವರ ದೇವಾಲಯಕ್ಕೆ ಮಂಗಳವಾರ ಕುಟುಂಬ ಸಮೇತರಾಗಿ ಆಗಮಿಸಿ ಪೂಜಾ ವಿಧಿ ವಿಧಾನಗಳಲ್ಲಿ ಭಾಗವಹಿಸಿದ್ದರು.


ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಭುದೇವ, ನಮ್ಮ ತಾಯಿಯವರ ಆಸೆಯಂತೆ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಸಲಾಗಿದೆ. ನಾವು ಮೂಲತಃ ಮೈಸೂರು ತಾಲೂಕಿನ ದೂರ ಗ್ರಾಮದವರು. ನಮ್ಮ ಪೂರ್ವಜರು ಕೆಂಬಾಲು ಗ್ರಾಮದಲ್ಲಿ 4 ಎಕರೆ ಜಮೀನು ಹೊಂದಿದ್ದು, ಗ್ರಾಮದ ಮಲೆ ಮಹದೇಶ್ವರ ಸ್ವಾಮಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಶಿಥಿಲಾವಸ್ಥೆ ತಲುಪಿರುವ ದೇವಾಲಯವನ್ನು ಕುಟುಂಬದ ಹಿರಿಯರ ಆಸೆಯಂತೆ ಜೀರ್ಣೋದ್ಧಾರ ಮಾಡಲಾಗಿದೆ. ದೇವರಿಗೆ ಎಂದಿನಂತೆ ಪೂಜೆ, ಪುರಸ್ಕಾರಗಳು ನಡೆಯಲಿವೆ ಎಂದರು.

ಪ್ರಭುದೇವ ತಾಯಿ ಮಹದೇವಮ್ಮ ಮಾತನಾಡಿ, ಹಿಂದಿನಿಂದಲೂ ದೇವಾಲಯಕ್ಕೆ ಬರುತ್ತಿದ್ದೇವೆ. ದೇವಾಲಯ ಜೀರ್ಣೋದ್ಧಾರ ಮಾಡಬೇಕು ಎಂಬ ಮನಸಿತ್ತು. ನನ್ನ ಮನವಿಗೆ ಸ್ಪಂದಿಸಿದ ನನ್ನ ಮಗ ಪ್ರಭುದೇವ ಜೀರ್ಣೋದ್ಧಾರ ಕಾರ್ಯ ನಡೆಸಿದ್ದಾನೆ. ಇದರಿಂದ ನನಗೆ ಹಾಗೂ ಅಕ್ಕಪಕ್ಕದ ಗ್ರಾಮಸ್ಥರಿಗೂ ಬಹಳ ಸಂತೋಷವಾಗಿದೆ ಎಂದರು.



ನಟ ಪ್ರಭುದೇವ ಕುಟುಂಬದವರೊಂದಿಗೆ ಪೂಜೆಯಲ್ಲಿ ಭಾಗವಹಿಸಿದ್ದರು.

ಯಜಮಾನ್ ಪುಟ್ಟಯ್ಯ ನಿಧನ



ತಲಕಾಡು, ಏ.16– ಗ್ರಾಮದ ಅರುಂಧತಿ ನಗರದ ನಿವಾಸಿ ಯಜಮಾನ್ ಪುಟ್ಟಯ್ಯ(85) ಬುಧವಾರ ನಿಧನರಾದರು.

ಮೃತರು ಪತ್ರಕರ್ತ ಮಹದೇವ, ಬಿ.ಸೀಹಳ್ಳಿ ಗ್ರಾಪಂ ಕಾರ್ಯದರ್ಶಿ ಕೆಂಪರಾಜು ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ತಲಕಾಡಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಟ್ಟೆಕೆರೆ ಗ್ರಾಮ ಪಂಚಾಯತಿಗೆ ಗೌರಮ್ಮ ಅಧ್ಯಕ್ಷೆ

ಹನಗೋಡು ಏ.16– ಹನಗೋಡು ಹೋಬಳಿ ತಟ್ಟೆಕೆರೆ ಗ್ರಾಪಂ ಅಧ್ಯಕ್ಷೆಯಾಗಿ ಗೌರಮ್ಮ ದೇವೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ಸಣ್ಣಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಗೌರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬಿಇಓ ಎಸ್.ಪಿ.ಮಹದೇವ್ ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಈ ವೇಳೆ ನಿಲುವಾಗಿಲು ಗ್ರಾಮದ ಯಜಮಾನರಾದ ಈರಾಜಯ್ಯ, ಬಸವರಾಜು, ಗ್ರಾಮಸ್ಥರು ಹಾಜರಿದ್ದರು.

ಚುನಾವಣೆಯಲ್ಲಿ ಉಪಾಧ್ಯಕ್ಷ ನಟರಾಜ್, ಮಾಜಿ ಅಧ್ಯಕ್ಷರಾದ ಸಣ್ಣಮ್ಮ, ಕುಮಾರ್, ಪಾರ್ವತಿ, ಎ.ಎಂ.ದೇವರಾಜ್, ಸದಸ್ಯರಾದ ಗೋವಿಂದೇಗೌಡ, ಭಾಗ್ಯಮ್ಮ, ತಿಮ್ಮೇಗೌಡ, ಭಾಗವಹಿಸಿದ್ದರೆ, ಸದಸ್ಯರಾದ ನವೀನ್ ಕುಮಾರ್, ಮಂಜುಳ, ಮಹದೇವಿ, ಮಂಜುಳಾ ನಂಜೇಗೌಡ ಗೈರಾಗಿದ್ದರು. ಪಿಡಿಓ ಹೆಚ್.ಡಿ.ಲೋಕೇಶ್ ಹಾಗೂ ಸಿಬ್ಬಂದಿ ಇದ್ದರು.

ಅಭಿನಂದನೆ: ನೂತನ ಅಧ್ಯಕ್ಷೆ ಗೌರಮ್ಮ ಅವರನ್ನು ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ಗ್ಯಾರಂಟಿ ಯೋಜನೆ ಅಧ್ಯಕ್ಷ ರಘು, ಕಾಂಗ್ರೆಸ್ ಕಾರ್ಯಾಧ್ಯಕ್ಷ ಪುಟ್ಟರಾಜು, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ಫೈಸಲ್, ಕುಮಾರ್, ಅಕ್ರಮ–ಸಕ್ರಮ ಮಾಜಿ ಸದಸ್ಯ ಚಿಕ್ಕಸ್ವಾಮಿ, ಮಧು, ರವಿ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.



ತಟ್ಟೆಕೆರೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಸದಸ್ಯರನ್ನು ಸನ್ಮಾನಿಸಲಾಯಿತು.

ಶ್ರೀಬಸವೇಶ್ವರ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಅಧ್ಯಕ್ಷರಾಗಿ ಎಸ್.ಬಿ.ಸುಗಂಧರಾಜು, ಉಪಾಧ್ಯಕ್ಷರಾಗಿ ಎಂ.ಸಿದ್ದಲಿಂಗಸ್ವಾಮಿ ಆಯ್ಕೆಯಾದರು.

ತಿ.ನರಸೀಪುರ, ಏ.16– ತಾಲೂಕಿನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶಂಭುದೇವನಪುರ ಎಸ್.ಬಿ.ಸುಗಂಧರಾಜು, ಉಪಾಧ್ಯಕ್ಷರಾಗಿ ನಿವೃತ್ತ ಕೆಇಬಿ ನೌಕರ ಎಂ.ಸಿದ್ದಲಿಂಗಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಸಂಘದ ಕಚೇರಿಯಲ್ಲಿ ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸುಗಂಧರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಸಿದ್ದಲಿಂಗಸ್ವಾಮಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಸಹಾಯಕ ನಿರ್ದೇಶಕ ಬಿ.ಎಲ್.ಮಂಜುನಾಥ್ ಪ್ರಕಟಿಸಿದರು.

ಕೆಲ ವಾರಗಳ ಹಿಂದೆ ಸಹಕಾರ ಸಂಘಕ್ಕೆ 9 ಮಂದಿ ನಿರ್ದೇಶಕರನ್ನು ಆಯ್ಕೆ ಮಾಡಲಾಗಿತ್ತು. ಸಂಘದ ನಿರ್ದೇಶಕರಾದ ಸೀಹಳ್ಳಿ ಗುರುಮೂರ್ತಿ, ಮೂಗೂರು ರೈಸ್‌ಮಿಲ್ ಮಾಲೀಕ ಎಂ.ಎಸ್.ಸುಧಾಕರ್, ಪೂಜಿತ್ ಮೆಡಿಕಲ್ ಪಿ.ಕುಮಾರ್, ಗುತ್ತಿಗೆದಾರ ಬಿ.ಮಂಟೇಲಿಂಗಪ್ಪ, ಕೇಬಲ್ ಬಿ.ರಾಜಶೇಖರ್, ಪುರಸಭೆ ಸದಸ್ಯೆ ರೂಪಶ್ರೀ ಪರಮೇಶ್ ಹಾಗೂ ಉದ್ಯಮಿ ಸವಿತಾ ಸಿ.ಎಂ.ಪ್ರಕಾಶ್ ಹಾಜರಿದ್ದು ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರು.

ಇದೇ ವೇಳೆ ಸಂಘದ ಅಧ್ಯಕ್ಷ ಸುಗಂಧರಾಜು ಮಾತನಾಡಿ, ಸಂಘವನ್ನು ಬಹು ಎತ್ತರಕ್ಕೆ ಬೆಳೆಸುವ ಆಶಯ ನನ್ನದಾಗಿದೆ. ಸಂಘಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಷೇರುದಾರರನ್ನು ನೋಂದಣಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ನಿಲಸೋಗೆ ಶೇಖರಪ್ಪ, ಹಿರಿಯೂರು ಪ್ರಕಾಶ್, ಆಡಿಟರ್ ಮಂಜುನಾಥ್, ಉಪನ್ಯಾಸಕ ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರಮೂರ್ತಿ, ಹೊಸೂರುಹುಂಡಿ ತೋಂಟೇಶ್ ಸೇರಿದಂತೆ ಮತ್ತಿತರಿದ್ದರು.

ಶೋಷಿತರ ವಿಮೋಚನೆಗೆ ನಾಂದಿ ಹಾಡಿದ ಅಂಬೇಡ್ಕರ್

ಹೆಚ್.ಡಿ.ಕೋಟೆ, ಏ.16– ಶತಮಾನಗಳಿಂದ ಹಸಿವು, ಬಡತನ, ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳಿಗೆ ಒಳಗಾಗಿದ್ದ ಶೋಷಿತ ಸಮುದಾಯಗಳ ವಿಮೋಚನೆಗೆ ನಾಂದಿ ಹಾಡಿದ ಮಹಾನ್ ವ್ಯಕ್ತಿ ಡಾ.ಬಿ.ಆರ್.ಅಂಬೇಡ್ಕರ್ ಎಂದು ಶಾಸಕ ಅನಿಲ್ ಶ್ಲಾಘಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ನಡೆದ ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಅಂಬೇಡ್ಕರ್ ಅವರು ಹುಟ್ಟಿ ಸಂವಿಧಾನ ರಚಿಸಲಿಲ್ಲ ಎಂದಿದ್ದರೆ ನಾನು ಶಾಸಕನಾಗಲು ಸಾಧ್ಯವಿರಲಿಲ್ಲ ಎಂದರು.

ಮುಖ್ಯ ಭಾಷಣ ಮಾಡಿದ ಮಹೇಶ್ ಮಾತನಾಡಿದರು. ಈ ವೇಳೆ ಸೇಂಟ್ ಜೋಸೆಫ್ ಶಾಲೆ 3ನೇ ತರಗತಿ ವಿದ್ಯಾರ್ಥಿ ಯು.ಎಸ್. ಸುನೋಜ್ ಸಂವಿಧಾನ ಪೀಠಿಕೆ ಓದಿದ್ದು ವಿಶೇಷವಾಗಿತ್ತು. ಗೌಸ್ ಮೋಹಿನ್ ಅವರ ಕಾಕನಕೋಟೆ ಬಾನಾಡಿಗಳು ಪುಸ್ತಕ ಬಿಡುಗಡೆಗೊಳಿಸಲಾಯಿತು.

ಈ ವೇಳೆ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಪುರಸಭಾ ಸದಸ್ಯರಾದ ಗೀತಾ, ಸುಹಾಸಿನಿ, ಅನಿಲ್, ಸಿಪಿಐ ಗಂಗಾಧರ್, ಅಬಕಾರಿ ಇನ್ಸ್‌ಪೆಕ್ಟರ್ ಶಿವರಾಜ್, ಮೈಮುಲ್ ನಿರ್ದೇಶಕ ಈರೇಗೌಡ, ಸೋಮೇಶ್, ಡಾ.ಯಶ್ವಂತ್, ನಾಗರಾಜ್, ತೇಜುಗುರುಮಲ್ಲು, ಜಸ್ಸಿಲ್ಲಾ, ದೇವರಾಜ್, ಸ್ವಾಮಿ, ಕೆಂಪಯ್ಯ, ವೆಂಕಟೇಶ, ಪ್ರಕಾಶ್, ಶಿವಕುಮಾರ್, ನಂಜಯ್ಯ, ಜಯಣ್ಣ, ಮೋಹನ್‌ರಾಜ್, ಗೋಪಾಲ್, ಸುರೇಂದ್ರ ಸಿಂಗ್, ಲ್ಯಾಂಡ್ ಆರ್ಮಿ ಬಸವರಾಜ್, ಧರ್ಮ, ಕೃಷ್ಣರಾಜ್, ಮಹದೇವಯ್ಯ, ಚಾ.ನಂಜುಂಡಮೂರ್ತಿ, ಆನಂದ್, ಪ್ರಮೋದ್ ಕುಮಾರ್, ಗೌಸ್ ಮೋಹಿನ್, ಸದಾಶಿವ, ಚಿಕ್ಕಣ್ಣ, ಭೀಮಪ್ಪ ಇದ್ದರು.

ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕಾವೇರಿ ನದಿಯಿಂದ 23 ವಾರ್ಡ್‌ಗಳಿಗೂ ನೀರು ಪೂರೈಕೆ: ಶಾಸಕ ಡಿ.ರವಿಶಂಕರ್

ಕೆ.ಆರ್.ನಗರ, ಏ.16– ಭವಿಷ್ಯದ ಜನಸಂಖ್ಯೆ ಆಧಾರವಾಗಿಟ್ಟುಕೊಂಡು ಪಟ್ಟಣದ 23 ವಾರ್ಡ್‌ಗಳಿಗೂ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಚಾಮರಾಜ ಒಡೆಯರ್ ನೀರು ಶುದ್ಧೀಕರಣ ಘಟಕದ ಆವರಣದಲ್ಲಿ ಅಮೃತ್–2.0 ಯೋಜನೆಯ ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗೆ ಬುಧವಾರ ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ ರಾಜ್ಯ ಸರ್ಕಾರದಿಂದ ಅಮೃತ–2.0 ಯೋಜನೆಯಡಿ 30.15 ಕೋಟಿ ಅನುದಾನ ಮಂಜೂರಾಗಿದ್ದು, ಇಂದು ಕಾಮಗಾರಿ ಆರಂಭವಾಗಿ ಮುಂದಿನ 18 ತಿಂಗಳೊಳಗೆ ಪೂರ್ಣಗೊಳ್ಳಲಿದೆ. ಪಟ್ಟಣದಲ್ಲಿ 45 ಸಾವಿರ ಜನಸಂಖ್ಯೆಯಿದ್ದು, ಮುಂದಿನ 30 ವರ್ಷಗಳ ನಂತರ 71 ಸಾವಿರ ಮಂದಿ ವಾಸಿಸುವ ನಿರೀಕ್ಷೆಯಿದ್ದು, ಅವರೆಲ್ಲರಿಗೂ ಸದರಿ ಯೋಜನೆಯಿಂದ ನೀರು ಸರಬರಾಜು ಮಾಡಲಾಗುವುದು ಎಂದು ತಿಳಿಸಿದರು.

ಪಟ್ಟಣದ ಕುಡಿಯುವ ನೀರಿನ ಸಮಸ್ಯೆ ಅರಿತು ನಾನು ಸಿಎಂ, ಡಿಸಿಎಂ ಮತ್ತು ನಗರಾಭಿವೃದ್ಧಿ ಸಚಿವರೊಂದಿಗೆ ಚರ್ಚಿಸಿ ಅನುದಾನ ಬಿಡುಗಡೆ ಮಾಡಿಸಿದ್ದು, ನಮ್ಮ ಮನವಿಗೆ ಸ್ಪಂದಿಸಿದ ಸರ್ಕಾರಕ್ಕೆ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ನೀರು ಸರಬರಾಜು ಕೇಂದ್ರದಿಂದ ಈಗ 5.67 ಎಂಎಲ್‌ಡಿ ನೀರು ಸರಬರಾಜಾಗುತ್ತಿದ್ದು, ಅಮೃತ ಯೋಜನೆ ಕಾಮಗಾರಿ ಪೂರ್ಣಗೊಂಡ ನಂತರ ಅದು 13.10 ಎಂಎಲ್‌ಡಿ ಸಾಮರ್ಥ್ಯಕ್ಕೇರಲಿದೆ ಎಂದು ವಿವರಿಸಿದರು.

ನಗರಾಭಿವೃದ್ಧಿ ಇಲಾಖೆಯಿಂದ ಒಳಚರಂಡಿ ಕಾಮಗಾರಿಗೆ 20 ಕೋಟಿ ಬಿಡುಗಡೆಯಾಗಿ ಟೆಂಡರ್ ಪ್ರಗತಿಯಲ್ಲಿದ್ದು, ಅಗತ್ಯವಿರುವೆಡೆ ಮತ್ತೆ ಒಳಚರಂಡಿ ಮಾಡಲು ಅಗತ್ಯ ಅನುದಾನ ಕೊಡುವಂತೆ ನಗರಾಭಿವೃದ್ಧಿ ಸಚಿವರಿಗೆ ಪೂರಕ ಅಂದಾಜುಪಟ್ಟಿ ಸಲ್ಲಿಸಿದ್ದು, ಇದಕ್ಕೆ ಅವರು ಒಪ್ಪಿಗೆ ಸೂಚಿಸಿದ್ದಾರೆ ಎಂದರು.

ಪುರಸಭೆ ಅಧ್ಯಕ್ಷ ಡಿ.ಶಿವುನಾಯಕ್, ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಸದಸ್ಯರಾದ ಪ್ರಕಾಶ್, ನಟರಾಜು, ಕೆ.ಎಸ್.ಶಂಕರ್, ಮಾಜಿ ಸದಸ್ಯ ಕೆ.ವಿನಯ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ಮುಖಂಡರಾದ ನವೀದ್ ಅಹಮದ್, ವೃಷಭೇಂದ್ರ, ಚಿಕ್ಕವೀರು, ವಿ.ಸುರೇಶ್, ಆದರ್ಶ, ಮಹೇಶ್, ತಿಮ್ಮಶೆಟ್ಟಿ, ವ್ಯವಸ್ಥಾಪಕಿ ಸುಧಾರಾಣಿ, ಅಭಿಯಂತರರಾದ ಸೌಮ್ಯ, ಅಭಿಷೇಕ್, ಕಂದಾಯಾಧಿಕಾರಿ ಜಿ.ಎಸ್.ರಮೇಶ್, ಆರೋಗ್ಯ ನಿರೀಕ್ಷಕರಾದ ಎಸ್.ಪಿ.ರಾಜೇಂದ್ರಕುಮಾರ್, ಹೆಚ್.ಎಸ್.ಲೋಕೇಶ್ ಹಾಜರಿದ್ದರು.



ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಐಪಿಎಲ್ ಹಂಗಾಮ

ಆರ್‌ಆರ್ ವಿರುದ್ಧ ಸೂಪರ್ ಓವರ್‌ನಲ್ಲಿ ಗೆದ್ದ ಡೆಲ್ಲಿ



ದೆಹಲಿ, ಏ.16– ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಐಪಿಎಲ್ ಪಂದ್ಯಾವಳಿಯ 32ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೂಪರ್ ಓವರ್‌ನಲ್ಲಿ ಜಯ ಗಳಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 188 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ರಾಜಸ್ಥಾನ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 188 ರನ್ ಗಳಿಸುವ ಮೂಲಕ ಪಂದ್ಯ ಟೈ ಆಯಿತು. ನಂತರ ನಡೆದ ಸೂಪರ್ ಓವರ್‌ನಲ್ಲಿ ರಾಜಸ್ಥಾನ್ ಇನ್ನೂ ಒಂದು ಎಸೆತ ಬಾಕಿ ಇರುವಂತೆಯೇ 11 ರನ್ ಗಳಿಸಿತು. 12 ರನ್‌ಗಳ ಸೂಪರ್ ಓವರ್ ಗುರಿ ಬೆನ್ನಟ್ಟಿದ ಡೆಲ್ಲಿ 4 ಎಸೆತಗಳಲ್ಲಿ 13 ರನ್‌ಗಳಿಸಿ ಗೆಲುವು ಸಾಧಿಸಿತು. ರಾಹುಲ್ 7, ಟ್ರಿಸ್ಟಾನ್ ಸ್ಟಬ್ಸ್ 6 ರನ್ ಗಳಿಸಿ ಗೆಲುವು ತಂದುಕೊಟ್ಟರು. ಆ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ಆಡಿರುವ 6 ಪಂದ್ಯಗಳಲ್ಲಿ 5 ರಲ್ಲಿ ಗೆದ್ದು, 1 ರಲ್ಲಿ ಸೋತು 10 ಅಂಕಗಳೊಂದಿಗೆ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದೆ.

ಡೆಲ್ಲಿ ಪರ ಇನಿಂಗ್ಸ್ ಆರಂಭಿಸಿದ ಜೇಕ್ ಫ್ರೇಸರ್–ಮೆಕ್‌ಗುರ್ಕ್ 9, ಕರುಣ್ ನಾಯರ್ ಶೂನ್ಯಕ್ಕೆ ಬಹುಬೇಗ ಔಟಾದರು. ನಂತರ ಕ್ರೀಸ್‌ಗಿಳಿದ ಕನ್ನಡಿಗ ಕೆ.ಎಲ್.ರಾಹುಲ್ ಹಾಗೂ ಅಭಿಷೇಕ್ ಪೋರೆಲ್ 63 ರನ್ ಜೊತೆಯಾಟವಾಡಿದರು. ರಾಹುಲ್ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 38 ರನ್ ಗಳಿಸಿದರೇ, ಅಭಿಷೇಕ್ ಪೋರೇಲ್ 49 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ನಂತರ ಬಂದ ಟ್ರಿಸ್ಟಾನ್ ಸ್ಟಬ್ಸ್, ನಾಯಕ ಅಕ್ಸರ್ ಪಟೇಲ್ ತಲಾ 34 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಅಂತಿಮವಾಗಿ ಅಶುತೋಷ್ ಶರ್ಮಾ ಅಜೇಯ 15 ರನ್ ಗಳಿಸಿದರು. ರಾಜಸ್ಥಾನ ಪರ ಜೋಫ್ರಾ ಆರ್ಚರ್ 2, ಮಹೇಶ್ ತೀಕ್ಷಣ್, ವನಿಂದು ಹಸರಂಗಾ ತಲಾ ಒಂದು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ರಾಜಸ್ಥಾನ್ ಪರ ಯಶಸ್ವಿ ಜೈಸ್ವಾಲ್ ಹಾಗೂ ಸಂಜು ಸ್ಯಾಮ್ಸನ್ ಮೊದಲ ವಿಕೆಟ್‌ಗೆ 61 ರನ್ ಜೊತೆಯಾಟವಾಡುವ ಮೂಲಕ ಡೆಲ್ಲಿ ಬೌಲರ್ಸ್‌ಗಳ ಬೆವರಿಳಿಸಿದರು. ಸಂಜು 19 ಬಾಲ್‌ಗೆ 31 ರನ್ ಗಳಿಸಿ ಗಾಯಗೊಂಡು ನಿವೃತ್ತಿಗೊಂಡರು. ಮತ್ತೊಂದೆಡೆ ಜವಾಬ್ದಾರಿಯುತ ಆಟವಾಡದ ಜೈಸ್ವಾಲ್ 4 ಸಿಕ್ಸರ್, 3 ಬೌಂಡರಿ ಒಳಗೊಂಡ 51ರನ್ ಗಳಿಸಿದರೇ, ನಿತೀಶ್ ರಾಣಾ 28 ಎಸೆತಗಳಲ್ಲಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ 51ರನ್ ಗಳಿಸಿದರು. ಅಂತಿಮವಾಗಿ ಧ್ರುವ್ ಜುರೇಲ್ 26 ರನ್ ಗಳಿಸಿ ಕೊನೆಯ ಬಾಲ್‌ನಲ್ಲಿ ರನ್ ಔಟಾದರು. ಹೆಟ್ಮೇಯರ್ 15 ರನ್ ಗಳಿಸುವ ಅಜೇಯರಾಗಿ ಉಳಿದರು. ಡೆಲ್ಲಿ ಪರ ಮಿಚೆಲ್ ಸ್ಟಾರ್ಕ್, ಅಕ್ಷರ್ ಪಟೇಲ್ ಹಾಗೂ ಕುಲದೀಪ್ ಯಾದವ್ ಒಂದೊಂದು ವಿಕೆಟ್ ಪಡೆದರು. ಮಿಚೆಲ್ ಸ್ಟಾರ್ಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	6	5	1	0	10
ಗುಜರಾತ್	6	4	2	0	8
ಬೆಂಗಳೂರು	6	4	2	0	8
ಪಂಜಾಬ್	6	4	2	0	8
ಲಕ್ನೋ	7	4	3	0	8
ಕೋಲ್ಕತ್ತಾ	6	3	3	0	6
ಮುಂಬೈ	6	2	4	0	4
ರಾಜಸ್ಥಾನ್	7	2	5	0	4
ಹೈದರಾಬಾದ್	6	2	4	0	4
ಚೆನ್ನೈ	7	2	5	0	4

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್
v/s
ಸನ್‌ರೈಸರ್ಸ್ ಹೈದರಾಬಾದ್

ಸಮಯ: ಸಂಜೆ 7.30

ಸ್ಥಳ : ವಾಂಖೆಡೆ ಕ್ರೀಡಾಂಗಣ, ಮುಂಬೈ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾಕೂ ಮಹಾರಾಜ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕ್ (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ) ಜಾಟ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ. ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಂಬೇಡ್ಕರ್‌ರನ್ನು ಸಂಪೂರ್ಣವಾಗಿ ಅರಿತುಕೊಳ್ಳುವಲ್ಲಿ ವಿಫಲರಾಗಿದ್ದೇವೆ

ನಿವೃತ್ತ ಮುಖ್ಯ ಅಭಿಯಂತರ ಶಂಕರ ದೇವನೂರು ವಿಷಾದ

ಮೈಸೂರು, ಏ.16(ಎಂಟಿವೈ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಪೂರ್ಣವಾಗಿ ಅರಿತುಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ಸಂಸ್ಕೃತಿ ಚಿಂತಕ ಹಾಗೂ ನಿವೃತ್ತ ಮುಖ್ಯ ಅಭಿಯಂತರರಾದ ಶಂಕರ ದೇವನೂರು ಹೇಳಿದರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಬುಧವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಚಿಂತನೆಯಲ್ಲಿ ಬುದ್ಧನ ನಿರ್ವಿಕಾರ ತತ್ವ, ಕವಿಗಳ ತಾತ್ವಿಕ ಚಿಂತನೆ, ಜ್ಯೋತಿ ಬಾಫುಲೆ ಅವರ ಸಮಾನತೆಯ ರೂಪ ಅವರ ಹೃದಯದಲ್ಲಿ ಇಂದಿಗೂ ಹಸಿರಾಗಿದೆ. ಅಂಬೇಡ್ಕರ್ ಅವರನ್ನು ಮಹಾ ಮೇಧಾವಿ, ಜ್ಞಾನಿ ಎಂದು ಭಾರತೀಯರು ಹೇಳುವುದಿಲ್ಲ. ಆದರೆ ಪಾಶ್ಚಿಮಾತ್ಯ ಚಿಂತಕ ನಿಕೋಲಸ್ ಬೇವರ್ಲಿ ತಮ್ಮ ಕೃತಿಯಲ್ಲಿ ಅಂಬೇಡ್ಕರ್ ಅವರನ್ನು ಜಗತ್ತಿನ ಐವರು ಘನ ವಿದ್ವಾಂಸರಲ್ಲಿ ಒಬ್ಬರು ಎಂದು ಉಲ್ಲೇಖಿಸಿದ್ದಾರೆ. ಆದರೆ ಅಂಬೇಡ್ಕರ್ ಅವರನ್ನು ಪೂರ್ಣವಾಗಿ ಅರಿತುಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.



ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಬುಧವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕ ಹಾಗೂ ನಿವೃತ್ತ ಮುಖ್ಯ ಅಭಿಯಂತರರಾದ ಶಂಕರ ದೇವನೂರು ಉದ್ಘಾಟಿಸಿದರು.

ಭಾರತದ ಸಮಗ್ರ ಸಾಮಾಜೋ–ಕಾರ್ಮಿಕವನ್ನು ಇತಿಹಾಸವನ್ನು ಅವಲೋಕನ ಮಾಡಿದಾಗ ಅನೇಕ ಧರ್ಮಗಳು ಈ ಜಗತ್ತಿನಲ್ಲಿ ಕಾಣಸಿಗುತ್ತವೆ. ಧರ್ಮ ಎಂದರೆ ಒಳ್ಳೆಯ ನಡವಳಿಕೆ, ದಯೆ, ಮಾನವೀಯತೆ. ಮೃಗೀಯವಾಗಿದ್ದಂತಹ ಮನುಷ್ಯನನ್ನು ಮಾನವತೆಗೆ ಕರೆದೊಯ್ಯುವ ನೆಲೆಯಲ್ಲಿ ಧರ್ಮಗಳು ಮನುಷ್ಯನಿಗೆ ಸಹಕಾರಿಯಾಗಬೇಕಾಗಿತ್ತು. ಆದರೆ ಮತೀಯಗಳಾಗಿ, ಜಾತಿಗಳಾಗಿ ಹಾಗೂ ಜಾತಿಯ ವೃಕ್ಷದ ನೆರಳಿನಲ್ಲಿ ಬದುಕುತ್ತಿದ್ದೇವೆ. ದೇಶದಲ್ಲಿ ಇಂದಿಗೂ ಜಾತಿ ವ್ಯವಸ್ಥೆ ನಿಂತಿಲ್ಲ. ಗುಜರಾತ್‌ನಲ್ಲಿ ಜಡ್ಜ್ ಒಬ್ಬರು ತಮ್ಮ ಹಿಂದೆ ದಲಿತ ಲಾಯರ್ ಕುಳಿತಿದ್ದ ಎಂಬ ಕಾರಣಕ್ಕೆ ಹಸುವಿನ ಗಂಜಲ ಹಾಕಿ ಶುದ್ಧಿ ಮಾಡಿದ್ದಾರೆ. ದಲಿತರಿಗೆ ಹಸುವಿನ ಹಾಲನ್ನು ಕೊಡುವುದಿಲ್ಲ. ಕಾರಣ ದಲಿತರಿಗೆ ಹಾಲು ಕೊಟ್ಟರೆ ಹಸು ಕಡಿಮೆ ಹಾಲನ್ನು ಕೊಡುತ್ತದೆ ಎಂಬ ಮೂಢ ನಂಬಿಕೆಯಲ್ಲಿದ್ದಾರೆ. ಇದನ್ನು ಕಣ್ಣಾರೆ ಕಂಡಿದ್ದೇನೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತವು ಸ್ವಾತಂತ್ರ್ಯಗೊಳ್ಳುವುದರೊಂದಿಗೆ ಭರತ ಖಂಡದಲ್ಲಿ ಜನಿಸಿದ ಪ್ರತಿಯೊಬ್ಬರೂ ಕೂಡ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮುಂದೆ ಬರಬೇಕೆಂಬ ದೃಢ ಸಂಕಲ್ಪದಿಂದ ಸಾರ್ವಕಾಲಿಕ ಸಂವಿಧಾನ ಕೊಟ್ಟ ಮಹಾನ್ ಚೇತನ ಡಾ.ಬಿ.ಆರ್.ಅಂಬೇಡ್ಕರ್. ಅವರು ಕಬೀರ್, ಬುದ್ಧ ಹಾಗೂ ಜ್ಯೋತಿಬಾಫುಲೆ ಅವರನ್ನು ಯಾಕೆ ಆದರ್ಶವನ್ನಾಗಿ ತೆಗೆದುಕೊಂಡಿದ್ದರು ಎಂಬುದನ್ನು ತಿಳಿದುಕೊಳ್ಳಬೇಕು. ಶಿಕ್ಷಣ ಪಡೆಯದೆ ಇದ್ದರೆ ಬುದ್ಧಿ ನಾಶವಾಗುತ್ತದೆ, ಬುದ್ಧಿ ನಾಶವಾದರೆ ನೈತಿಕತೆ ನಾಶವಾಗುತ್ತದೆ. ನೈತಿಕತೆ ನಾಶವಾದರೆ ಕ್ರಿಯಾಶೀಲತೆ ನಾಶವಾಗುತ್ತದೆ. ಕ್ರಿಯಾಶೀಲತೆ ನಾಶವಾದರೆ ವ್ಯಕ್ತಿ ಮೌಢ್ಯಕ್ಕೆ ದಾಸನಾಗುತ್ತಾನೆ ಎಂದು ಅರಿತ ಜ್ಯೋತಿ ಬಾಫುಲೆ ಹಿಂದುಳಿದವರಿಗೆ, ಅಸ್ಪೃಶ್ಯರಿಗೆ ಹಾಗೂ ಸ್ತ್ರೀಯರಿಗೂ ಶಿಕ್ಷಣ ನೀಡಲು ಮುಂದಾಗಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊಎಸ್.ಮಹದೇವ ಮೂರ್ತಿ, ಜ್ಞಾನವಾಹಿನಿಯ ಸಂಚಾಲಕರಾದ ಜಿ.ಕೃಷ್ಣಮೂರ್ತಿ, ಐಕ್ಯೂಎಸಿ ಸಂಯೋಜಕರಾದ ಪ್ರೊ.ಬಿ.ಎಂ.ವೆಂಕಟೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಸಿ.ನಾಗೇಶ್ ಬಾಬು ಹಾಗೂ ಆಡಳಿತಾಧಿಕಾರಿ ಪ್ರೊ.ಕೆ. ಅಜಯ್ ಕುಮಾರ್ ಉಪಸ್ಥಿತರಿದ್ದರು.

ಸಾಧಕರ ಸಂದೇಶಗಳ ಸಮಾಜಕ್ಕೆ ತಿಳಿಸಲು ಜಯಂತಿಗಳ ಆಚರಣೆ

ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಅಭಿಮತ



ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜು ಮಾತನಾಡಿದರು.

ಮೈಸೂರು, ಏ.16– ವಿವಿಧ ಜಯಂತಿಗಳನ್ನು ಅರ್ಥಪೂರ್ಣವಾಗಿ ಹಾಗೂ ಸಾಧಕರ ಸಂದೇಶಗಳನ್ನು ಸಮಾಜಕ್ಕೆ ಸಾರುವ ಸಲುವಾಗಿ ಜಯಂತಿಗಳ ಆಚರಣೆ ಮಾಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜು ತಿಳಿಸಿದರು

ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಿವಿಧ ಜಯಂತಿಗಳಾದ ಶಂಕರಾಚಾರ್ಯ ಜಯಂತಿ, ಭಗೀರಥ ಜಯಂತಿ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಗಳ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೇ 2 ರಂದು ಶಂಕರಾಚಾರ್ಯ ಜಯಂತಿಯನ್ನು ಕಲಾಮಂದಿರದ ಕಿರು ರಂಗಮಂದಿರದಲ್ಲಿ ಆಚರಿಸಲಿದ್ದು, ಬೆಳಗ್ಗೆ 10 ಗಂಟೆಯಿಂದ ಗೀತಾ ಗಾಯನ ಏರ್ಪಡಿಸಲಾಗುವುದು. ಬೆಳಗ್ಗೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮವಿರುತ್ತದೆ. ಮೇ 4 ರಂದು ಭಗೀರಥ ಜಯಂತಿಯನ್ನು ಕರ್ನಾಟಕ ಕಲಾಮಂದಿರದಲ್ಲಿ ಬೆಳಗ್ಗೆ 11.30 ಗಂಟೆಗೆ ಆಚರಿಸಲಾಗುವುದು. ಬೆಳಗ್ಗೆ 10.30 ಗಂಟೆಯಿಂದ ವೇದಿಕೆ ಮೇಲೆ ಗೀತಾ ಗಾಯನವಿರುತ್ತದೆ. ಅಂದು ಬೆಳಗ್ಗೆ 9.30 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಮೆರವಣಿಗೆ ಪ್ರಾರಂಭವಾಗಲಿದೆ. ಮೇ 10 ರಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಕಿರು ರಂಗಮಂದಿರದಲ್ಲಿ ಬೆಳಗ್ಗೆ 11.30 ಗಂಟೆಗೆ ಆಚರಣೆ ಮಾಡಲಾಗುವುದು. ಅಂದು ಬೆಳಗ್ಗೆ 10 ಗಂಟೆಯಿಂದ ಗೀತಾ ಗಾಯನ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ಜಯಂತಿಗಳ ಆಚರಣೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದವರು ಸೇರಿ ಜಯಂತಿಗಳ ಆಚರಣೆ ಮಾಡಬೇಕು. ಇದರ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದಾಗಿದೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಸೇರಿದಂತೆ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಜಯಂತಿ ಆಚರಣೆಯ ಸಂಬಂಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಮಹಿಳೆ ನಾಪತ್ತೆ

ಮೈಸೂರು,ಏ.16– ಏಪ್ರಿಲ್ 11 ರಂದು ಸುಮಾರು 34 ವರ್ಷದ ನಾಗವೇಣಿ ಎಂಬುವವರು ಕಾಣೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾಗವೇಣಿ ಬಿನ್ ಗಿರಿಮಲ್ಲಯ್ಯ ಇವರಿಗೆ ಮಾತು ಬರುವುದಿಲ್ಲ, ಸುಮಾರು 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಗೋಧಿ ಬಣ್ಣ, ಎಡ ಗೈ ಮೇಲೆ ವಿಶಾಲಿ ಎಂದು ಹಸಿರು ಹಚ್ಚೆ ಹಾಕಿಸಿಕೊಂಡಿರುತ್ತಾರೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ಮಿಶ್ರಿತ ಹಳದಿ ಬಣ್ಣದ ಟಾಪ್ ಮತ್ತು ಕಾಫಿ ಕಲರ್ ಪ್ಯಾಂಟ್, ವೇಲು ಧರಿಸಿರುತ್ತಾರೆ. ಕಾಣೆಯಾದ ಮಹಿಳೆಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಎಸ್.ಪಿ ಕಚೇರಿ ದೂ.ಸಂ: 2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ:2444800 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೆಮ್ಮದಿಯ ಬದುಕಿಗೆ ಅಂಬೇಡ್ಕರ್ ಚಿಂತನೆಗಳು ಪೂರಕ

ಮಾಜಿ ಶಾಸಕ ಸೋಮಶೇಖರ್ ಅಭಿಪ್ರಾಯ

ಮೈಸೂರು, ಏ.16(ಬಿಎಲ್‌ಯು)– ದೇಶದ ಸಮಸ್ತ ಜನತೆ ನೆಮ್ಮದಿಯಿಂದ ಬದುಕು ಕಟ್ಟಿಕೊಳ್ಳಲು ಅಂಬೇಡ್ಕರ್ ಅವರ ಚಿಂತನೆಗಳು ಪೂರಕವಾಗಿವೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಪ್ರಾಯಪಟ್ಟರು.

ನಗರದ ವಿದ್ಯಾರಣ್ಯಪುರಂನ ಹೊಸ ಇಟ್ಟಿಗೆಗೂಡು ಬಡಾವಣೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಂಘ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿಯಲ್ಲಿ ನೂರೆಂಟು ಅವಮಾನಗಳನ್ನು ಅನುಭವಿಸಿದರೂ ಯಾರನ್ನು ದ್ವೇಷಿಸದೆ ಸಮಾಜದ ಹಿತಕ್ಕಾಗಿ ಚಿಂತನೆ ಮಾಡಿದ ಮಹಾನ್ ಮಾನವತಾವಾದಿ ಎಂದು ಹೇಳಿದರು.

ಅಂಬೇಡ್ಕರ್ ಅವರು ಹುಟ್ಟದಿದ್ದರೆ ಭಾರತ ದೇಶದ ಪರಿಸ್ಥಿತಿ ಊಹಿಸಲು ಸಾಧ್ಯ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟ ಸೋಮಶೇಖರ್ ಅವರು, ಭಾರತದ ಇತಿಹಾಸದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನರು ತ್ಯಾಗ ಮಾಡಿದ್ದಾರೆ. ಆದರೆ ನಮ್ಮ ದೇಶದ ಸಾಮಾಜಿಕ ಸ್ವಾತಂತ್ರ್ಯ ಹಾಗೂ ಸಮಾನತೆಗಾಗಿ ಹೋರಾಟ ನಡೆಸಿದ ಏಕೈಕ ವ್ಯಕ್ತಿ ಎಂದರೆ ಅದು ಅಂಬೇಡ್ಕರ್ ಎಂದು ಹೇಳಿದರು.



ಮೈಸೂರಿನ ವಿದ್ಯಾರಣ್ಯಪುರಂನ ಹೊಸ ಇಟ್ಟಿಗೆಗೂಡು ಬಡಾವಣೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಘ, ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮ ಆಯೋಜಿಸಿತ್ತು.

ಅಂಬೇಡ್ಕರ್ ಅವರ ಪಾಂಡಿತ್ಯಕ್ಕೆ ವಿಶ್ವವೇ ಪ್ರಶಂಸೆ ವ್ಯಕ್ತಪಡಿಸಿರುವ ಕಾರಣ ಭಾರತೀಯರಾದ ನಾವು ಹೆಮ್ಮೆ ಪಡಬೇಕಾದ ವಿಷಯ ಎಂದು ಸೋಮಶೇಖರ್ ತಿಳಿಸಿದರು. ಮಾಜಿ ಉಪ ಮೇಯರ್ ಬಿ.ಸಿದ್ದರಾಜು, ಮಾಜಿ ಕಾರ್ಪೊರೇಟರ್‌ಗಳಾದ ಎಂ.ಸುನೀಲ್, ಶೋಭಾ, ಮುಖಂಡರಾದ ಜೋಗಿ ಮಹೇಶ್, ಎಸ್.ಶಂಕರ್, ರಾಜಣ್ಣ, ಶ್ರೀಕಂಠ, ಶಶಿಕಾಂತ್, ಮಂಜು, ವೆಂಕಟರಾಜು, ಮೋಹನ್, ಪರಮೇಶ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

2025–26ನೇ ಸಾಲಿಗೆ ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ

ಮೈಸೂರು, ಏ.16– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಾಸಾಶನ ಪಡೆಯುತ್ತಿರುವ ಜಿಲ್ಲೆಯ ಕಲಾವಿದರು, ಸಾಹಿತಿಗಳು ಹಾಗೂ ವಿಧವಾ ಮಾಸಾಶನ ಪಡೆಯುತ್ತಿರುವವರು 2025–26ನೇ ಸಾಲಿಗೆ ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸಬೇಕಾಗುತ್ತದೆ. ಮಾಸಾಶನ ಪಡೆಯುತ್ತಿರುವವರು ತಮ್ಮ ಪಿಂಚಣಿ ಪುಸ್ತಕದ ಪಿಪಿಓ ಪ್ರತಿ, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯ ಮೂಲ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಮೈಸೂರು ಇಲ್ಲಿಗೆ ಆಗಮಿಸಿ ಜೀವಿತಾವಧಿ ಪ್ರಮಾಣ ಪತ್ರದ ಪ್ರತಿಯನ್ನು ಪಡೆದು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಏ.29ರಂದು ಸಂಜೆ 5.30ರೊಳಗೆ ಮರು ಅರ್ಜಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂ. 0821–2513225 ಅನ್ನು ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಬ್ರಹ್ಮಣ್ಯರಿಗೆ ಹುಟ್ಟುಹಬ್ಬದ ಶುಭಾಶಯಗಳು



ಮೈಸೂರು ಪಾಲಿಕೆ ವಾರ್ಡ್ ನಂಬರ್ 23ರ ಸ್ನೇಹಿತರ ಬಳಗದ ವತಿಯಿಂದ ಕರ್ನಾಟಕ ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಕೊಲ್ಲಾಪುರದಮ್ಮನ ದೇವಸ್ಥಾನದ ಅಧ್ಯಕ್ಷ ನಾಗರಾಜ್, ರಾ. ಪರಮೇಶ ಗೌಡ, ಸಂದೀಪ್, ಕಿರಣ್, ಪ್ರಮೋದ್, ಡಿಪ್ಪೋ ಆನಂದ್, ಶ್ರವಣ್ ಮಾಲಿ, ನಾಗರಾಜ್, ನಾಗೇಶ್ ಯಾದವ್, ಶ್ರೀನಿವಾಸ್, ಮಹಾದೇವ ಪಾಂಡೆ, ಮಲ್ಲ, ಬೆಳಕು ಮಂಜು, ಯೋಗಾನಂದ ಮತ್ತಿತರರು ಹಾಜರಿದ್ದರು.

ಶ್ರೀ ಕೃಷ್ಣಧಾಮದಲ್ಲಿ ಉಚಿತ ಸಾಮೂಹಿಕ ಉಪನಯನ

ವೇದ ಮಂತ್ರಗಳು ವ್ಯಕ್ತಿ ಜೀವನದ ಸಮಗ್ರ ಚಿತ್ರಣವನ್ನು ನೀಡಬಲ್ಲವು: ರವಿ ಶಾಸ್ತ್ರಿ



ಮೈಸೂರಿನ ಕೃಷ್ಣಧಾಮದಲ್ಲಿ ಉಚಿತ ಸಾಮೂಹಿಕ ಉಪನಯನ ನಡೆಯಿತು.

ಮೈಸೂರು, ಏ. 16– ನಗರದ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಬುಧವಾರ ಟಿ.ಕೆ ಲೇಔಟ್‌ನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಉಚಿತ ಸಾಮೂಹಿಕ ಉಪನಯನ ನಡೆಯಿತು.

ಬೆಳಗ್ಗೆ 6 ಗಂಟೆಗೆ ಪ್ರಾರಂಭವಾಗಿ 10:15 ಗಂಟೆಗೆ ಬ್ರಹ್ಮೋಪದೇಶ ನೆರವೇರಿಸಲಾಯಿತು. ನಂತರ ವಟುಗಳಿಂದ ಶೋಭಾಯಾತ್ರೆ ಮತ್ತು ಅಶ್ವತ್ಥ ಪೂಜೆ ನೆರವೇರಿಸಲಾಯಿತು,

ಈ ವೇಳೆ ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ಮಾತನಾಡಿ, ತ್ರಿಮತಸ್ಥ ವಿಪ್ರ ಸಮುದಾಯದವರ ಅನುಕೂಲಕ್ಕಾಗಿ ಹಲವಾರು ವರ್ಷಗಳಿಂದ ಈ ಉಚಿತ ಉಪನಯನ ನಡೆಸಿಕೊಂಡು ಬರಲಾಗಿದೆ ಎಂದರು. ವೇದವೆಂದರೆ ಜ್ಞಾನ, ಸಂಸ್ಕೃತಿ, ಪರಂಪರೆಗೆ ಸಾಕ್ಷಿ. ಭಾರತ ಮಾತ್ರವಲ್ಲ; ವಿಶ್ವಮಟ್ಟದಲ್ಲೂ ಮಾನ್ಯತೆ ಗಳಿಸಿದೆ. ವೇದ ಮಂತ್ರಗಳು ವ್ಯಕ್ತಿ ಜೀವನದ ಸಮಗ್ರ ಚಿತ್ರಣವನ್ನು ನೀಡಬಲ್ಲವು ಎಂದು ಹೇಳಿದರು.

ವಿದ್ವಾನ್ ಸುರೇಶ್ ಭಟ್ ನೂತನ ವಟುಗಳಿಗೆ ಮಾರ್ಗದರ್ಶನ ನೀಡಿ, ಉಪನಯನದ ಮಹತ್ವ ತಿಳಿಸಿಕೊಟ್ಟರು.

ಪಿ.ಎಸ್. ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್, ಮಿತ್ರ ಮಂಡಳಿ ಅಧ್ಯಕ್ಷರಾದ ಪ್ರವೀಣ್, ಕಾರ್ಯದರ್ಶಿ ರಾಘವೇಂದ್ರ, ಸುಬ್ರಹ್ಮಣ್ಯ ತಂತ್ರಿ, ವಿಜೇಂದ್ರ, ಕಿರಣ್ ತಂತ್ರಿ, ಪದ್ಮನಾಭ ಭಟ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ಹಾಗೂ ವಟುಗಳ ಪೋಷಕರು, ವಿಪ್ರರು ಹಾಜರಿದ್ದರು.

ಭೋವಿ ಅಭಿವೃದ್ಧಿ ನಿಗಮ ಅಕ್ರಮ: ಕೆಬಿಡಿಸಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಇಡಿ ಕಸ್ಟಡಿಗೆ

ನವದೆಹಲಿ, ಏ.16– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ(ಕೆಬಿಡಿಸಿ)ದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇಡಿ) ಬುಧವಾರ ಮತ್ತೊಬ್ಬರನ್ನು ಬಂಧಿಸಿದೆ.



ಆರ್.ಲೀಲಾವತಿ

ಕೆಬಿಡಿಸಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಆರ್.ಲೀಲಾವತಿ ಅವರನ್ನು ಏಪ್ರಿಲ್ 12 ರಂದು ವಶಕ್ಕೆ ಪಡೆಯಲಾಗಿದೆ. ಬೆಂಗಳೂರಿನಲ್ಲಿ ವಿಶೇಷ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಿ, ಇಡಿ ಕಸ್ಟಡಿಗೆ ಪಡೆಯಲಾಗಿದೆ ಎಂದು ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

2018–2023ರ ಅವಧಿಯಲ್ಲಿ ನಿಗಮದ ಖಾತೆಯಿಂದ ಅಕ್ರಮವಾಗಿ 97 ಕೋಟಿ ರೂಪಾಯಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಸಿಐಡಿ ತನಿಖೆ ನಡೆಸುತ್ತಿದ್ದು, ಇ.ಡಿ ಸಹ ತನಿಖೆ ಆರಂಭಿಸಿದೆ. ಭೋವಿ ನಿಗಮದ ಕಚೇರಿ ಸೇರಿದಂತೆ ಹಲವೆಡೆ ಶೋಧ ನಡೆಸಿದ್ದ ಜಾರಿ ನಿರ್ದೇಶನಾಲಯ, ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಬಿ.ಕೆ.ನಾಗ ರಾಜಪ್ಪ ಅವರನ್ನು ಬಂಧಿಸಿತ್ತು. ನಾಗರಾಜಪ್ಪ ಸದ್ಯ ತನಿಖಾ ಸಂಸ್ಥೆಯ ವಶದಲ್ಲಿದ್ದಾರೆ.

ನಾಗರಾಜಪ್ಪ, ಸುಬ್ಬಪ್ಪ (ಆಗ ಕೆಬಿಡಿಸಿಯ ಸೂಪರಿಂಟೆಂಡೆಂಟ್ ಆಗಿದ್ದರು) ಮತ್ತು ಇತರ ಶಂಕಿತರು/ ಆರೋಪಿಗಳ ಜೊತೆ ಸೇರಿ ಲೀಲಾವತಿ ಅವರು ನಕಲಿ ಸಂಸ್ಥೆಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು, ಅವುಗಳಿಗೆ ಹಣ ವರ್ಗಾವಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಇ.ಡಿ ಹೇಳಿದೆ.


ಮೊದಲಿಗೆ ಕೆಬಿಡಿಸಿಯಿಂದ ಆ ನಕಲಿ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ನಂತರ ಆ ಹಣವನ್ನು ಆರೋಪಿಗಳು ಮತ್ತು ಇತರ ಶಂಕಿತ ವ್ಯಕ್ತಿಗಳ ಸ್ನೇಹಿತರು ಮತ್ತು ಕುಟುಂಬ ಸದಸ್ಯರಿಗೆ ವರ್ಗಾಯಿಸಿದ್ದಾರೆ ಎಂದು ಏಜೆನ್ಸಿ ತಿಳಿಸಿದೆ.

ನಾಗರಾಜಪ್ಪ, ಲೀಲಾವತಿ, ಸುಬ್ಬಪ್ಪ ಮತ್ತು ಇತರರು ಯಾರಿಗೂ ಅನುಮಾನ ಬಾರದ ಮತ್ತು ತಿಳಿಯದ ರೀತಿಯಲ್ಲಿ ಹಲವಾರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದಾರೆ ಮತ್ತು ಅನೇಕ ಫಲಾನುಭವಿಗಳನ್ನು ವಂಚಿಸಿದ್ದಾರೆ ಎಂದು ಇಡಿ ಆರೋಪಿಸಿದೆ.

ಲೀಲಾವತಿ ಈ ಹಣವನ್ನು ತಮ್ಮ ದಿವಂಗತ ಸಹೋದರಿ ಮಂಗಳಾ ರಾಮು ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ. ನಂತರ, ಅವರು ಈ ಹಣವನ್ನು ತಾವೇ ತೆರೆದ ನಕಲಿ ಸಂಸ್ಥೆಗಳ ಮೂಲಕ ತಮ್ಮ ಸ್ನೇಹಿತರು ಮತ್ತು ಕುಟುಂಬ ಸದಸ್ಯರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿದ್ದಾರೆ ಎಂದು ಇಡಿ ಹೇಳಿದೆ.

ಕೆಬಿಡಿಸಿಯಿಂದ 97 ಕೋಟಿ ರೂ. ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಕರ್ನಾಟಕ ಪೊಲೀಸರು ಎಫ್ಐಆರ್‌ಗಳನ್ನು ದಾಖಲಿಸಿಕೊಂಡಿದ್ದಾರೆ. ಅದರ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡು ಇ.ಡಿ ತನಿಖೆ ಆರಂಭಿಸಿದೆ.









Sri Adhishakthi Green Grow Nutrients Private Limited

Marketing of 100% water Soluble Mixture OF Fertilizers

As per the provisions of S.O.2900(E) dated 24th October 2015 in FCO 1985 issued by ministry of Agriculture and Farmers Welfare, New Delhi, we intend to market the following Self Manufactured 100% water soluble mixture of Fertilizers in Karnataka State

01) NPK 19-19-19 , 02) NPK 13-40-13, 03) NPK 20-20-20,
04) NPK 18-18-18 05) NPK 14-40-5, 06) NPK 15-05-35,
07) NPK 13-05-26, 08) NPK 06-12-36 09) NPK 11-44-11,
10) NPK 16-8-32

Sri Adhishakthi Green Grow Nutrients Private Limited
Plot No. 122, B-2, Kadakola MYS MD 13,
Industrial Area, Mysore, Kadakola, KARNATAKA - 571311
Email: adhishakthigreengrownutrients@gmail.com phone: 9740005066

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ನಿಂಗಮ್ಮ (ಸುನೀತ)

ಇವರು ದಿನಾಂಕ 07-04-2025ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 17-04-2025ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮರುಳೇಶ್ವರ ದೇವಸ್ಥಾನದ ಹಿಂಭಾಗ, ಕಾವೇರಿ ಶಾಲೆ ಎದುರು ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಮೃತರ ಗಂಡುಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು, ಮೊಮ್ಮಕ್ಕಳು, ತಮ್ಮಂದಿರು, ಅಕ್ಕತಂಗಿಯರು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.
ಭೋಜನ: ಮಧ್ಯಾಹ್ನ 12 ಗಂಟೆಗೆ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಮುರಳೀಧರ ರವರ ಪತ್ನಿ ಶ್ರೀಮತಿ ಪಿ. ಭಾಗ್ಯಲಕ್ಷ್ಮಿ ರವರು, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಆಪೇಕ್ಷಿಸಿರುತ್ತಾರೆ ಮತ್ತು ಸದರಿ ಶ್ರೀಮತಿ. ಪಿ. ಭಾಗ್ಯಲಕ್ಷ್ಮಿರವರು ದಿನಾಂಕ 22–07–1999ರ ಮೂಲ ಕ್ರಯಪತ್ರವನ್ನು ಕಳೆದು ಕೊಂಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ಪೋಲೀಸ್ ಠಾಣೆಯಲ್ಲಿ ದಿನಾಂಕ 22–03–2025ರಂದು ದೂರು ದಾಖಲು ಮಾಡಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ– ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಸಿದ್ಧಾರ್ಥ ನಗರ, 2ನೇ ಹಂತ, 4ನೇ ಮುಖ್ಯರಸ್ತೆ, ನೀತಿಮಾರ್ಗ, ಮನೆ ನಂ. 375, (as per e-Khatha Property No. 63-3-593-250), ಪಿ.ಐ.ಡಿ. ನಂ. 122188 & ವಾರ್ಡ್ ನಂ. 53 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 45 ಅಡಿ ಮತ್ತು ಉತ್ತರ–ದಕ್ಷಿಣ: (49 ಅಡಿ + 54 ಅಡಿ)/2, ಒಟ್ಟು ವಿಸ್ತೀರ್ಣ: 215.3027025 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ಸ್ವತ್ತಿನ ನಂ. 376 , ಪಶ್ಚಿಮಕ್ಕೆ – ಸ್ವತ್ತಿನ ನಂ. 374, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ ಖಾಸಗಿ ಸ್ವತ್ತು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1416,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು. ಮೊ: 9844640641,
email: sldlawfirm2021@gmail.com

AFFIDAVIT

I AKASH M GURUKAR Residing at # 15th Ward, A B Vajpayee Road Gurukar Garden B Block, KR Nagara Town, Mysore District-571602. I have changed my Father's Name from MAHADEVA R G to MAHADEV R G vide Affidavit Dt: 15/04/2025 Before Notary C.K. Manjunatha KR Nagar. Sd/- AKASH M GURUKA

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಆಲನಹಳ್ಳಿ, ನೇತಾಜಿನಗರ 2ನೇ ಕ್ರಾಸ್, 4ನೇ ಮೈನ್‌ನಲ್ಲಿರುವ ಮನೆ ನಂ. 145ರಲ್ಲಿ ವಾಸವಾಗಿರುವ ವೆಂಕಟಗಿರಿಯಪ್ಪ, ಎಸ್. ಬಿನ್ ವೆಂಕಟರಾಮಯ್ಯ ಮತ್ತು ಶ್ರೀಮತಿ ಸುಕನ್ಯಾ ಕೋಂ ವೆಂಕಟಗಿರಿಯಪ್ಪ, ಎಸ್. ಇವರು ಮೈಸೂರು ಜಿಲ್ಲೆ, ಜಯಪುರ ಹೋಬಳಿ, ಕೀರ್ಗಳ್ಳಿ ಗ್ರಾಮದ ಸರ್ವೇ ನಂ. 240/*/22ರ ವಿಸ್ತೀರ್ಣ 15.00ಗುಂಟೆ ಜಮೀನನ್ನು ಜಿತೇಂದ್ರವರ್ಮ ಬಿನ್ ಲೇಟ್. ಐ. ಎಸ್. ವರ್ಮ ಇವರಿಂದ ಖರೀದಿಸುತ್ತಿದ್ದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಗೆ ಯಾರಿಗಾದರೂ ಹಕ್ಕು, ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆಯ ದಿನದಿಂದ ಒಂದು ವಾರದ (7 ದಿನಗಳ) ಒಳಗಾಗಿ ತಾವಾಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲೀ ತಮಗಿರುವ ಹಕ್ಕು ಮತ್ತು ಹಿತಾಸಕ್ತಿಯನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸಬಹುದಾಗಿದೆ.

ಇಂದ: ಡಿ. ಜಗದೀಶ್, ವಕೀಲರು, ನಂ.448, ಹೊಸ ನಂ.ಎಫ್–5, ಎಸ್.ಬಿ. ಎನ್ – ಕಾಂಪ್ಲೆಕ್ಸ್, 1ನೇ ಮಹಡಿ, ಬ್ರೈನ್ ಆಂಡ್ ಸ್ಪೈನ್ ಕ್ಲಿನಿಕ್ ಪಕ್ಕ, ಎಂ. ಜಿ. ರಸ್ತೆ, ಮೈಸೂರು. ದೂ: 98866 23833

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ-ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/ IND1366	ಒಕ್ಕೂಟಕ್ಕೆ ಅಗತ್ಯವಿರುವ ಸಿ.ಐ.ಪಿ. ಕೆಮಿಕಲ್ (ಕ್ಲೀನಿಂಗ್ ಸೊಲ್ಯೂಷನ್) ಅನ್ನು ದ್ವೈವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	25.04.2025 ಸಂಜೆ 5.00 ಗಂಟೆಯವರೆಗೆ
2	KMF/2025-26/ IND1367	ಒಕ್ಕೂಟಕ್ಕೆ ಅಗತ್ಯವಿರುವ ಗೋಡಂಬಿಯನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	29.04.2025 ಸಂಜೆ 5.00 ಗಂಟೆಯವರೆಗೆ
3	KMF/2025-26/ SE3356	ಮಿಲ್ಕೋ ಸ್ಕ್ರೀನ್ ಯಂತ್ರಗಳ ದ್ವೈವಾರ್ಷಿಕ ನಿರ್ವಹಣೆಯನ್ನು ವಹಿಸಿಕೊಡುವ ಬಗ್ಗೆ.	25.04.2025 ಸಂಜೆ 5.00 ಗಂಟೆಯವರೆಗೆ
4	KMF/2025-26/ SE3355	ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ವಿವಿಧ ಬಿಎಂಸಿ ಕೇಂದ್ರಗಳಲ್ಲಿ ಪೆಸ್ಟ್ ಕಂಟ್ರೋಲ್ ಸೇವೆಯನ್ನು ಮಾಡುವ ಬಗ್ಗೆ.	29.04.2025 ಸಂಜೆ 5.00 ಗಂಟೆಯವರೆಗೆ
5	KMF/2025-26/ IND1368	ಒಕ್ಕೂಟಕ್ಕೆ ಅಗತ್ಯವಿರುವ ಕ್ರೇಟ್ ವಾಷರ್ ಸರಬರಾಜು ಮತ್ತು ಅಳವಡಿಕೆ ಮಾಡುವ ಬಗ್ಗೆ ಹಾಗೂ ಗೀ ಪೆಟ್ ಜಾರ್ ಲೇಬಲ್ಸ್ ಇನ್ ರೋಲ್ಸ್‌ಗಳನ್ನು ಖರೀದಿಸುವ ಬಗ್ಗೆ.	25.04.2025 ಸಂಜೆ 5.00 ಗಂಟೆಯವರೆಗೆ
6	KMF/2025-26/ SE3341	ಎರಡು ವರ್ಷಗಳ ಅವಧಿಗೆ ಒಕ್ಕೂಟದ ವ್ಯಾಪ್ತಿಗೆ ಒಳಪಡುವ ಮೆಗಾ ಡೈರಿ : ಪ್ರಧಾನ ಡೇರಿ : ಶೀಥಲ ಕೇಂದ್ರ : ಉಪ ಕಛೇರಿಗಳು, ಆಲನಹಳ್ಳಿ ಸಂಕೀರ್ಣ, ಹೆಚ್.ಡಿ.ಕೋಟೆ ಐ.ಎಂ.ಸಿ.ಯು ಘಟಕಗಳಿಗೆ ದೈನಂದಿನ ಭದ್ರತಾ ವ್ಯವಸ್ಥೆಗೆ ಮಾನವ ದಿನಗಳ ಆಧಾರಲ್ಲಿ ಭದ್ರತಾ ಪರಿವೀಕ್ಷಕರು / ಭದ್ರತಾ ಮುಖ್ಯರಕ್ಷಕರು / ಭದ್ರತಾ ರಕ್ಷಕರುಗಳನ್ನು ಒದಗಿಸಲು ಗುತ್ತಿಗೆ ಟೆಂಡರ್ ಬಗ್ಗೆ.	02.05.2025 ಸಂಜೆ 5.00 ಗಂಟೆಯವರೆಗೆ
7	KMF/2025-26/ SE3360	ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಹಾಲು ಸ್ವೀಕರಣೆ, ಸಂಸ್ಕರಣೆ ಹಾಗೂ ಹಾಲು & ಹಾಲಿನ ಉತ್ಪನ್ನಗಳ ತಯಾರಿಕೆ, ಪ್ಯಾಕಿಂಗ್, ರವಾನೆ ಕೆಲಸಗಳಿಗೆ ಹಾಗೂ ಮೆಗಾ ಡೈರಿ, ಪ್ರಧಾನ ಡೈರಿ,(ಸಿದ್ಧಾರ್ಥನಗರ), ಹುಣಸೂರು ಶೀಥಲೀಕರಣ ಕೇಂದ್ರ, ಐ.ಎಂ.ಸಿ ಘಟಕ, ಉಪ ಕಛೇರಿಗಳು ಹಾಗೂ ಇನ್ನಿತರೆ ಸ್ಥಳಗಳಿಗೆ ಒಳಾಂಗಣ ಹಾಗೂ ಹೊರಾಂಗಣ ಸ್ವಚ್ಛತೆಗಾಗಿ ಉಪಹಾರ ಗೃಹ ಮತ್ತು ಇತರೆ ಕಛೇರಿ ಕೆಲಸಕ್ಕಾಗಿ ತುಂಡು ಗುತ್ತಿಗೆ / ಮಾನವ ದಿನಗಳ ಆಧಾರದಲ್ಲಿ ಗುತ್ತಿಗೆ ಕಾರ್ಮಿಕರನ್ನು ದ್ವೈವಾರ್ಷಿಕ ಅವಧಿಗೆ ಪ್ರತಿ ಕೆ.ಜಿ/ಲೀ / ಮಾನವ ದಿನಗಳ ಆಧಾರದಲ್ಲಿ ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಸೇವಾ ಗುತ್ತಿಗೆ ಪಡೆಯಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	15.05.2025 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಮೈಸೂರು ಮಹಾನಗರ ಪಾಲಿಕೆ

ವಲಯ ಆಯುಕ್ತರವರ ಕಛೇರಿ
ವಲಯ ಕಛೇರಿ–೦೫
ಬಸವನಗುಡಿ ವೃತ್ತ ಹೆಬ್ಬಾಳು ಮೈಸೂರು
ಆರ್ 5(2)/ಪಿ.ಆರ್.635/2024–25

ಸಾರ್ವಜನಿಕರ ಪ್ರಕಟಣೆ

ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆ ನಡವಳಿ ಸಂಖ್ಯೆ 102/ 76–77 ದಿನಾಂಕ: 15.06.1976ರಲ್ಲಿ ಕ್ರಮ ಸಂಖ್ಯೆ 151ರಲ್ಲಿ ಶ್ರೀ ತಿಮ್ಮೇಗೌಡ ಬಿನ್ ನರಸೇಗೌಡ ಇವರಿಗೆ ಮೈಸೂರು ನಗರದ ಕುಂಬಾರಕೊಪ್ಪಲಿನ 60 ಅಡಿ ರಸ್ತೆಯಲ್ಲಿರುವ ಆರ್ ಬ್ಲಾಕ್ ನಲ್ಲಿರುವ ನಿವೇಶನ ಸಂಖ್ಯೆ 06 ಅಳತೆ ಪೂರ್ವ ಪಶ್ಚಿಮ 50 ಅಡಿ ದಕ್ಷಿಣೋತ್ತರ 80 ಅಡಿ ಮಂಜೂರು ಮಾಡಲಾಗಿದ್ದು, ಮಾನ್ಯ ಆಯುಕ್ತರಿಂದ ಹಕ್ಕು ಪತ್ರ ಸಹ ನೀಡಲಾಗಿದ್ದು, ಶ್ರೀ ತಿಮ್ಮೇಗೌಡ ರವರು ಅಂದಿನ ಸಮಯದಲ್ಲಿ ಉಪನೋಂದಣಿಧಿಕಾರಿರವರ ಕಛೇರಿಯಲ್ಲಿ ನೋಂದಾಯಿಸಿ ಕೊಂಡಿರುವುದಿಲ್ಲ ನಂತರದಲ್ಲಿ ಶ್ರೀ ತಿಮ್ಮೇಗೌಡರು ದಿನಾಂಕ: 20.11.2005ರಂದು ಮರಣ ಹೊಂದಿದ್ದು, ಸದರಿಯವರು ಅವರ ಜೀವಿತ ಕಾಲದಲ್ಲಿ ಶ್ರೀ ಕೃಷ್ಣ (ಮಗ) ಇವರಿಗೆ ವಿಲ್ ಯಾ ಮರಣ ಶಾಸನ ನೊಂದಣಿ ಮಾಡಿಸಿದ್ದ ಆಧಾರದ ಮೇಲೆ ಶ್ರೀ ಕೃಷ್ಣರವರಿಗೆ ಖಾತೆ ವರ್ಗಾಯಿಸಲಾಗಿತ್ತು. ಪ್ರಸ್ತುತ ಶ್ರೀ ಕೃಷ್ಣರವರು ಹಕ್ಕು ಪತ್ರವನ್ನು ಕೋರಿದ್ದು, ದಿನಾಂಕ: 15.03.2025ರಂದು ಮಾನ್ಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿ ಸಂಖ್ಯೆ: 53–288ರಲ್ಲಿ ಹಕ್ಕು ಪತ್ರ ನೀಡಲು ನಿರ್ಣಯಿಸಲಾಗಿರುತ್ತದೆ. ಆದ್ದುದರಿಂದ ಶ್ರೀ ಕೃಷ್ಣರವರಿಗೆ ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ ನೀಡಲು ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪತ್ರಿಕೆಯಲ್ಲಿ ಪ್ರಚುರಗೊಂಡ ದಿನಾಂಕದಿಂದ 07 ದಿನಗಳೊಗಾಗಿ ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ–05ರಲ್ಲಿ ಸಲ್ಲಿಸಬಹುದಾಗಿರುತ್ತದೆ.

ಸಹಿ/– ವಲಯ ಆಯುಕ್ತರು, ವಲಯ ಕಛೇರಿ–೦೫
ಮೈಸೂರು ಮಹಾನಗರ ಪಾಲಿಕೆ ಮೈಸೂರು.

केन्द्रीय रेशम उत्पादन अनुसंधान एवं प्रशिक्षण संस्थान

Central Sericultural Research & Training Institute
[Central Silk Board - Min. of Textiles - Govt. of India]
Manandavadi Road, Srirampura, Mysore - 570 008
Date: 16/04/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 03/05/2025 at Central Sericultural Research and Training Institute, Srirampura, Mysuru - 570 008 as shown below:

'A' 01 (One) Project Assistant (PA) purely on contract basis under CSB approved Project "Mitigating Human Animal Conflicts in Forest Fringe Village: Implementing Mulberry based cropping program for animal repellents" (PIC01044SNC) for a period Up to May 2026 or completion of project whichever is earlier under CSB Terms and Conditions.

Qualifications for Project Assistant (PA): B.Sc or B.Sc + PGD with minimum 55% marks (50% for SC/ST candidates).

Desirable qualifications: Candidate with experience in Mulberry cultivation will be preferred.

Walk-In-Interview will be held on 03/05/2025, time 10.30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director CSR &TI, Mysuru

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ ಸಿಎಫ್‌ಟಿಆರ್‌ಐ ಶಾಲೆ, ಸಿಎಫ್‌ಟಿಆರ್‌ಐ ಆವರಣ, ಯಾದವಗಿರಿ, ಮೈಸೂರು–570020

ಟೆಂಡರ್‌ಗಾಗಿ ಆಹ್ವಾನ ದಿನಾಂಕ:-16.04.2025

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆಯು ಸಿಎಫ್‌ಟಿಆರ್‌ಐ ಶಾಲೆಯ ಶಾಲಾ ಆವರಣದಲ್ಲಿರುವ "ನವೀಕೃತ ಶ್ರೀಮತಿ. ಕರೋಲಿನ್ ಪಾರ್ಥಿಯ ಸಭಾಂಗಣದ ವಿದ್ಯುತ್ ಅನುಷ್ಠಾನ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಸಿಪಿಡಬ್ಲ್ಯೂಡಿ, ರೈಲ್ವೆಸ್, ಎಂಇಎಸ್, ಅಂಚೆ ಮತ್ತು ತಂತಿ ಇಲಾಖೆ, ರಾಜ್ಯ ಪಿಡಬ್ಲ್ಯೂಡಿ ಮತ್ತು ಅರೆ ಸರ್ಕಾರಿ ಅಥವಾ ಸರ್ಕಾರಿ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ ನೋಂದಾಯಿತ ಎಲೆಕ್ಟ್ರಿಕಲ್ ಕ್ಲಾಸ್-I ಸಂಸ್ಥೆಗಳು ಅಥವಾ ಗುತ್ತಿಗೆದಾರರಿಂದ ಕೆಲಸಕ್ಕಾಗಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಸಿಎಫ್‌ಟಿಆರ್‌ಐ ಶಾಲೆಯ ಪ್ರಾಂಶುಪಾಲರಿಂದ ದಿನಾಂಕ:- 17.04.2025 ರಿಂದ 28.04.2025 ರವರೆಗೆ ಕಛೇರಿ ಸಮಯದಲ್ಲಿ ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.30 ರವರೆಗೆ ಸಂಗ್ರಹಿಸಬಹುದು. ಟೆಂಡರ್ ದಾಖಲೆಗಳನ್ನು ದಿನಾಂಕ:-18.04.2025, 20.04.2025 ಮತ್ತು 27.04.2025 (ಸರ್ಕಾರಿ ರಜೆ ಹಾಗೂ ಭಾನುವಾರ) ನೀಡಲಾಗುವುದಿಲ್ಲ ಹಾಗೂ ಸ್ವೀಕರಿಸಲಾಗುವುದಿಲ್ಲ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:-28.04.2025 ಸಂಜೆ 4.00 ಗಂಟೆಯವರೆಗೆ.
ಟೆಂಡರ್ ತೆರೆಯುವ ದಿನಾಂಕ:- 29.04.2025 ಬೆಳಗ್ಗೆ 10.30 ಗಂಟೆಗೆ.

ಸಹಿ/– ಗೌರವ ಕಾರ್ಯದರ್ಶಿಗಳು
ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು

केन्द्रीय रेशम उत्पादन अनुसंधान एवं प्रशिक्षण संस्थान

Central Sericultural Research & Training Institute
[Central Silk Board - Min. of Textiles - Govt. of India]
Manandavadi Road, Srirampura, Mysore - 570 008
Date: 16/04/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 02/05/2025 at Central Sericultural Research & Training Institute, Srirampura, Mysuru - 570008 as Shown Below 'A' 01 (One) Project Assistant (PA) purely on contract basis under CSB approved Project "Synthesis and characterization of nano-fertilizers and their evaluation in Mulberry cultivation" (PIN0142SNC) for a period Up to February 2027 or completion of project whichever is earlier under CSB Terms and Conditions.

Qualifications for Project Assistant (PA): Full time B.Sc in Agriculture /Life Sciences/Chemical Science) with minimum 55% marks (50% for SC/ST candidates).

Desirable qualifications: Preference will be given to the candidates having higher qualification and / or work experience in Soil Science /Agronomy/ Chemistry/ Bio chemistry/ Sericulture.

Walk-In-Interview will be held on 02/05/2025, time 10:30 AM (candidates should reach the venue by 9:30 AM for verification of documents, other recruitment procedures). Interested can also visit our website www.csr-timys.res.in, https://csb.gov.in/ for details.

Sd/- Director CSR &TI, Mysuru

